ಶತಾವಧಾನಶಂಸನ



ಶತಾವಧಾನಸಮಿತಿ

'ಪದ್ಯಪಾನ'ವನ್ನು ಕುರಿತು

ಸದರಿ ಶತಾವಧಾನಕಾರ್ಯಕ್ರಮವನ್ನು ಪ್ರಾಯೋಜಿಸುತ್ತಿರುವ 'ಪದ್ಯಪಾನ'ವು ಛಂದೋಬದ್ಧ ಕವಿತಾರಚನೆಯನ್ನು ಪ್ರಚುರಗೊಳಿಸುವ ಉದ್ದೇಶದಿಂದ ಪ್ರಾರಂಭವಾದ ಅಂತರ್ಜಾಲ ತಾಣ. ಕಾವ್ಯರಚನಾಸಕ್ತರಿಗೆ, ಕಲಿಕೆಯ ಸಾಮಗ್ರಿಗಳನ್ನು [ವಿಡಿಯೋ ತರಗತಿಗಳು, ಲಿಖಿತಪಾಠಗಳು, ಕಲಿಕೆಗೆ ಅನುಕೂಲವಾಗುವಂತೆ ಆಯ್ದ ಕಾವ್ಯಗಳು ಹಾಗು ಸಾಮಾನ್ಯವಾಗಿ ಪದ್ಯರಚನೆಯಲ್ಲಿ ಉದ್ಭವಿಸುವ ಪ್ರಶ್ನೆಗಳು/ಉತ್ತರಗಳು] ನೀಡುವ ಮೂಲಕ ಮೂಲಭೂತ ತರಬೇತಿಯನ್ನು ನೀಡುವುದರೊಂದಿಗೆ, ಅವರ ರಚನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದಕ್ಕೆ ಮತ್ತು ಇತರರ ಸಲಹೆ-ಸೂಚನೆಗಳನ್ನು ಪಡೆದುಕೊಳ್ಳುವುದಕ್ಕೆ, ಸೂಕ್ತವಾದ ವೇದಿಕೆ ಇದಾಗಿದೆ.

ಪದ್ಯಪಾನದ ಉದ್ದೇಶಗಳು ಇಂತಿವೆ:

೧. ವಿವಿಧಭಾರತೀಯಭಾಷೆಗಳಲ್ಲಿ ಅಭಿಜಾತಗದ್ಯ ಮತ್ತು ಛಂದೋಬದ್ಧಪದ್ಯಗಳ ಕೃಷಿ, ಶಿಕ್ಷಣ, ಪೋಷಣೆ ಮತ್ತು ಪ್ರಾಚುರ್ಯ.

೨. ಕವಿಗಳನ್ನು ಮತ್ತು ಬರಹಗಾರರನ್ನು ಬೆಳೆಸುವ ಪರಿಸರ ನಿರ್ಮಾಣಗೊಳಿಸುವುದು ಮತ್ತು ತನ್ಮೂಲಕ ಭಾರತೀಯಸಾಹಿತ್ಯ ಪ್ರಕಾರಗಳ ಸಮೃದ್ಧಿಯೆಡೆಗೆ ಶ್ರಮಿಸುವುದು.

೩. ಯುವಜನತೆಯಲ್ಲಿ ತಮ್ಮ ತಮ್ಮ ಭಾಷೆಯ ಅಭಿಜಾತಸಾಹಿತ್ಯ ಪ್ರಕಾರಗಳಲ್ಲಿ ಅಭಿರುಚಿ, ಅಭಿಮಾನ ಮತ್ತು ಪ್ರಜ್ಞಾವಂತಿಕೆಯ ವಿಮರ್ಶೆಯೊಂದಿಗೆ ಮೆಚ್ಚುಗೆಯನ್ನು ಮೂಡಿಸುವುದು ಹಾಗೂ ಅವನ್ನು ಅವರ ಜೀವನದಲ್ಲಿ ನೆಲೆಯಾಗಿಸುವುದು.

೪. ಪೂರ್ವಸೂರಿಗಳ ಸಾಹಿತ್ಯದ ಅಧ್ಯಯನದ ಸಂಪ್ರದಾಯವನ್ನು ಸಮಾಜದಲ್ಲಿ ಸ್ಥಾಪಿಸುವುದು.

೫. ಪಾಠಗಳು ಮತ್ತು ಶೈಕ್ಷಣಿಕಸಾಧನಗಳನ್ನು ಅಂತರ್ಜಾಲ, ಆಕಾಶವಾಣಿ, ದೂರದರ್ಶನ, ವಿಚಾರಗೋಷ್ಠಿ, ಉಪನ್ಯಾಸ ಇತ್ಯಾದಿ ವಿವಿಧಮಾಧ್ಯಮಗಳ ಮೂಲಕ ಹಂಚುವುದು ಮತ್ತು ಪ್ರಚುರಗೊಳಿಸುವುದು.

೬. ಅಭಿಜಾತಸಾಹಿತ್ಯ ಪ್ರಕಾರಗಳಲ್ಲಿ ಸ್ಪರ್ಧೆಗಳನ್ನು, ಕವಿಗೋಷ್ಠಿಗಳನ್ನು, ಅವಧಾನಗಳನ್ನು, ಪದ್ಯವಾಚನಸಭೆಗಳನ್ನು, ವ್ಯಾಸಂಗಗೋಷ್ಠಿಗಳನ್ನು ಹಮ್ಮಿಕೊಳ್ಳುವುದು.

ಪದ್ಯಪಾನದ ಚಟುವಟಿಕೆಗಳಿಂದ ಛಂದೋಬದ್ಧಕವಿತೆಯು
ಮತ್ತೆ ಪ್ರಾಮುಖ್ಯ ಪಡೆಯಲಿ, ಬೆಳೆಯಲಿ ಹಾಗೂ ಜನರಿಗೆ ಆನಂದ ತರಲಿ.

ಪದ್ಯಪಾನ (ರಿ)

ಸಂಖ್ಯೆ 166, ಎಮ್. ಸಿ. ಆರ್. ಬಡಾವಣೆ, 18ನೇ ಅಡ್ಡರಸ್ತೆ
ವಿಜಯನಗರ, ಬೆಂಗಳೂರು – 560040
ದೂರವಾಣಿ: +91-80-2340 2001, +91-93425 02001
ಮಿಂಚಂಚೆ: padyapaana@gmail.com
ಜಾಲತಾಣ: www.padyapaana.com

ಶತಾವಧಾನಶಂಸನ

೨೦೧೨

ಸಲಹಾಸಮಿತಿಯ ಸದಸ್ಯರು

- **ಡಾ|| ಎಸ್. ಆರ್. ರಾಮಸ್ವಾಮಿ**
  ಗೌರವ ಸಂಪಾದಕರು, ಉತ್ಥಾನ ಮಾಸ ಪತ್ರಿಕೆ, ಬೆಂಗಳೂರು
- **ಪ್ರೊ. ಪಿ. ವಿ. ಕೃಷ್ಣಭಟ್**
  ವಿಧಾನಪರಿಷತ್ ಸದಸ್ಯರು, ಕರ್ನಾಟಕ
- **ತಿಮ್ಮಪ್ಪ ಭಟ್**
  ಸಂಪಾದಕರು, ವಿಜಯವಾಣಿ ದಿನಪತ್ರಿಕೆ
- **ಶ್ರೀನಿವಾಸ ರಾಜು**
  ಉನ್ನತಿ ಪ್ರಾಜೆಕ್ಟ್ಸ್, ಬೆಂಗಳೂರು

ಸಹಪ್ರಾಯೋಜಕ ಸಂಸ್ಥೆಗಳು

- **ಇನ್ಫೋಸಿಸ್ ಪ್ರತಿಷ್ಠಾನ,** ಬೆಂಗಳೂರು
  www.infosys.com/infosys_foundation/
- **ಅಭಿನವ ಡಾನ್ಸ್ ಕಂಪನಿ,** ಬೆಂಗಳೂರು
  www.abhinavadancecompany.com
- **ಆರ್. ವಿ. ಸಂಸ್ಕೃತ ಅಧ್ಯಯನ ಕೇಂದ್ರ,** ಬೆಂಗಳೂರು
  www.rsst-nmkrvcollege.net/
- **ಧಾತು,** ಬೆಂಗಳೂರು
  www.dhaatu.org

-: ವಿಷಯಸೂಚಿ :-

1. ಶುಭಸಂದೇಶಸಂಗ್ರಹ 1

2 ಭೂಮಿಕೆ - ವಾಸುಕಿ ಎಚ್. ಎ. 11

3. ವಿದ್ವಲ್ಲೋಕದ ವಿಸ್ಮಯ: ಸಂಸ್ಕೃತಿಯ ಪ್ರಹರಿ ಶತಾವಧಾನಿ ಡಾ|| ಆರ್. ಗಣೇಶ್ - ಡಾ|| ಎಸ್. ಆರ್. ರಾಮಸ್ವಾಮಿ 16

4. ಕನ್ನಡದಲ್ಲಿ ಅವಧಾನಕಲೆ
- ವಿದ್ಯಾಲಂಕಾರ ಪ್ರೊ|| ಸಾ. ಕೃ. ರಾಮಚಂದ್ರರಾವ್ 28

5. Shree Ganesh as an Avadhani 32
- Shree Sudheer Krishnaswamy Kesari

6. ಅಲಂಕಾರಶಾಸ್ತ್ರಕ್ಕೆ ಗಣೇಶರ ಕೊಡುಗೆ 36
- ಡಾ|| ಮಹೇಶ್ ಅಡಕೋಳ

7. ಯಕ್ಷ-ಗಣೇಶ 38
- ಶ್ರೀ ದಿವಾಕರ ಹೆಗಡೆ, ಧಾರವಾಡ

8. ನಾ ಕಂಡ ಆರ್. ಗಣೇಶ್ 40
- ಶ್ರೀ ಬಿ. ಆರ್. ಪ್ರಭಾಕರ್

9. ಅವಧಾನಕಲೆ - ಒಂದು ವಿವೇಚನೆ 44
- ಶ್ರೀ ಮತ್ತಕೂರು ರಾಜಣ್ಣ ಚಂದ್ರಮೌಳಿ

10. ಬಹುಮುಖವಿಭೂತಿ ಗಣೇಶ್ 56
- ಡಾ|| ಎಸ್. ರಂಗನಾಥ್

11. ಡಾ|| ಆರ್. ಗಣೇಶ್ ಅವರ ಕೃತಿಗಳು 63

12. ಡಾ|| ಆರ್. ಗಣೇಶ್ ಅವರಿಗೆ ಸಂದ ಕೆಲವು ಗೌರವಗಳು 66

ಶುಭಸಂದೇಶಸಂಗ್ರಹ

ಈ ವರ್ಷ ನವೆಂಬರ್ 30 ರಿಂದ ಡಿಸೆಂಬರ್ 2 ರ ವರೆಗೆ ಬೆಂಗಳೂರಿನಲ್ಲಿ ಶತಾವಧಾನಿ ಡಾ॥ ರಾ. ಗಣೇಶ್ ರವರಿಂದ ಕನ್ನಡದಲ್ಲಿ ಶತಾವಧಾನವು ನಡೆಯಲಿದೆ ಎಂದು ತಿಳಿದು ಜಗದ್ಗುರು ಮಹಾಸ್ವಾಮಿಗಳವರು ತುಂಬಾ ಸಂತೋಷಪಟ್ಟಿದ್ದಾರೆ.

ಅವಧಾನವೆಂಬ ಕಲೆ ನಮ್ಮ ದೇಶದಲ್ಲಿ ಪ್ರಾಚೀನಕಾಲದಿಂದಲೂ ಇದೆ ಎಂದುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಸಂಸ್ಕೃತದಲ್ಲೂ ತೆಲುಗಿನಲ್ಲೂ ತುಂಬಾ ಪ್ರಸಿದ್ಧವಾದ ಈ ಅವಧಾನಕಲೆಯನ್ನು ಕನ್ನಡಕ್ಕೆ ತಂದ ಕೀರ್ತಿ ರಾ. ಗಣೇಶ್ ರವರಿಗೆ ಸಲ್ಲುತ್ತದೆ. ಬಹುಮುಖವಾದ ಪ್ರತಿಭೆ, ಸಾಹಿತ್ಯದಲ್ಲಿ ಭೂರಿಪರಿಶ್ರಮ, ಅಸಾಧಾರಣವಾದ ಸ್ಮರಣಶಕ್ತಿಯುಳ್ಳವರು ಮಾತ್ರ ಇಂತಹ ಸಾಹಸವನ್ನು ಮಾಡಬಲ್ಲವರು. ರಾ. ಗಣೇಶ್‌ರವರಿಗೆ ಇವೆಲ್ಲವೂ ಸಮಾವಿಷ್ಟವಾಗಿವೆ ಎಂದು ಈಗಾಗಲೇ ಕನ್ನಡಜನತೆ ಮನಗಂಡಿದೆ. ಈ ಶತಾವಧಾನವು ಸಾಹಿತ್ಯಪಿಪಾಸುಗಳಿಗೆ ರಸದೌತಣವಾಗಲಿದೆ ಎಂಬುದರಲ್ಲಿ ಸಂದೇಹವಿಲ್ಲ.

ಶ್ರೀಶಾರದಾ-ಚಂದ್ರಮೌಳೀಶ್ವರರ ಕೃಪೆಯಿಂದ ಈ ಶತಾವಧಾನಕಾರ್ಯಕ್ರಮವು ನಿರ್ವಿಘ್ನವಾಗಿ ನಡೆಯಲಿ, ಶ್ರೀಯುತ ಗಣೇಶ್‌ರವರ ಯಶಶ್ಚಂದ್ರಿಕೆಯು ವಿಸ್ತೃತವಾಗಿ ಪಸರಿಸಲಿ ಎಂದು ಶ್ರೀ ಜಗದ್ಗುರುಮಹಾಸ್ವಾಮಿಗಳವರು ಆಶೀರ್ವದಿಸಿದ್ದಾರೆ.

– ಶ್ರೀಶ್ರೀಭಾರತೀತೀರ್ಥಮಹಾಸ್ವಾಮಿಗಳು
ಜಗದ್ಗುರು ಶಂಕರಾಚಾರ್ಯ ದಕ್ಷಿಣಾಮ್ನಾಯಪೀಠ, ಶೃಂಗೇರಿ

ಶತವಧಾನಿ ಗಣೇಶರು ಅದ್ಭುತ-ಪ್ರತಿಭೆಯ ಮಹಾ-ವಿದ್ವಾಂಸರು. ಅವರು ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯಗಳೆರಡರಲ್ಲೂ ವಿಶಿಷ್ಟವಾದ ಪರಿಣತಿಯನ್ನು ಪಡೆದವರು. ಬರಿಯ ಕನ್ನಡ ಮತ್ತು ಸಂಸ್ಕೃತಗಳ ಸಾಹಿತ್ಯದಲ್ಲಿ ಮಾತ್ರವಲ್ಲ, ಭಾರತೀಯವಲ್ಲದ ವಿದೇಶೀಯ-ದರ್ಶನಗಳನ್ನು ಕೂಡ ಪರಿಚಯ ಮಾಡಿಕೊಂಡು, ವಿಶೇಷವಾಗಿ ಅಧ್ಯಯನ ಮಾಡಿ ದೇಶ-ವಿದೇಶಗಳ ತರ್ಕ-ಶಾಸ್ತ್ರಗಳ ಪರಿಚಯ ಮಾಡಿಕೊಂಡಿರುವ ಈ ಶತಮಾನದ ಮೇಧಾವಿ, ವಿದ್ವಾಂಸ ಎಂಬುದಾಗಿ ಎಲ್ಲರೂ ಅವರನ್ನು ಗೌರವಿಸುತ್ತಾರೆ. ನಮಗೂ ಅವರ ಬಗ್ಗೆ ವಿಶೇಷವಾದ ಅಭಿಮಾನವಿದೆ. ಹಾಗೆಯೇ ಸಂಸ್ಕೃತ ಮತ್ತು ದರ್ಶನ-ಶಾಸ್ತ್ರ-ಮಾತ್ರಗಳಲ್ಲದೆ ಸಂಗೀತದಲ್ಲಿ, ನೃತ್ಯದಲ್ಲಿ, ಎಲ್ಲ ಕಲೆಗಳಲ್ಲಿ ಹೆಚ್ಚು ಸಾಧನೆ-ಪರಿಣತಿಗಳನ್ನು ಪಡೆದಿದ್ದಾರೆ. ಹೀಗಾಗಿ ಅವರು ಕೈಹಾಕಿರದ ವಿಷಯವೇ ಇಲ್ಲ. ಆ ರೀತಿ ಹಲವು ವಿಷಯಗಳನ್ನು ಸರಿಯಾಗಿ ಅಧ್ಯಯನ ಮಾಡಿ, ಅವುಗಳಲ್ಲಿ ಪರಿಣತಿ ಪಡೆದು ಒಳ್ಳೆಯ ರೀತಿಯಿಂದ ನಮಗೆಲ್ಲ ಉಣಬಡಿಸುವ ಸಾಮರ್ಥ್ಯವುಳ್ಳವರು. ನಮ್ಮ ನಾಡಿನ ಎಲ್ಲಾ ವಿದ್ವಾಂಸರುಗಳಲ್ಲಿ ಶತಾವಧಾನಿ ಗಣೇಶ್ ಅವರು ಒಬ್ಬರು. ಅವರ ಕನ್ನಡ-ಶತಾವಧಾನ-ಕಾರ್ಯಕ್ರಮವು ನಡೆಯಲಿದೆ ಎಂದು ತಿಳಿದು ಬಹಳ ಸಂತೋಷವಾಗಿದೆ. ಅವರು ಈ ರೀತಿಯ ಕೊಡುಗೆಗಳನ್ನು ನಮ್ಮ ನಾಡಿಗೆ ವಿಶೇಷವಾಗಿ ನೀಡುತ್ತಿರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

– ಶ್ರೀಶ್ರೀವಿಶ್ವೇಶತೀರ್ಥಶ್ರೀಪಾದಂಗಳು
ಶ್ರೀ ಪೇಜಾವರ ಅಧೋಕ್ಷಜ ಮಠ

ಶ್ರುತಿಸ್ಮೃತಿಪುರಾಣಾನಾಂ ಆಲಯಂ ಕರುಣಾಲಯಂ। ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಂ॥

ಶತಾವಧಾನಿ ಗಣೇಶ್ ಅವರು ಬಹಳ ವರ್ಷಗಳಿಂದ ನಮಗೆ ಪರಿಚಿತರು. ಬಹುಶಃ ಇತ್ತೀಚಿನ ಶತಮಾನದಲ್ಲಿ ಅಂಥ ಮೇಧಾವಿಗಳಾದ ವ್ಯಕ್ತಿಗಳು ಸಿಗುವುದು ಬಹಳ ಕಡಿಮೆ. ಪ್ರತಿಭೆ, ಪಾಂಡಿತ್ಯ ಹಾಗು ಮೇಧಾಶಕ್ತಿ ಇರುವ ವಿಶಿಷ್ಟವಾದ ವ್ಯಕ್ತಿ ಇವರು.

ಸುಮಾರು ಏಳು ವಾರಗಳ ಕಾಲ ಉತ್ತರ-ಭಾರತದ ಎಲ್ಲಾ ಕ್ಷೇತ್ರಗಳನ್ನು ಸಂದರ್ಶಿಸುವಾಗ ಅವರು ನಮ್ಮ ಜೊತೆ ಬಂದಿದ್ದರು. ಅವರ ಜೊತೆ ಕಳೆದಂಥ ಸಮಯ ಅವಿಸ್ಮರಣೀಯ. ಆ ದಿನಗಳಲ್ಲಿ ನಾವು ಅವರ ಜೊತೆ ವಾಹನದಲ್ಲಿ ಪಯಣಿಸುವಾಗ ಬಹಳ ಗ್ರಂಥಗಳ ಬಗ್ಗೆ ಚಿಂತನೆ ಮಾಡುತ್ತಿದ್ದೆವು. ಬಹುಶಃ ಅವರು ಬಾಲ್ಯದಿಂದಲೇ ವೇದಶಾಸ್ತ್ರಗಳ ಅಧ್ಯಯನದ ದಾರಿಯಲ್ಲಿ ಬಂದಿದ್ದರೆ, ಸಂಸ್ಕೃತ-ಸಾಹಿತ್ಯಕ್ಕೆ ಇನ್ನೂ ಅದ್ಭುತವಾದ ವಿಶೇಷ-ಪ್ರಯೋಜನ ಆಗುತ್ತಿತ್ತು ಎಂದನ್ನಿಸುತ್ತದೆ. ಹಾಗೆಂದು ಇಂಜಿನಿಯರಿಂಗ್ ಓದಿದ ಅವರ ಸಂಸ್ಕೃತ-ಸಾಹಿತ್ಯದ ಪಾಂಡಿತ್ಯ ಕಡಮೆಯೇನೂ ಆಗಿಲ್ಲ.

ಅವರ ಬಗೆಗೆ ಒಂದು ಮಾತನ್ನ ಹಿಂದೆ ನಾವು ಹೇಳಿದ್ದು ಉಂಟು. ಅದು ಕೆಲವರಿಗೆ ಅತಿಶಯೋಕ್ತಿ ಎನಿಸಬಹುದು. ಆದರೆ ನಮಗೆ ಹಾಗೆ ಅನ್ನಿಸುವುದಿಲ್ಲ. ಅವರು ಚಿಕ್ಕ ವಯಸ್ಸಿನಲ್ಲೇ ಆಧ್ಯಾತ್ಮಮಾರ್ಗದಲ್ಲಿ ಸನ್ಯಾಸಪರಂಪರೆಯಲ್ಲಿ ಸೇರ್ಪಡೆಯಾಗಿದ್ದಿದ್ದರೆ, ಬಹುಶಃ ಅವರು ಅಭಿನವಶಂಕರಾಚಾರ್ಯರೇ ಆಗುತ್ತಿದ್ದರು. ಶಂಕರಾಚಾರ್ಯರು ಎಂಥ ಮೇಧಾವಿಗಳು ಎಂದು ಇತಿಹಾಸ ಗುರುತಿಸಿಯೇ ಇದೆ. ಕೆಲವೇ ಕೆಲವರು ಮೇಧಾವಿಗಳ ಹೆಸರುಗಳು ಶಂಕರಾಚಾರ್ಯರ ಹೆಸರಿಗೆ ಸಮ ಎಂದು ಹೇಳುತ್ತಾರೆ. ದೈವೇಚ್ಛೆಯನ್ನು ಪ್ರಶ್ನಿಸುವುದು ತರವಲ್ಲ.

ಅವರ ಕಾರಣದಿಂದ ಅವಧಾನ-ಕಲೆ ಈ ಹೊತ್ತಿಗೆ ಹೆಚ್ಚು ಜನರ ಮುಂದೆ ಹೆಚ್ಚು ಬೆಳಕಿಗೆ ಬಂದಿದೆ. ಆದರೆ ಅನೇಕ ಜನ ಯುವಕರೂ ಕೂಡ ಅದನ್ನು ಕಲಿತು ಮಾಡುತ್ತಿರುವುದನ್ನು ನಾವು ಕಂಡಿದ್ದೇವೆ. ಶಂಕರ-ಭಗವತ್ಪಾದರು ಒಂದೆಡೆ - "ಕುರು ಅವಧಾನಂ ಮಹದವಧಾನಂ" ಎಂದು ಹೇಳುತ್ತಾರೆ. ಅರ್ಥಾತ್ - ನೀನು ಎಲ್ಲಿ ನಿನ್ನ ಲಕ್ಷ್ಯವನ್ನು ಕೇಂದ್ರೀಕರಿಸುವೆಯೋ ಅದು ಬಹಳ ಮುಖ್ಯ. ಗಣೇಶ್ ಅವರು ಕೂಡ ಅದನ್ನೇ ಹೇಳುತ್ತಾರೆ. ಅವಧಾನವೆಂದರೆ ಅವಧಾನಿಯು ಮನಸ್ಸನ್ನು ಕೇಂದ್ರೀಕರಿಸುವುದು ಎಂದು. ಅಂದರೆ ಆ ಮನಸ್ಸನ್ನು ಕೇಂದ್ರೀಕರಿಸುವುದಿಂದ ಏನೆಲ್ಲ ಸಾಧನೆ ಮಾಡಬಹುದು, ಮನಸ್ಸನ್ನು ಕೇಂದ್ರೀಕರಿಸುವುದೆಂದರೆ ಬಹಳ ಸೂಕ್ಷ್ಮ-ವಿಷಯವೆನ್ನುವುದು ಅವರ ಅವಧಾನದಲ್ಲಿ ಕುಳಿತರೆ ಗೊತ್ತಾಗುತ್ತದೆ.

ಪ್ರಕೃತದಲ್ಲಿ ಅವರು ಕನ್ನಡದಲ್ಲಿ ಶತಾವಧಾನ ಕಾರ್ಯಕ್ರಮವನ್ನು ನವೆಂಬರ್ ತಿಂಗಳ ಕೊನೆ ಮತ್ತು ಡಿಸೆಂಬರ್ ತಿಂಗಳ ಮೊದಲಿನಲ್ಲಿ ನಡೆಸಿಕೊಡುತ್ತಿದ್ದಾರೆಂದು ತಿಳಿದು ನಮಗೆ ಬಹಳ ಸಂತೋಷವಾಗಿದೆ. ಆ ಕಾರ್ಯಕ್ರಮವು ಚೆನ್ನಾಗಿ ನಡೆಯುವುದರಲ್ಲಿ ನಮಗೆ ಸಂಶಯವಿಲ್ಲ. ಚೆನ್ನಾಗಿ ನಡೆಯಲೆಂದು ಮತ್ತೆ ನಮ್ಮ ಹಾರೈಕೆ. ಅಂದರೆ ಭವಿಷ್ಯತ್ತಿನಲ್ಲಿ ಸಹಸ್ರಾವಧಾನ ಕೂಡ ಅವರಿಂದ ಆಗಲಿ, ಒಂದು ಹೊಸ ದಾಖಲೆಯನ್ನು ಮಾಡಲೆಂದು ಹಾರೈಸುತ್ತೇನೆ. ಅವರಿಗೆ ದೇವರು ಒಳ್ಳೆಯ ಆರೋಗ್ಯ-ಆಯುಷ್ಯಗಳನ್ನು ಅನುಗ್ರಹಿಸಲೆಂದು ನಮ್ಮ ಹಾರೈಕೆ.

– ಶ್ರೀಶ್ರೀಗಂಗಾಧರೇಂದ್ರಸರಸ್ವತೀಮಹಾಸ್ವಾಮಿಗಳು
ಜಗದ್ಗುರು ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ

॥ಹರೇ ರಾಮ॥

ಹಲ್ಲಿದ್ದವನ ಬಳಿ ಕಡಲೆಯಿಲ್ಲ, ಕಡಲೆಯಿದ್ದವನ ಬಳಿ ಹಲ್ಲಿಲ್ಲ. ಇದು ಗಾದೆಯ ಮಾತು. ಹಾಗೆಯೇ ಈ ಜಗತ್ತಿನಲ್ಲಿ ಭಾವವುಳ್ಳವರನೇಕರು ಬುದ್ಧಿಶಾಲಿಗಳಲ್ಲ. ಪ್ರಖರಬುದ್ಧಿಯವರು ಭಾವಜೀವಿಗಳಲ್ಲ. ಬದುಕಿನ ರಥಕ್ಕೆ ಚಕ್ರಗಳೆರಡು ಭಾವ ಮತ್ತು ಬುದ್ಧಿ, ಅವೆರಡೂ ಬೇಕು ಜೊತೆಗೆ ಪೂರಕವಾಗಿ. ತುಂಬಿದ ಭಾವ ಹಾಗೂ ತೀಕ್ಷ್ಣಬುದ್ಧಿ ಒಟ್ಟಿಗಿರುವುದು ತುಂಬ ಅಪರೂಪ, ಅಂತಹ ಅಪರೂಪದಲ್ಲಿ ಅಪರೂಪದ ವ್ಯಕ್ತಿತ್ವ ಆರ್. ಗಣೇಶರದು. ಅವರನ್ನು ನಾವು ನೋಡಿದ್ದು ಬಾಲ್ಯದಲ್ಲಿ. ಮೇಧಾದಕ್ಷಿಣಾಮೂರ್ತಿ ಸಂಸ್ಥಾನದ ಪರಿಸರದಲ್ಲಿ ನಾವು ಅಧ್ಯಯನ ಮಾಡುತ್ತಿದ್ದಾಗ ಅವರು ಆಗಮಿಸಿದ್ದರು. ಅವರ ಆಶುಕವಿತೆಯ ಪ್ರತಿಭೆ, ನೂರು ಸವಾಲುಗಳಿಗೆ ಲೀಲಾಜಾಲವಾಗಿ ಉತ್ತರ ಕೊಡುವಂತಹ ವೈಖರಿಯನ್ನು ಕಂಡು ತುಂಬ ಬೆರಗಾಗಿದ್ದೆವು. ಅಂದಿನ ಅಥರ್ವವೇದಾಚಾರ್ಯರಾದ ಶೀದ್ರಾಡಿಯವರು (ಅವರು ಕವಿ ಕೂಡಾ ಹೌದು) ಗಣೇಶ್ ಅವರನ್ನು ಸಾಕಷ್ಟು ಪರೀಕ್ಷೆ ಮಾಡಿ ಕೊನೆಯಲ್ಲಿ ಸಾಕ್ಷಾತ್-ಸರಸ್ವತೀಪುತ್ರರು ಎಂದು ಶ್ಲಾಘಿಸಿ ಅವರಿಗೆ ಸಾಷ್ಟಾಂಗ-ನಮಸ್ಕಾರ ಮಾಡಿದ್ದನ್ನು ನಾವು ಮರೆಯುವ ಹಾಗೆಯೇ ಇಲ್ಲ.

ಅಂದಿನಿಂದ ಇಂದಿನವರೆಗೆ ನಾವು ಎಷ್ಟು ಬಾರಿ ನೋಡಿದ್ದೇವೋ ಅಷ್ಟೂ ಸಲ ಅವರು ನಮಗೆ ಅಚ್ಚರಿಯನ್ನು ತಂದಿದ್ದಾರೆ. ಅವರದು ವಿಕಸಿತವಾದ ಹೃದಯ ಜೊತೆಯಲ್ಲಿ ಅಷ್ಟೇ ಆಳವಾದ ಮತ್ತು ತೀಕ್ಷ್ಣವಾದ ಬುದ್ಧಿಪ್ರತಿಭೆ. ಇನ್ನಾವುದೋ ಕ್ಷೇತ್ರದಲ್ಲಿದ್ದಿದ್ದರೆ ಬಹುಶಃ ನಾವು ಇಷ್ಟು ಮೆಚ್ಚುಗೆ ಪಡುತ್ತಾ ಇರಲಿಲ್ಲವೋ ಏನೋ. ಇಂತಹ ಒಬ್ಬ ಪ್ರತಿಭಾವಂತ ಸಂಸ್ಕೃತ-ಕ್ಷೇತ್ರದಲ್ಲಿರುವುದು ಒಂದು ಮಹಾಯೋಗ ಎಂದು ನಾವು ಭಾವಿಸುತ್ತೇವೆ. ಈ ಕಾಲಕ್ಕೆ ಇವರು ಒಂದು ದೊಡ್ಡ ಕೊಡುಗೆ. ಇಂತಹ ಒಬ್ಬ ಅನುಪಮ-ವಿದ್ವಾಂಸ, ಭಾವಶಾಲಿ, ಬುದ್ಧಿಶಾಲಿ ನಮಗೆ ದೊರಕಿರುವುದು ನಮ್ಮ ಭಾಗ್ಯ. ಕವಿಗಳಾಗಲು ಭಾವ ಬೇಕು, ಅವಧಾನಿಗಳಾಗಲು ಬುದ್ಧಿ ಬೇಕು. ಅವೆರಡನ್ನೂ ಉಳ್ಳವರವರು.

ಅವಧಾನವೆಂದರೆ ನಮಗೆ ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಅತಿರಥ-ಮಹಾರಥ ಎಂಬ ಪದಗಳು ನೆನಪಾಗುತ್ತವೆ. "ಏಕೋ ದಶಸಹಸ್ರಾಣಿ ಯೋಧಯೇದ್ಯಸ್ತು ಧನ್ವಿನಾಮ್". ತನ್ನ ರಥ, ಸಾರಥಿ, ಕುದುರೆಗಳು, ತನ್ನ ಬಳಗವನ್ನು ರಕ್ಷಣೆ ಮಾಡಿಕೊಳ್ಳುತ್ತಲೇ ಹತ್ತು ಸಾವಿರ ಜನರ ಜೊತೆ ಹೋರಾಡುವವನು ಮಹಾರಥ." ಅಮಿತಾನ್ ಯೋಧಯೇದ್ಯಸ್ತು" – ಅಮಿತಸಂಖ್ಯೆಯನ್ನು ಎದುರಿಸಬಲ್ಲವನು ಅತಿರಥ. ಅವಧಾನವು ಅಂಥ ಯುದ್ಧವನ್ನು ಜ್ಞಾಪಿಸುವಂಥದ್ದು. ಯುದ್ಧರಂಗದಲ್ಲಿ ಬಾಹುಗಳಿಂದ ಪರಾಕ್ರಮದಿಂದ ಅತಿರಥ ಮಹಾರಥ ಎನ್ನುತ್ತೇವೆ. ಅವಧಾನದಲ್ಲಿ ಬುದ್ಧಿಜ್ಞಾನದ ಮೂಲಕವಾಗಿ ನೂರು ನೂರು ಪರಿಣತರು ಎಸೆಯುವ ಸವಾಲುಗಳಿಗೆ ಒಬ್ಬ ಅವಧಾನಿ ಉತ್ತರಿಸಬೇಕು. ಏಕಕಾಲದಲ್ಲಿ ಹಲವು ಸಂಗತಿಗಳನ್ನು ನಿಭಾಯಿಸಬೇಕು. ಇದಕ್ಕಾಗಿ ಅದೆಷ್ಟು ಅಧ್ಯಯನ ಮಾಡಿರಬೇಕು, ಅದೆಷ್ಟು ಧಾರಣೆ ಮಾಡಿರಬೇಕು, ಹೃದಯದಲ್ಲಿ ಮತ್ತು ಬುದ್ಧಿಯಲ್ಲಿ ಧರಿಸಿರಬೇಕು ಎಂದರೆ ಒಂದು ರೀತಿಯಲ್ಲಿ ಚಲಿಸುವ ಗ್ರಂಥಾಲಯವೇ ಆಗಿರಬೇಕು. ಆ ಗ್ರಂಥಗಳ ಆಳವಾದ ಅಧ್ಯಯನ ಮಾಡಿರುವವರಾಗಿರಬೇಕು. ಬೇಕಾದಾಗ ಅದು ಸ್ಮರಣೆಗೆ ಬರಬೇಕು. ಗ್ರಹಣ, ಧಾರಣ, ಸ್ಮರಣ ಈ ಮೂರೂ ಶಕ್ತಿಗಳು ಪರಿಪೂರ್ಣವಾಗಿದ್ದರೆ ಆತ ಮಾತ್ರ ಅತ್ಯುತ್ತಮ ಅವಧಾನಿಯಾಗಿರುವುದಕ್ಕೆ ಸಾಧ್ಯ. ಹಾಗಿರುವಾಗ ಇಂದಿನ ಕಾಲದ ಒಬ್ಬ ಶತಾವಧಾನಿ – ಎಂದರೆ ನೂರು ಸವಾಲುಗಳನ್ನ ಒಟ್ಟಿಗೆ ಎದುರಿಸುವಂತಹ ಒಬ್ಬ ಪ್ರತಿಭೆ ತುಂಬ ಅಪರೂಪ. ನಮ್ಮ ಶತಾವಧಾನಿ ಆರ್. ಗಣೇಶ್ ಅವರು ಕನ್ನಡದಲ್ಲಿ ಶತಾವಧಾನ ಮಾಡುತ್ತಿದ್ದಾರೆ ಎನ್ನುವುದು ನಮಗೆ ತುಂಬ ಹರ್ಷ ತರುವ ವಿಷಯ. ಅವರ ಶತಾವಧಾನ ಶತ-ಶತ ಗಣೇಶರನ್ನು ಸೃಷ್ಟಿ ಮಾಡಲಿ. ಅವರ ಅನುಪಮ ಪ್ರತಿಭೆಯನ್ನು, ಕಾವ್ಯನಿಷ್ಠೆಯನ್ನು ಅವರ ಹೃದಯನಿಷ್ಠೆಯನ್ನು ಕಂಡು ಮೆಚ್ಚಿದ ಅನೇಕರ ಹೃದಯ ಉದ್ದೀಪ್ತವಾಗಿ ಅವರು ಆ ಪಥದಲ್ಲಿ ಸಾಗುವಂತಾಗಲಿ.

ತನ್ಮೂಲಕವಾಗಿ ಸಾರಸ್ವತ–ಲೋಕ ಶ್ರೀಮಂತವಾಗಲಿ, ಸಮಾಜ ಸಾರಸ್ವತ–ಸಮಾಜವಾಗಲಿ, ಸರಸ್ವತಿಯ ಕೃಪಾಕಟಾಕ್ಷಕ್ಕೆ ಪಾತ್ರವಾಗಲಿ ಎನ್ನುವ ಶುಭ ಹಾರೈಕೆ ನಮ್ಮದು.

– ಶ್ರೀಶ್ರೀರಾಘವೇಶ್ವರಭಾರತೀಮಹಾಸ್ವಾಮಿಗಳು
ಜಗದ್ಗುರು ಶ್ರೀಶಂಕರಾಚಾರ್ಯ ಗೋಕರ್ಣ–ರಾಮಚಂದ್ರಾಪುರ ಮಹಾಸಂಸ್ಥಾನ

ಸ್ವಾಮಿ ವಿವೇಕಾನಂದರು ಭಾರತೀಯ ಮತ್ತು ವಿದೇಶೀಯ ಸಂಸ್ಕೃತಿಗಳಲ್ಲಿರುವ ಉತ್ತಮ ಭಾಗಗಳ ಮಧುರಸಮ್ಮಿಲನದಿಂದ ಆಧುನಿಕಜಗತ್ತು ಪರಿಪೂರ್ಣತೆಯನ್ನು ಪಡೆಯಲು ಪ್ರಯತ್ನಿಸಬೇಕೆಂದು ಬಯಸಿದ್ದರು.

ಶತಾವಧಾನಿ ಡಾ॥ ರಾ. ಗಣೇಶ್‌ರವರೂ ಇಂತಹ ಸಮ್ಮಿಲನವನ್ನು ರೂಢಿಸಿಕೊಂಡಿರುವ ಅಪರೂಪದ ವ್ಯಕ್ತಿಗಳಲ್ಲೊಬ್ಬರು. ವಿಜ್ಞಾನ–ತಂತ್ರಜ್ಞಾನಗಳಲ್ಲಿ ಪರಿಣತಿಯನ್ನು ಪಡೆದುಕೊಂಡಿರುವುದಲ್ಲದೆ ಸಂಸ್ಕೃತಭಾಷೆ, ಕಾವ್ಯಪ್ರೌಢಿಮೆ, ಶಾಸ್ತ್ರಪಾಂಡಿತ್ಯಗಳಲ್ಲಿಯೂ ಅವರದು ಎತ್ತಿದ ಕೈ. ಅವರ ಅವಧಾನ ಕಾರ್ಯಕ್ರಮಗಳಂತೂ ಊಹೆಗೂ ನಿಲುಕದಂತಹವು.

ಅವರು ಈಗ ಅರ್ಧಶತಮಾನದ ವಯಸ್ಸನ್ನು ದಾಟಿ 51ನೆಯ ವರ್ಷಕ್ಕೆ ಕಾಲಿಡುತ್ತಿರುವುದು ಸಂತಸದ ಸುದ್ದಿ.

ಭಗವಂತನು ಅವರಿಗೆ ದೀರ್ಘಾಯುಸ್ಸನ್ನೂ ಆರೋಗ್ಯವನ್ನೂ ಚಿತ್ತಶಾಂತಿಯನ್ನೂ ಕೊಡಲೆಂದು ನಮ್ಮ ವಿಶೇಷ ಪ್ರಾರ್ಥನೆ.

– ಶ್ರೀಶ್ರೀಹರ್ಷಾನಂದರು
ಅಧ್ಯಕ್ಷರು, ಶ್ರೀ ರಾಮಕೃಷ್ಣಮಠ, ಬೆಂಗಳೂರು

ಈ ಅಷ್ಟಾವಧಾನಕಲೆ ಎನ್ನುವುದು ಪಾಂಡಿತ್ಯದಿಂದ ಕೂಡಿದುದು ಮತ್ತು ಮನಸ್ಸನ್ನು ಕೇಂದ್ರೀಕರಿಸಿ ದೀರ್ಘಕಾಲ ನೆನಪಿನಲ್ಲಿ ಇಡತಕ್ಕಂಥದ್ದು. ಇದೊಂದು ಅದ್ಭುತವಾದಂಥ ಕಲೆಯೇ ಹೌದು. ಸಾಮಾನ್ಯವಾಗಿ ಇದನ್ನು ಆಂಧ್ರದ ಪಂಡಿತರು ಮಾಡುವುದನ್ನು ನಾನು ಕೇಳಿದ್ದೇನೆ, ನೋಡಿಯೂ ಇದ್ದೇನೆ. ಕನ್ನಡವನ್ನು ಬಲ್ಲ ಒಬ್ಬ ಆಂಧ್ರವಿದ್ವಾಂಸರು ನಮ್ಮ ಬೆಂಗಳೂರು ನಗರಕ್ಕೆ ಬಂದು ಈ ಅವಧಾನವನ್ನು ಎರಡು ಮೂರು ಬಾರಿ ಮಾಡಿದರು. ಆ ಸಂದರ್ಭದಲ್ಲಿ ನಾನು ಪೃಚ್ಛಕನಾಗಿದ್ದೆ.

ಸಾಮಾನ್ಯವಾಗಿ ಸಮಸ್ಯೆಯನ್ನ ಕೊಡತಕ್ಕಂಥ ಕೆಲಸ ನನ್ನದಾಗಿತ್ತು. ಈ ಎರಡು ಬಾರಿ ಅವಧಾನ ನಡೆದಾಗಲೂ ನಮ್ಮ ಶತಾವಧಾನಿ ಡಾ॥ ಗಣೇಶ್ ಅವರು ಅಲ್ಲಿ ಉಪಸ್ಥಿತರಿರುತ್ತಿದ್ದರು ಎಂದು ತಿಳಿಯುತ್ತಿತ್ತು. ಸ್ವಲ್ಪ ದಿನಗಳ ನಂತರ ಒಮ್ಮೆ "ನಾನೂ ಅಷ್ಟಾವಧಾನ ಮಾಡುತ್ತೇನೆ"ಎಂದು ಇವರು ಸಾರಿದರು. ಅಲ್ಲಿದ್ದ ನಾವು ನಾಲ್ಕಾರು ಜನರಿಗೆ ಇದು ವಿಚಿತ್ರವಾಗಿ ಕಾಣಿಸಿತು. ಆದರೂ ಅವಕಾಶ ಕೊಟ್ಟು ಒಂದು ದಿನ ಇವರಿಂದ ಅಷ್ಟಾವಧಾನ ಗೊತ್ತುಮಾಡಿದೆವು. ಇವರು ಯಶಸ್ವಿಯಾಗಿ ಮಾಡಿದರು. ನಮಗೆ ತುಂಬ ಆಶ್ಚರ್ಯವಾಯಿತು. ಈ ಕನ್ನಡದೇಶದಲ್ಲಿ ಒಬ್ಬ ಅಷ್ಟಾವಧಾನಿ ಇದ್ದಾನೆ ಎಂದು ತಿಳಿದದ್ದೇ ಆಗ. ಇಲ್ಲಿ ಅಷ್ಟಾವಧಾನಕಲಾವಿದರು ಇನ್ನು ಯಾರಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ. ಪ್ರಾಯಶಃ ಯಾರೂ ಇಲ್ಲ. ಶತಾವಧಾನ ಮಾಡುವುದರಲ್ಲಿಯೂ ಇವರು ಬಹಳ ಸಾಮರ್ಥ್ಯವನ್ನ ಅನೇಕಸಲ ತೋರಿಸಿದ್ದಾರೆ. ಆದ್ದರಿಂದ ಈಗ ಕೈಗೊಂಡಿರುವ ಶತಾವಧಾನವು ಯಶಸ್ವಿಯಾಗಿ ನಡೆಯುತ್ತದೆ ಎಂದು ನಾನು ನಂಬಿದ್ದೇನೆ.

ಇನ್ನು ಗಣೇಶ್ ಅವರ ವಿಷಯವಾಗಿ ಹೇಳುವುದಾದರೆ, ಅವರು ಇಂಜಿನೀರಿಂಗ್ ಓದಿ ಕೆಲಸದಲ್ಲಿದ್ದವರು. ಸಾಹಿತ್ಯಕ್ಕೆ ಮರುಳಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಈ ಅವಧಾನವನ್ನೇ ಪ್ರಧಾನವಾಗಿ ನಡೆಸಿದ್ದಾರೆ. ಈಗ ಅವಧಾನ ಮತ್ತು ನಾನಾ ತರಹದ ಉಪನ್ಯಾಸಗಳನ್ನ ಮಾಡುವುದರಲ್ಲಿ ಅವರು ಗಟ್ಟಿಗರು. ಗಣಕಯಂತ್ರದಲ್ಲೆಂಬಂತೆ

ಓದಿದ್ದೆಲ್ಲ ಅವರಲ್ಲಿ ಅಂತರ್ಗತವಾಗುತ್ತದೆ. ಅವರು ಯಾವತ್ತೂ ಮರೆಯುವುದೇ ಇಲ್ಲ. ಇದು ಆಶ್ಚರ್ಯಕರ. ಎಲ್ಲರಿಗೂ ಸಾಧ್ಯವಾಗತಕ್ಕದ್ದಲ್ಲ ಇದು. ಅನೇಕ ಕಡೆಗಳಲ್ಲಿ ಯಶಸ್ವಿಯಾಗಿ ಅಷ್ಟಾವಧಾನ ಮಾಡಿ, ಈಗ ತುಂಬುಗನ್ನಡದಲ್ಲಿ ಶತಾವಧಾನವನ್ನೂ ಮಾಡುತ್ತಾರೆ ಎನ್ನುವುದು ಬಹಳ ಹೆಮ್ಮೆಯನ್ನು ತರುತ್ತಿದೆ.

ನಾನು ಡಾ॥ ಗಣೇಶ್ ಅವರನ್ನು ಬಹಳ ವರ್ಷಗಳಿಂದ ಬಲ್ಲೆ. ಬಹಳ ಆತ್ಮೀಯವಾಗಿ ಬಲ್ಲೆ. ಅವರು ತುಂಬ ಸರಸಿಗಳು, ಸಾತ್ತ್ವಿಕರು, ಸಾಧುಸ್ವಭಾವದವರು. ತಮಗೆ ಇಂತಹ ಶಕ್ತಿ ಇದೆ ಎನ್ನುವುದನ್ನು ತಿಳಿದು ಅವರು ಹೆಮ್ಮೆ, ಗರ್ವ ಪಡುವವರಲ್ಲ. ಈ ಸೌಮ್ಯಸ್ವಭಾವದವರಲ್ಲಿ ಇಷ್ಟು ದೊಡ್ಡ ಪಾಂಡಿತ್ಯ-ಕಲೆ ನೆಲೆಸಿರುವುದು ನಮಗೆಲ್ಲ ತುಂಬ ಸಂತೋಷವನ್ನು ಉಂಟುಮಾಡುತ್ತದೆ. ನಾನು ಮೊದಲೇ ಹೇಳಿದಂತೆ ನಮ್ಮ ಕನ್ನಡದೇಶದಲ್ಲಿ ಈ ಕಲೆಯನ್ನು ಮೆರೆಸಿದವರು ಯಾರು ಮೊದಲು ಎನ್ನುವುದು ನನಗೆ ಗೊತ್ತಿಲ್ಲ. ಪ್ರಾಯಶಃ ಈ ಅವಧಾನಕಲೆಯನ್ನು ನಮ್ಮ ಕನ್ನಡದೇಶದಲ್ಲಿ ಯಾರೂ ತಿಳಿದೇ ಇರಲಿಲ್ಲ ಎಂದು ನಾನು ಭಾವಿಸಿದ್ದೇನೆ. ಇವರೇ ಮೊದಲಿಗರು ಎಂಬುದು ನಮಗೆ ಹೆಮ್ಮೆಯಾಗಿದೆ.

ಆರಂಭದಲ್ಲಿ ಗಣೇಶ್ ಅವರು ಈ ಅಷ್ಟಾವಧಾನ ಮಾಡುವುದಕ್ಕೆ ಪ್ರಾರಂಭಿಸಿದಾಗ ನಮ್ಮ ಪತ್ರಿಕೆಗಳಲ್ಲೆಲ್ಲಾ ಇದು ಪ್ರಕಟವಾಗತೊಡಗಿತು. ಇದು ಹೊಸದಾದ್ದರಿಂದ ಜನರಿಗೆ ತುಂಬಾ ಕುತೂಹಲಕರವಾಗಿ ಕಾಣಿಸಿತು. ಆಗ ಇದನ್ನ ನೀವು ನಮ್ಮಲ್ಲಿಯೂ ಮಾಡಿಸಿ ಎಂದು ನಮಗೆ ಪರಿಚಿತರಾದವರು ಪತ್ರಗಳನ್ನ ಬರೆಯುವುದಕ್ಕೆ ಆರಂಭ ಮಾಡಿದರು. ಮೊದಲು ನಮ್ಮೂರು ಸೊರಬದಲ್ಲಿ ಮಾಡಬೇಕು ಎಂದು ನನಗೆ ಇಚ್ಛೆಯಾಯಿತು. ಆಗ ಗಣೇಶ್ ಅವರಿಗೆ ಹೇಳಿದೆ, ಅವರು ಅವಶ್ಯ ಬರ್ತೀನಿ ಎಂದು ಹೇಳಿದರು. ಅವರ ಜೊತೆಗೆ ಒಂದು ಮೂರು ನಾಲ್ಕು ಜನ ಪೃಚ್ಛಕರು ಬೇಕಾಗುತ್ತದೆ. ಎಲ್ಲರಿಗೂ ಅದರ ವಿಷಯ ಗೊತ್ತಿಲ್ಲವಾದ್ದರಿಂದ ಅವರು ಪೃಚ್ಛಕರಾಗುವುದಕ್ಕೆ ಸಾಧ್ಯವಿಲ್ಲ. ಸೊರಬದಲ್ಲಿ ಯಾರು ಸಿಗುತ್ತಾರೆ? ಹೀಗಾಗಿ ಮೂರು ಜನ ಪೃಚ್ಛಕರನ್ನು ಮತ್ತು ಗಣೇಶ್ ಅವರನ್ನು ಕರೆದುಕೊಂಡು ನಾನು ಸೊರಬಕ್ಕೆ ಹೋದೆ. ಅಲ್ಲಿ ಅಷ್ಟಾವಧಾನವನ್ನು ಮಾಡಿಸಿದೆ. ಮತ್ತೆರಡು ಅವಧಾನಗಳು ಆ ಕಡೆ ಆದವು. ಎಲ್ಲರಿಗೂ ಬಹಳ ಆಶ್ಚರ್ಯವಾಯಿತು ಮತ್ತು ಮೆಚ್ಚುಗೆಯನ್ನು ಪಡೆಯಿತು. ಆನಂತರ ಹುಬ್ಬಳ್ಳಿಯ ನನ್ನ ಸ್ನೇಹಿತರೊಬ್ಬರು ನನಗೆ ಪತ್ರವನ್ನು ಬರೆದು ಗಣೇಶ್ ಅವರನ್ನ ಕರೆದುಕೊಂಡು ಬನ್ನಿ ಎಂದು ಹೇಳಿದರು. ಆಗ ನಾನು ಅದೇ ಪೃಚ್ಛಕರ ಜೊತೆ ಹೋಗೋಣವೆಂದು ಗಣೇಶ್ ಅವರಿಗೆ ಹೇಳಿದಾಗ ಅವರು ಒಪ್ಪಿಕೊಂಡರು. ಆಗ ನಾನು ಅವರನ್ನ ಹುಬ್ಬಳ್ಳಿಗೂ ಸಹ ಕರೆದುಕೊಂಡು ಹೋಗಿದ್ದೆ. ಅಲ್ಲಿಯೂ ಎರಡು ಕಡೆ ಈ ರೀತಿಯಾದ ಅವಧಾನಗಳು ನಡೆಯಿತು. ಆ ಜನರಿಗೂ ಆಶ್ಚರ್ಯವಾಯಿತು. ಈ ರೀತಿಯಾದ ನೆನಪಿನ ಶಕ್ತಿಯಿರುವ ಯಾರನ್ನೂ ನಾವು ನೋಡಿಯೇ ಇಲ್ಲ. ಅಷ್ಟು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಂಡು ಹಾಸ್ಯಪ್ರಜ್ಞೆಯಿಂದ ಎಲ್ಲದಕ್ಕೂ ಉತ್ತರಕೊಟ್ಟು, ಎಲ್ಲರನ್ನೂ ರಂಜಿಸಿದರು. ಇದರಲ್ಲಿ ಆಶ್ಚರ್ಯ ಮಾತ್ರವಲ್ಲ, ಸಂತೋಷವೂ ಉಂಟು. ಅಷ್ಟಾವಧಾನದಲ್ಲಿ ಪ್ರಶ್ನೆಗಳಿಗೆ ಸರಿಯಾಗಿ, ಚಮತ್ಕಾರವಾಗಿ ಉತ್ತರಕೊಡುವುದು ಜನರಿಗೆ ಕುತೂಹಲವನ್ನು ಉಂಟುಮಾಡುತ್ತದೆ.

ಇದು ನಿಜವಾಗಿಯೂ ಪಾಂಡಿತ್ಯಪೂರ್ಣವಾದ ಸ್ಮರಣಶಕ್ತಿಯ ಅಗಾಧತೆಯನ್ನು ತೋರಿಸುವ ಒಂದು ಉತ್ತಮವಾದ ಕಲೆ. ಇದು ಬೆಳೆಯಬೇಕು. ಗಣೇಶ್ ಅವರ ಹಾಗೇ ನಾನು ಮಾಡುತ್ತೇನೆ ಎಂದು ಹೇಳುವವರು ಯಾರಾದರೂ ಬಂದರೆ ನಾವು ತುಂಬ ಸಂತೋಷದಿಂದ ಸ್ವಾಗತಿಸಬಹುದು. ಆದರೆ ಇದುವರೆಗೆ ಅಂತಹವರು ಯಾರೂ ಬರಲೇ ಇಲ್ಲ. ಇದೇ ಕನ್ನಡದೇಶದ ದುರದೃಷ್ಟ ಎಂದು ಹೇಳಬೇಕೋ ಏನೋ. ಇವರು ಅದರಲ್ಲಿ ತುಂಬ ಕೀರ್ತಿಯನ್ನ ಗಳಿಸಿದ್ದಾರೆ. ಹಮ್ಮು ಎನ್ನುವುದು ಅವರ ಬಳಿಗೆ ಸುಳಿಯಲೇ ಇಲ್ಲ. ಎಲ್ಲರಂತೆ ಇರುತ್ತಾರೆ. ಆನಂದವಾಗಿ ಇರುತ್ತಾರೆ, ಸಂತೋಷವಾಗಿ ಉತ್ತರವನ್ನು ಕೊಡುತ್ತಾರೆ. ಹಾಗಾಗಿ ಇವರೇ ಕನ್ನಡದೇಶದಲ್ಲಿ ಪ್ರಥಮ ಅಷ್ಟಾವಧಾನಿಗಳು ಹಾಗೂ

ಪ್ರಥಮ ಶತಾವಧಾನಿಗಳು ಎಂದು ನಾನು ಭಾವಿಸುತ್ತೇನೆ. ಭಗವಂತ ಇವರಿಗೆ ಆಯಸ್ಸು ಆರೋಗ್ಯ ಎಲ್ಲವನ್ನು ಕೊಟ್ಟು ಇವರನ್ನು ಚೆನ್ನಾಗಿ ಕಾಪಾಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

– ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥ ಶರ್ಮಾ

ಶತಾವಧಾನಿ ಗಣೇಶ್‌ರೇ ಒಂದು ವಿಸ್ಮಯ. ಅನೇಕ ವಿಷಯಗಳಲ್ಲಿ ಅವರಿಗೆ ಪ್ರವೇಶ–ಪ್ರಭುತ್ವ ಎರಡೂ ಇದೆ. ಮೆಕ್ಯಾನಿಕಲ್ ಇಂಜಿನೀರಿಂಗ್‌ನಲ್ಲಿ ಎಮ್.ಇ ಮಾಡಿದ್ದಾರೆ, ಚೆನ್ನಾಗಿ ವಿಜ್ಞಾನಗಳನ್ನು ಅಭ್ಯಾಸ ಮಾಡಿದ್ದಾರೆ, ಸಂಸ್ಕೃತದಲ್ಲಂತೂ ಉದ್ದಾಮ ಪಂಡಿತರು, ವೇದ–ಉಪನಿಷತ್ತು–ವೇದಾಂತಗಳಲ್ಲದೆ ಸಂಸ್ಕೃತಸಾಹಿತ್ಯ, ಸಂಸ್ಕೃತಕಾವ್ಯಮೀಮಾಂಸೆಗಳನ್ನೆಲ್ಲ ಓದಿದ್ದಾರೆ. ತಕ್ಕಮಟ್ಟಿಗೆ ಪಾಶ್ಚಿಮಾತ್ಯಸಾಹಿತ್ಯಗಳನ್ನೂ ಓದಿದ್ದಾರೆ. ಕನ್ನಡದಲ್ಲಿ ಪಿ.ಎಚ್.ಡಿ ಮಾಡಿದ್ದಾರೆ. ತೆಲುಗಿನಲ್ಲೂ ಕೂಡ ಅವಧಾನ ಮಾಡುವಷ್ಟು ಪ್ರಭುತ್ವ ಇದೆ. ಅವರಿಗೆ ನೃತ್ಯ ಗೊತ್ತು, ಒಳ್ಳೆ ನೃತ್ಯಗುರುವಿನಿಂದ ಪಾಠ ಹೇಳಿಸಿಕೊಂಡು ಸ್ವತಃ ಅಭ್ಯಾಸ ಮಾಡಿದ್ದಾರೆ. ಶಾಸ್ತ್ರೀಯಸಂಗೀತ ತುಂಬಾ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಶಿಲ್ಪಕಲೆ, ದೇವಸ್ಥಾನಗಳು, ಮೊದಲಾದ ಶಾಸ್ತ್ರಗಳೂ ಕೂಡ ಅವರಿಗೆ ಗೊತ್ತು. ಇಷ್ಟನ್ನೆಲ್ಲಾ ಇವರು ಇಷ್ಟು ಚಿಕ್ಕ ವಯಸ್ಸಿಗೇ ಕರಗತಮಾಡಿಕೊಂಡಿರುವುದು ವಿಸ್ಮಯವೇ ಸರಿ.

ಅವರು ಮಾಡುವ ಅವಧಾನಗಳನ್ನು ನಾನು ನೋಡಿದ್ದೇನೆ, ಅವರು ಮಾಡಿರುವ ಸಂಸ್ಕೃತ ಅವಧಾನವನ್ನೂ ಕೂಡ ನಾನು ನೋಡಿದ್ದೇನೆ. ಅವುಗಳನ್ನು ನೋಡುವುದೇ ಒಂದು ಸಂತೋಷ. ಇಷ್ಟಲ್ಲದೇ ಅವರು ವಿಜ್ಞಾನಗಳಲ್ಲಿ ಆಸಕ್ತಿ ಇರುವಂಥ ತರುಣರಿಗೆ ಸಂಸ್ಕೃತಭಾಷೆ, ಸಾಹಿತ್ಯ ಮತ್ತು ಸಂಸ್ಕೃತದಲ್ಲಿರುವಂಥ ತತ್ತ್ವಶಾಸ್ತ್ರದ ಸಂಗತಿಗಳನ್ನು ಪಾಠ ಮಾಡುತ್ತಿದ್ದಾರೆ. ಆಧುನಿಕ ಕನ್ನಡಸಾಹಿತ್ಯವನ್ನು ಕೂಡ ಬಹಳ ಚೆನ್ನಾಗಿ ಓದುಕೊಂಡಿದ್ದಾರೆ. ಕಥೆ, ಕಾದಂಬರಿ, ಕಾವ್ಯಗಳ ವಿಷಯದಲ್ಲಿ ಅವರೆದುರಿಗೆ ಯಾರೂ ಬುರುಡೆ ಹೊಡೆಯುವುದಕ್ಕೆ ಸಾಧ್ಯವಿಲ್ಲ. ವಿಷಯ ಆಳವಾಗಿ ಗೊತ್ತಿಲ್ಲದೆ ಜನ ಲಘುವಾಗಿ ಮಾತಾಡಿದರೆ "ನೀವು ಹೇಳುತ್ತಿರುವುದಕ್ಕೆ ಏನು ಆಧಾರ?" ಎಂದು ಬಿಗಿಯಾಗಿ ಹಿಡಿದುಬಿಡುತ್ತಾರೆ. ಏಕೆಂದರೆ ಆ ಆಧಾರಗಳೆಲ್ಲ ಇವರ ಸ್ಮೃತಿಯಲ್ಲಿ ಅಚ್ಚಾಗಿದೆ. ಓದಿದ ಯಾವ ಪುಸ್ತಕವನ್ನೂ ಇವರು ಮತ್ತೆ ನೋಡುವ ಅಗತ್ಯವಿಲ್ಲ. ಆದ್ದರಿಂದ ನಮ್ಮ ಕಾಲದಲ್ಲಿ ಇರುವಂಥ ವಿದ್ವತ್ ಪ್ರಪಂಚದ ಒಂದು ವಿಸ್ಮಯ ಎಂದು ನಾನು ಅವರನ್ನು ಕರೆಯುತ್ತೇನೆ. ಸದಾ ಚಟುವಟಿಕೆಯಿಂದ ಇರುತ್ತಾರೆ. ಅವರ ಕೆಲಸಗಳು ಇದೇ ರೀತಿಯಲ್ಲಿ ಮುಂದುವರೆಯಲಿ ಎಂದು ಹಾರೈಸುತ್ತೇನೆ.

– ಡಾ॥ ಎಸ್. ಎಲ್. ಭೈರಪ್ಪ
'ಸರಸ್ವತೀ ಸಮ್ಮಾನ' ಪುರಸ್ಕೃತ ಕನ್ನಡ ಕಾದಂಬರಿಕಾರರು

ಡಾ॥ ಆರ್. ಗಣೇಶ್ ಅವರು ಒಬ್ಬ ಅಪರೂಪದ ವ್ಯಕ್ತಿ. ಸಂಗೀತದ ಅಮೂರ್ತತೆಯನ್ನು ಸಾಹಿತ್ಯದ ಮೂಲಕ ರಚನೆಗಳನ್ನಾಗಿ ಕಂಡುಕೊಳ್ಳುವುದಲ್ಲದೆ ಸಾಹಿತ್ಯದ ಅಮೂರ್ತತೆಯನ್ನು ಸಂಗೀತದ ಮೂಲಕ ಕೃತಿಗಳಾಗಿ ಪರಿವರ್ತಿಸಿದ್ದಾರೆಂದೇ ಹೇಳಬಹುದು. ಜನ್ಮತಃ ಅದ್ವೈತವಾದಿಯಾಗಿದ್ದರೂ ರಾಗಗಳ ವಿಷಯದಲ್ಲಿ ಗಣೇಶ್ ಅವರಿಗೆ ತಾರತಮ್ಯ ಇದೆ ಅಂತಲೇ ಹೇಳಬಹುದು. ಹಿಂದೋಳ, ಶುದ್ಧಧನ್ಯಾಸಿ, ಶುದ್ಧಸಾವೇರಿ, ಮೋಹನ ಅವರಿಗೆ ಪಂಚಪ್ರಾಣ. 1992ನೇ ಇಸವಿಯಲ್ಲಿ ತರಂಗ ಪತ್ರಿಕೆಗೆ ನನ್ನ ಸಂದರ್ಶನವನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಮನೆಗೆ ಮೊತ್ತಮೊದಲಿಗೆ ಬಂದಿದ್ದರು. ಸಂದರ್ಶನದ ಮುಕ್ಕಾಲು ಸಮಯವೆಲ್ಲಾ ಕ್ಲಿಷ್ಟಕರವಾದ ಪ್ರಶ್ನೆಗಳನ್ನೇ ನನ್ನ ಮುಂದೆ ಇಟ್ಟಿದ್ದರು. ಅಂದರೆ ಗ್ರಹಭೇದ ಅಥವಾ ಅವರಿಗೆ ಇಷ್ಟವಾದ ರಾಗಗಳನ್ನು ಹಾಡಿಸುತ್ತಾ ಅದನ್ನೇ ಗಮನಿಸುತ್ತಿದ್ದರು. ಅಮೂರ್ತಸ್ವರೂಪವನ್ನು ಮತ್ತಷ್ಟು ಜಟಿಲಗೊಳಿಸಿ ಅದರಿಂದ ಹೊರಬರುವ ಹೊಸ ಪ್ರಯೋಗಗಳನ್ನು ಅವರು ಸವಿಯುತ್ತಿದ್ದರು. ಅದರಿಂದಾದ ಲಾಭ ಮಣಿಪ್ರವಾಳ, ಗ್ರಹಭೇದ ತಿಲ್ಲಾನ ಮತ್ತು ಗ್ರಹಭೇದರಾಗಮಾಲಿಕಾ. ಕರ್ನಾಟಕ

ಶಾಸ್ತ್ರೀಯ ಸಂಗೀತದಲ್ಲಿ ಎಲ್ಲೂ ಕಾಣದಂತಹ ಹತ್ತು ಹಲವಾರು ರಚನೆಗಳನ್ನು ರಸಭರಿತವಾಗಿ ರಚಿಸಿದ್ದಾರೆ. ಹಳೆ ಬೇರು ಹೊಸ ಚಿಗುರು ಎಂಬಂತೆ ಅವರ ಮನಸ್ಸು ಯಾವಾಗಲೂ ಹೊಸ ಜಾಡನ್ನೇ ಅರಸುತ್ತಿರುತ್ತದೆ. ಇದಕ್ಕೆ ಉದಾಹರಣೆ 'ಸುಮಧ್ಯಮಾ' ರಾಗಮಾಲಿಕಾ. ಈ ರಾಗಮಾಲಿಕೆಯಲ್ಲಿ ಆರೋಹಣ ಒಂದೇ ಆಗಿರುತ್ತದೆ, ಅವರೋಹಣ ಬದಲಾಗುತ್ತಿರುತ್ತದೆ. ಇದು ತುಂಬಾ ಅಪರೂಪವಾದ ಒಂದು ರಾಗಮಾಲಿಕಾ. ಸಂಗೀತ ಪ್ರಪಂಚದಲ್ಲಿ ಯಾರೂ ಇದನ್ನು ಮಾಡಿಲ್ಲ. ಅವರಿಂದ ಸಂಗೀತದ ಮುಖಾಂತರ ಸಾಹಿತ್ಯಕ್ಕೆ ಆದ ಲಾಭ ಹೇಳತೀರದು. ಕುಮಾರವ್ಯಾಸ ಭಾರತ ದರ್ಶನದ ಧ್ವನಿಸುರುಳಿಯಲ್ಲಿ ಅವರು ಅಳವಡಿಸಿರುವ ರಾಗಗಳು 250ಕ್ಕೂ ಹೆಚ್ಚು. ಹಾಗೆ ಸೌಂದರ್ಯಲಹರಿ ಧ್ವನಿ ಸುರುಳಿಯಲ್ಲೂ 100 ಶ್ಲೋಕಗಳಿಗೆ 100 ರಾಗಗಳನ್ನು ಅರ್ಥಗರ್ಭಿತವಾಗಿ ಪ್ರಯೋಗ ಮಾಡಿರುವುದು ಒಂದು ದೊಡ್ಡ ಕೊಡುಗೆಯೆಂದು ಹೇಳಬಹುದು. ಬೆರಳನ್ನು ತೋರಿದರೆ ಹಸ್ತವನ್ನೇ ನುಂಗುತ್ತಾರೆನ್ನುವ ಹಾಗೆ ಗಣೇಶ್ ಅವರು ಅಪರೂಪದ ಚೇತನ. ಹಿಂದೆ ಅವರು ಸಂಗೀತದ ಜ್ಞಾನದಲ್ಲಿ ವಾಮನರಾಗಿದ್ದರೆ ಇಂದು ಅವರು ತ್ರಿವಿಕ್ರಮರಾಗಿದ್ದಾರೆಂದರೆ ತಪ್ಪಾಗಲಾರದು. ಹೀಗೆ ಗಣೇಶ್ ಅವರು ನೂರುಕಾಲ ಬಾಳಲಿ ಎಂದು ಆಶಿಸುತ್ತಾ ಅವರ 50ನೇ ಹುಟ್ಟುಹಬ್ಬಕ್ಕೆ ನನ್ನ ಶುಭಾಶಯಗಳನ್ನು ತಿಳಿಸುತ್ತೇನೆ.

– ಸಂಗೀತಚೂಡಾಮಣಿ ಡಾ॥ ನಾಗವಲ್ಲಿ ನಾಗರಾಜ್
ಪ್ರಸಿದ್ಧ ಕರ್ನಾಟಕ ಶಾಸ್ತ್ರೀಯ ಸಂಗೀತ ವಿದುಷಿ

ಶತಾವಧಾನಿ ಡಾ॥ ರಾ. ಗಣೇಶ್ ಅವರು ನನಗೆ ತುಂಬಾ ಆಪ್ತರು ಹಾಗೂ ಗುರುಗಳೂ ಸಹ. ಅವರಿಗೆ ಅಭಿನವಸರಸ್ವತೀ ಎಂಬ ಹೆಸರು ಬಹಳ ಸಾರ್ಥಕವಾಗಿದೆ. ಅಂತಹ ಮಹಾನುಭಾವರ ಜೊತೆ ಮೂರು ತಿಂಗಳ ಕಾಲ ಅಮೆರಿಕದಲ್ಲಿ ಪ್ರವಾಸ ಮಾಡಿದ್ದು ನನ್ನ ಭಾಗ್ಯ.

ಒಮ್ಮೆ ಕಾವ್ಯ–ಚಿತ್ರ ನಡೆಯುತ್ತಿರುವಾಗ, 'ರಾಮ' ಎನ್ನುವ ಪದವನ್ನು ಬಳಸದೆ ರಾಮನ ಮೇಲೆ ಕವನ ಬರೆಯಿರಿ ಎಂದು ಪ್ರಶ್ನೆ ಹಾಕಿದೆ. ಪ್ರೇಕ್ಷಕರೆಲ್ಲ ಯೋಚನೆ ಮಾಡುತ್ತಿರುವಾಗ, ಗಣೇಶ್ ಅವರು ಏನೂ ಚಿಂತಿಸದೆ, ಇನ್ನೇನು ರಾಮನ ಬಗೆಗೆ ಬರೆಯಬೇಕು, ಅಷ್ಟರಲ್ಲಿ ಇನ್ನೊಬ್ಬರು ಬಾಯಿ ಹಾಕಿದರು. "ಹೆಣ್ಣು ಮಕ್ಕಳು ಶಾಲೆಗೆ ಹೋಗುವಾಗ ಎರಡು ಜಡೆ ಹಾಕಿಕೊಳ್ಳುತ್ತಾರೆ, ಮದುವೆಯಾದಮೇಲೆ ಒಂದು ಜಡೆ ಹಾಕಿಕೊಳ್ಳುತ್ತಾರೆ, ಮಕ್ಕಳಾದ ಮೇಲೆ ಗಂಟು ಹಾಕಿಕೊಳ್ಳುತ್ತಾರೆ. ಏಕೆ?" ಆಗ ಗಣೇಶ್ ಅವರು ಬರೆಯುವುದನ್ನು ತಡೆದು, ತಕ್ಷಣ ಹೀಗೆ ಉತ್ತರ ಹೇಳಿದರು. "ನೋಡಿ, ಹೆಣ್ಣುಮಕ್ಕಳು ಶಾಲೆಗೆ ಹೋಗುವ ಕಾಲದಲ್ಲಿ ಅವನು ಬೇರೆ ನಾನು ಬೇರೆ ಎಂದು ಎರಡು ಜಡೆ ಹಾಕಿಕೊಳ್ಳುತ್ತಾರೆ. ಮದುವೆಯಾದಮೇಲೆ ನಾವಿಬ್ಬರೂ ಒಂದೇ ಎಂದು ಒಂದು ಜಡೆ ಹಾಕಿಕೊಳ್ಳುತ್ತಾರೆ. ಮಕ್ಕಳಕಾಲಕ್ಕೆ ಅವರಿಗಾಗಿ ಗಂಟುಮಾಡಿಡಬೇಕಲ್ಲ; ಅದಕ್ಕೆಂದು ತುರುಬಿಗೆ ಗಂಟನ್ನೇ ಹಾಕಿಕೊಳ್ಳುತ್ತಾರೆ!" ಎಂದು ಹೇಳಿದರು, ಹಾಗೆ ಹೇಳುತ್ತಲೇ ಚಮತ್ಕರದಿಂದ ರಾಮನ ಬಗೆಗೆ ಕವನ ಬರೆದೇಬಿಟ್ಟರು. ಅಪ್ರಸ್ತುತಪ್ರಶ್ನೆಗೆ ಉತ್ತರ ಕೊಟ್ಟೂ, ಕೇವಲ ಮೂರೇ ನಿಮಿಷದಲ್ಲಿ ಕವನವನ್ನೂ ರಚಿಸಿರಬೇಕಾದರೆ, ಅವರ ಏಕಾಗ್ರತೆಯ ಮಟ್ಟ ಎಷ್ಟಿರಬೇಕು ಎನ್ನುವುದು ನನಗೆ ಊಹಿಸಲಿಕ್ಕೂ ಆಗಲಿಲ್ಲ. "ವರ್ಮ ಅವರೆ, ನಿಮಗೂ ಒಂದು ಸಮಸ್ಯೆ ಕೊಡುತ್ತೇನೆ. ಏನೆಂದರೆ, ರಾಮ ಎನ್ನುವ ಅಕ್ಷರ ಬರೆದು, ಅದನ್ನ ಅಳಿಸದೆಯೇ ಸೀತೆಯನ್ನು ಚಿತ್ರಿಸಬೇಕು" ಎಂದು ನನಗೆ ಗಣೇಶರು ಸವಾಲೊಡ್ಡಿದರು. ಆಗ ನಾನು 'ರಾ' ಅನ್ನುವ ಅಕ್ಷರವನ್ನು ಸೀತೆಯ ಮುಖವನ್ನಾಗಿಸಿ 'ದೀರ್ಘ'ವನ್ನು ಕೈ ಮಾಡಿ 'ಮ' ಅಕ್ಷರವನ್ನು ಜಿಂಕೆಯನ್ನಾಗಿ ಮಾಡಿ ಸೀತೆಯು ಜಿಂಕೆಗೆ ಹುಲ್ಲು ತಿನ್ನಿಸುವ ಹಾಗೆ ಬರೆಯುತ್ತಿರಲು ನನಗೆ ತೊಂದರೆ ಮಾಡಲು ಮತ್ತೊಂದು ಸಮಸ್ಯೆ ಬಂದಿತು: "ತುಂಟ ಗಣಪನ ಕಿವಿಯಲ್ಲಿ ಬಳಪದ ಚೂರು ಹೊಕ್ಕಿದೆ, ಪಾರ್ವತಿಯು ಮಗನನ್ನು ಕರೆದುಕೊಂಡು ಬಂದಿದ್ದಾಳೆ. ಆಗ ಯಾವ ವೈದ್ಯರು ಬಂದು ಯಾವ ರೀತಿಯಲ್ಲಿ ಬಳಪವನ್ನು ಕಿವಿಯಿಂದ ತೆಗೆಯುತ್ತಾರೆಂಬುದನ್ನು ಚಿತ್ರಿಸಿ". ನನಗೆ ಒಂದು ಕಡೆ ಭಯ, ಗಣೇಶ್ ಅಂತಹವರು ಮುಂದೆ ಕುಳಿತಿರುವಾಗ ಏನು ಉತ್ತರ ಕೊಡಲಿ ಎಂದು. ಯೋಚನೆ ಮಾಡಿದೆ.

ಪಶುಪತಿಯಾದ ಶಿವನೇ ವೈದ್ಯನಾಗಿ, ಅವನ ಹಾವೇ 'ಸ್ಟೆತಾಸ್ಕೋಪ್' ಆಗಿ, ಪಾರ್ವತಿ ಕರೆದುಕೊಂಡು ಬಂದಿರುವ ಗಣೇಶನನ್ನು ಕೆಳಗೆ ಮಲಗಿಸಿ, ಶಿವನು 'ವ್ಯಾಕ್ಯುಮ್ ಕ್ಲೀನರ್' ತಂದು ಗಣೇಶನ ಕಿವಿಯಿಂದ ಬಳಪ ತೆಗೆಯುವ ಹಾಗೆ ಚಿತ್ರಿಸಿದೆ. ಹೀಗೆ 24 ಘಂಟೆಗಳ ಕಾಲ 165 ಕವನಗಳನ್ನ ಅವರು ಬರೆದರು. 120 ಚಿತ್ರಗಳನ್ನ ನಾನು ಬರೆದೆ. ಇದನ್ನ ಮರೆಯಲು ಸಾಧ್ಯವೇ ಇಲ್ಲ.

ಇದಾಗಿ ಆಗಲೇ 15 ವರ್ಷಗಳಾಗಿವೆ. ಇದುವರೆಗೂ 1012 ಕಾವ್ಯ-ಚಿತ್ರಗಳಾಗಿವೆ. ಪ್ರತಿಯೊಂದೂ ಹೊಚ್ಚಹೊಸದು. ನಾವು ಪೂರ್ವಸಿದ್ಧತೆ ಎಂದೂ ಮಾಡಿರುವುದಿಲ್ಲ. ಗಣೇಶರು ವೇದಿಕೆಯ ಮೇಲೆ ಕುಳಿತಿದ್ದಾಗ ಭೋಜರಾಜನ ಆಸ್ಥಾನದಲ್ಲಿ ಮಹಾಕವಿ ಕಾಳಿದಾಸನನ್ನು ನೋಡಿದ ಹಾಗಾಗುತ್ತದೆ. ಅವರು ಹಣೆಯಲ್ಲಿ ವಿಭೂತಿಯನ್ನು ಅಂದವಾಗಿ ರಾರಾಜಿಸುತ್ತಿರುವುದನ್ನು ನೋಡಿದರೆ ನೋಡುತ್ತಲೇ ಇರಬೇಕು ಎನಿಸುತ್ತದೆ. ಒಮ್ಮೆ ಆ. ರಾ. ಮಿತ್ರ ಅವರು ಒಂದು ಪ್ರಶ್ನೆ ಕೇಳಿದರು. "ವರ್ಮ ಅವರಿಗೆ ಗಣೇಶ್ ಅವರ ಬಗೆಗೆ ಏನನ್ನಿಸುತ್ತದೆ ಎಂದು ಚಿತ್ರ ಬಿಡಿಸಬೇಕು. ಗಣೇಶ್ ಅವರಿಗೆ ವರ್ಮರ ಬಗೆಗೆ ಏನನ್ನಿಸುತ್ತದೆ ಎಂದು ಕವನವನ್ನು ರಚಿಸಬೇಕು." ನಾನು ಗಣೇಶ್ ಅವರ ಕನ್ನಡಕದ ಕೆಳಗೆ ಸೊಂಡಿಲು ಬರೆದು, ವ್ಯಾಸರ ಮುಂದೆ ಕುಳಿತ ಗಣೇಶನಂತೆ ಚಿತ್ರಸಿದೆ. ವ್ಯಾಸರು ಒಂದು ಚಿತ್ರಪಟದ ಒಳಗಿಂದ ಹೊರಕ್ಕೆ ತಲೆಹಾಕಿ ನೋಡುತ್ತಿರುತ್ತಾರೆ, 'ಏನಿದು? ಈ ಗಣೇಶ ಯಾರಪ್ಪಾ!' ಎಂದು. ಹೀಗೆ, ನನ್ನ ಪ್ರಕಾರ ವ್ಯಾಸರೇ ಆಶ್ಚರ್ಯ ಪಡಬಹುದಾದ ಪ್ರತಿಭೆ ಗಣೇಶರದು. ಗಣೇಶರ ಜೊತೆಯ ಒಡನಾಟವು ನನಗೆ ದೈವವು ಅನುಗ್ರಹಿಸಿದ ವರ.

ಒಮ್ಮೆ ಅಮೆರಿಕದಲ್ಲಿ ನಮ್ಮ ಸಂಪ್ರದಾಯದಲ್ಲಿರುವ ಮಹಾಸಂಕಲ್ಪದ ಬಗೆಗೆ ಎರಡೂವರೆ ಘಂಟೆ ನಿರಂತರವಾಗಿ ಉತ್ತರಿಸಿದರು. 'ಜಂಬೂದ್ವೀಪೇ, ಭರತವರ್ಷೇ' ಎಂದೆಲ್ಲ ಹೇಳುತ್ತಿದ್ದಾಗ, ನನಗೆ ಕಾಲದ ನಿಯಮ ಮೀರಿ ಇನ್ನೆಲ್ಲೋ ಆಕಾಶದಲ್ಲಿ ತೇಲಿಹೋಗುವ ಹಾಗೆ ಭಾಸವಾಯಿತು. ಆ ಕ್ಷಣ ನನಗೆ, ಕೃಷ್ಣನು ಅರ್ಜುನನಿಗೆ ವಿಶ್ವರೂಪದರ್ಶನ ಇದೇ ರೀತಿ ತೋರಿಸಿರಬಹುದು ಎಂದೆನ್ನಿಸಿತು. ಅಂದು ರಾತ್ರಿ ಇಬ್ಬರೂ ಅಕ್ಕಪಕ್ಕದ ಮಂಚದ ಮೇಲೆ ಮಲಗಿದ್ದೆವು. ನಾನು ಅದೇ ಗುಂಗಿನಲ್ಲಿದ್ದೆ. ರಾತ್ರಿ ಸುಮಾರು ಹನ್ನೆರಡು ಘಂಟೆ. "ವರ್ಮ ಅವರೇ, ಇನ್ನೂ ಮಲಗಲಿಲ್ಲವೇ?" ಎಂದು ಕೇಳಿದರು. ಇಲ್ಲ ಗಣೇಶರೇ. ನಾನು ಭಾರತದರ್ಶನದ ಬಗೆಗಿನ ಆಲೋಚನೆಯಲ್ಲೇ ಮುಳುಗಿದ್ದೇನೆ, ಸಿಕ್ಕಿಹಾಕಿಕೊಂಡಿದ್ದೇನೆ, ಬಿಡಿಸಿಕೊಂಡು ಬರುವುದೇ ಆಗುತ್ತಿಲ್ಲ ಎಂದೆ. "ರಾತ್ರಿ ಹನ್ನೆರಡು ಘಂಟೆಯಾಗಿದೆ. ಮಲಗಿಕೊಳ್ಳಿ, ನಾಳೆ ಮಾತಾಡೋಣ" ಎಂದರು. ಹೀಗೆ, ಬೇರೆ ಸಮಯಗಳಲ್ಲಿ ಅವರು ಸಾಮಾನ್ಯರ ಹಾಗೆ ಕಾಣಬಹುದು, ಆದರೆ ವೇದಿಕೆ ಹತ್ತಿ ಕೂತಾಗ ಕಾಳಿದಾಸನಂತೆಯೇ ರಾರಾಜಿಸುತ್ತಾರೆ. ಅದೆಂತಹ ಮಹಾನ್ ವ್ಯಕ್ತಿ ಇವರು! ಇವರಿಗೆ ಇದುವರೆಗೂ ಎಂತಹ ಪ್ರಶ್ನೆ ಕೇಳಿದರೂ ಸಮಂಜಸವಾದ ಉತ್ತರವನ್ನು ಕೊಟ್ಟೇ ಇದ್ದಾರೆ.

ನಾನು ಅವರಿಗೆ, ಅವರು ನನಗೆ ಪ್ರಶ್ನೆ ಹಾಕುವುದು ಚಿತ್ರಕಾವ್ಯದಲ್ಲಿ ಪದ್ಧತಿಯೇ ಆಗಿಬಿಟ್ಟಿದೆ. ಒಮ್ಮೆ ಗಣೇಶ್ ಅವರು ನನಗೆ ಇನ್ನೊಂದು ಸವಾಲ್ ಹಾಕಿದರು. "ವರ್ಮ ಅವರಿಗೆ ಏನು ವಿಷಯ ಕೊಟ್ಟರೂ ಯುಕ್ತವಾದ ಚಿತ್ರವನ್ನು ಯಾವತ್ತೂ ಬಿಡಿಸಿಯೇ ಇದ್ದಾರೆ. ಈಗ ಹೇಗೆ ನಿಭಾಯಿಸುತ್ತಾರೆಯೋ ನೋಡೋಣ. ಒಬ್ಬಳು ಸಖಿ ತನ್ನ ಇನಿಯನನ್ನು ನೆನೆಸಿಕೊಂದು ಕಾಯುತ್ತಿರುತ್ತಾಳೆ. ಅವನು ಬರುವುದು ತಡವಾಗುತ್ತದೆ. ಅವಳು ತನ್ನ ಕೈಯಲ್ಲಿ ಒಂದು ಹೂವನ್ನು ಹಿಡಿದು ಕಾಯುತ್ತಿರುತ್ತಾಳೆ. ಈ ಚಿತ್ರವನ್ನು ಗಾಳಿಯಲ್ಲಿ ಬರೆದು ತೋರಿಸಬೇಕು. ಕುಂಚ ಹಾಗೂ ಬಟ್ಟೆಯನ್ನು ಮುಟ್ಟುವಂತಿಲ್ಲ." ಹೇಗೆ ಚಿತ್ರ ಬಿಡಿಸಲಿ! ನಾನೇ ಸಖಿಯ ಹಾಗೆ ಅಭಿನಯಿಸಿ, ಗಾಳಿಯಲ್ಲಿ ಚಿತ್ರ ಬರೆಯುವಹಾಗೆ ಮಾಡಿ ಚಿತ್ರಪಟವನ್ನು ಗಣೇಶ್ ಅವರ ಮುಂದೆ ಹಿಡಿದೆ. ಸಭೆಯಲ್ಲಿದ್ದವರೊಬ್ಬರು "ಎಲ್ಲಿ ಚಿತ್ರ ಕಾಣುತಿಲ್ಲವಲ್ಲ?" ಎಂದರು. ಎಲ್ಲಿ ಕಾಣುತ್ತೆ, ಗಾಳಿಯಲ್ಲಿ ತಾನೆ ಬಿಡಿಸಿರುವುದು ಎಂದೆ. ಹೀಗೆ ಕಾವ್ಯ-ಚಿತ್ರದ ಬಗೆಗೆ ಹೇಳುವುದು ಸಾಕಷ್ಟು ಇದೆ. ಕಾವ್ಯ-ಚಿತ್ರದಲ್ಲಿ ಜನರಿಗೆ ಜೇನು ಸವಿಯುವ ಅನುಭವ ಉಂಟುಮಾಡುತ್ತಾರೆ ನಮ್ಮ

ಗಣೇಶ್ ಅವರು. ಇಂಥವರ ಜೊತೆ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಹಾಗೂ ಇಂಥವರ ಸ್ನೇಹವಿರುವುದು ನನ್ನ ಭಾಗ್ಯ.

– ಕುಂಚಬ್ರಹ್ಮ ಡಾ॥ ಬಿ. ಕೆ. ಎಸ್. ವರ್ಮ
ಚಿತ್ರಾವಧಾನಿ

ಶತಾವಧಾನಿ ಗಣೇಶ್ ಅವರ ಸಂಪರ್ಕವು ನನ್ನ ಪಾಲಿಗೆ ಆಕಸ್ಮಿಕವಾಗಿ ಒದಗಿತು. ಪ್ರಾಯಶಃ ಯಕ್ಷಗಾನವು ಕೂಡ ಅವರಿಗೆ ಆಸಕ್ತಿಯಿರುವ ಕ್ಷೇತ್ರವಾಗಿತ್ತು. ನನ್ನ ಮೂಲಕವಾಗಿ ಒಂದು ಪ್ರಯೋಗಕ್ಕೆ ಇಳಿದರು.

ಮೊದಲಿನಿಂದ ಯಕ್ಷಗಾನದಲ್ಲಿ ಸ್ತ್ರೀವೇಷ ಮಾಡಿರುವ ನನಗೆ "ಇದನ್ನು (ಸ್ತ್ರೀವೇಷವನ್ನು) ನಿರಂತರವಾಗಿ ಮಾಡಲು ಸಾಧ್ಯವೇ?" ಎಂದು ಗಣೇಶರನ್ನು ಕೇಳಿದೆ. ಅದಕ್ಕೆ ಅವರು "ಅವಧಾನದಲ್ಲಿರುವ ರೀತಿಯಲ್ಲಿಯೇ ಯಕ್ಷಗಾನದಲ್ಲಿ ಏಕವ್ಯಕ್ತಿಯಾಗಿ ಪ್ರಯೋಗವನ್ನು ಮಾಡಬಹುದು" ಎಂದು ಹೇಳಿದರು.

ಮೊದಮೊದಲು ನನಗೆ ಸಾಂಪ್ರದಾಯಿಕ ಯಕ್ಷಗಾನದ ಕ್ರಮದಲ್ಲಿರುವುದರಿಂದ ಏಕವ್ಯಕ್ತಿಯನ್ನು ಜನ ಸ್ವೀಕರಿಸುವುದಿಲ್ಲವೆಂಬ ಭಾವವಿತ್ತು. ಆದರೆ ಅವರಿಗೆ ಧೈರ್ಯವಿತ್ತು. ರಸದ ಮಟ್ಟಕ್ಕೆ ಏರಿದಾಗ ಯಾವ ಕಲಾವಿದನೂ ಯಾವ ಹೊತ್ತಿಗೂ ಯಾವಾಗಲೂ ಕೂಡಾ ಸ್ತ್ರೀವೇಷವನ್ನು ಮಾಡಬಹುದೆಂಬ ಅಭಿಪ್ರಾಯದಿಂದ "ಏಕವ್ಯಕ್ತಿ-ಯಕ್ಷಗಾನ-ಭಾಮಿನೀ" ಎನ್ನುವ ಪ್ರಸಂಗದಿಂದ ಮೊದಲು ಪ್ರಾರಂಭಿಸಿದರು.

ಅವರ ಸಂಪರ್ಕದಿಂದ ನನಗೆ ಒಂದು ಸತ್ಯದ ಅರಿವಾಯಿತು. ವೇಷವನ್ನು ನಾನು ಮಾಡುವುದು ಅನ್ನುವುದಕ್ಕಿಂತಲೂ ನಾನೇ ಪಾತ್ರವಾಗಿ, ರಸದ ಮಟ್ಟಕ್ಕೇರಿದ ನಂತರ ನಾನೇ ಇಲ್ಲವಾಗುವಂಥ ಒಂದು ಸುಂದರವಾದ ಅಧ್ಯಾತ್ಮದ ಅನುಭವ ನನಗೆ ಗಣೇಶ್ ಅವರಿಂದ ದೊರಕಿತ್ತು. ಏಕೆಂದರೆ ಅಲ್ಲಿಯವರೆಗೆ ನಾನು ಜನರಿಗಾಗಿ ಬಣ್ಣ ಹಚ್ಚುತ್ತಿದ್ದೇನೋ ಎಂಬ ಭಾವವಿತ್ತು.

ಗಣೇಶರು ಏಕವ್ಯಕ್ತಿ-ಯಕ್ಷಗಾನ ಮತ್ತು ಕಲೆಯ ಮತ್ತು ಶಾಸ್ತ್ರದ ಬಗೆಗಿನ ತಮಗಾದ ಅನುಭವವನ್ನು ಹೇಳಿದರು. ಆಗ ನನಗೂ ಕಲೆಯ ಮೂಲಕ ಆನಂದವನ್ನು ಹಂಚಲು ಸಾಧ್ಯವಾಗುತ್ತದೆಂಬುದು ತಿಳಿಯಿತು. ಇದು ಅವರಿಂದ ತಿಳಿದುಕೊಂಡ ಸತ್ಯ.

ಈ ದೃಷ್ಟಿಯಿಂದ ಪ್ರಯೋಗದಿಂದ ಪ್ರಯೋಗಕ್ಕೆ ಪ್ರಸಂಗದಿಂದ ಪ್ರಸಂಗಕ್ಕೆ ಸಂಪೂರ್ಣವಾಗಿ ಶಾಸ್ತ್ರೀಯ-ಶೈಲಿಯ ಯಕ್ಷಗಾನದ ದಾರಿಯಲ್ಲಿ ನನ್ನನ್ನು ಕರೆದುಕೊಂಡು ಹೋದರು. ಯಕ್ಷಗಾನವು ಜಾನಪದವೆಂದೇ ನಾವೆಲ್ಲ ತಿಳಿದಿದ್ದೆವು. ಗಣೇಶರ ದೃಷ್ಟಿ ಮತ್ತು ಅನುಭವಗಳನ್ನೆಲ್ಲ ಪರಿಗಣಿಸಿದಾಗ, ಯಕ್ಷಗಾನವೆನ್ನುವುದು ಸರ್ವಾಂಗ-ಸುಂದರವಾದಂಥ ನಾಟ್ಯಶಾಸ್ತ್ರವೇ ಎನ್ನುವುದು ನನಗೆ ತಿಳಿಯಿತು.

ಗಣೇಶ್ ಅವರ ಕೃತಿಗಳ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಅವರ ಸಾಹಿತ್ಯಕ್ಕೆ ಸುಲಭವಾಗಿ ಸಂಗೀತವನ್ನು ಅಳವಡಿಸಬಹುದು. ಹಾಗೂ ಅದಕ್ಕೆ ನೃತ್ಯವನ್ನು ಅಳವಡಿಸಲು ಸ್ವಲ್ಪವೂ ಪ್ರಯಾಸ ಪಡಬೇಕಾಗಿಲ್ಲ. ನೋಡುಗರಿಗೆ ನೃತ್ಯದ ಜಾಡು ಮತ್ತು ಕವಿಕಲ್ಪನೆ ಚೆನ್ನಾಗಿ ಅರ್ಥವಾಗುವಂತೆ ಅವರ ಸಾಹಿತ್ಯವಿರುತ್ತದೆ . ಒಂದು ಪಾತ್ರದ ಮನಸ್ಸಿನಲ್ಲಿ ಏನೆಲ್ಲ ಸುಳಿಯುವುದಕ್ಕೆ ಸಾಧ್ಯವಿದೆಯೋ ಅದೆಲ್ಲವನ್ನೂ ಒಬ್ಬ ನಟ ಅಥವಾ ನರ್ತಕ ಅಭಿನಯಿಸುವಂತಿರುವ ಸಾಹಿತ್ಯವನ್ನೇ ಅವರು ಬರೆಯುತ್ತಾರೆ. ಹೀಗೆ, ನೃತ್ಯಕ್ಕೆ ಮತ್ತು ನಟನೆಗೆ ಸನ್ನಿವೇಶವನ್ನು ಲೀಲಾಜಾಲವಾಗಿ ಗ್ರಹಿಸಿ ಆಯಾ ರಸಕ್ಕೆ ಆಯಾ ಪಾತ್ರದ ಭಾವಕ್ಕೆ ಸರಿಯಾದ ರಾಗವನ್ನು ಹೊಂದಾಣಿಕೆ ಮಾಡಿಕೊಂಡು ನಮ್ಮ ಏಕವ್ಯಕ್ತಿ ಪ್ರದರ್ಶನವನ್ನು ನಡೆಸಿಕೊಡುತ್ತಾರೆ. ಹಿಂದೆ ಏಕವ್ಯಕ್ತಿ ಪ್ರದರ್ಶನ ಮಾಡಿದವರು

ಇದ್ದಿರಬಹುದು, ಆದರೆ ರಂಗಭೂಮಿಯಲ್ಲಿ ಸ್ಥಿರವಾಗಿ ನಿರಂತರವಾಗಿ ಎರಡು ಘಂಟೆಗಳ ಕಾಲ ಒಂದು ಪಾತ್ರವನ್ನು ನಿಲ್ಲಿಸುವಂಥ ಶಕ್ತಿ ಕಾಣಿಸಿದ್ದು ಶತಾವಧಾನಿ ಡಾ॥ ರಾ ಗಣೇಶರವರಲ್ಲಿ ಮಾತ್ರ. ಎಲ್ಲಿಯವರೆಗೆಂದರೆ ಈಗಾಗಲೇ ಸಾವಿರಕ್ಕೂ ಮೀರಿ ಪ್ರದರ್ಶನಗಳನ್ನು ಇದು ಕಂಡಿದೆ. ಇನ್ನೂ ಅವರ ಮನಸ್ಸಿನಲ್ಲಿ ಬೇಕಾದಷ್ಟು ಪ್ರಯೋಗಗಳು ಇರಬಹುದು. ಆದರೆ ಶಕ್ತಿ ನಮಗೇ ಇಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ಅವರ ಆಲೋಚನೆಗಳು ನಮಗೆ ಸಿಕ್ಕಿರುವುದು ನಮ್ಮ ಯೋಗ. ನಿಜವಾಗಿಯೂ ಯಕ್ಷಗಾನಕ್ಕೆ ನಾನು ಬಂದದ್ದು ಸಾರ್ಥಕ ಎಂದು ನನಗೆ ಅನ್ನಿಸುತ್ತದೆ. ಗಣೇಶ್ ಅವರು ಇಲ್ಲದಿದ್ದರೆ ನನ್ನ ಯಕ್ಷಗಾನದ ಯಾತ್ರೆ ಅಪೂರ್ಣವೇ ಆಗುತ್ತಿತ್ತು. ನಿಜವಾಗಿ ಹೇಳಬೇಕೆಂದರೆ ಇನ್ನೇನೂ ಮಾಡಬೇಕಾಗಿಲ್ಲವೆಂಬ ಕೃತಕೃತ್ಯತೆಯ ಭಾವನೆಯನ್ನು ಗಣೇಶ್ ಅವರು ತಂದುಕೊಟ್ಟಿದ್ದಾರೆ. ಗಣೇಶ್ ಅವರ ಪಾಂಡಿತ್ಯಪೂರ್ಣವಾದ ಸಾಹಿತ್ಯ, ಮತ್ತು ಅವರ ಉತ್ತುಂಗಕಲ್ಪನೆಗಳನ್ನು, ನನ್ನ ಯೋಚನೆಗೂ ಮೀರಿದ ಶಕ್ತಿಯನ್ನು ನನ್ನ ತಲೆಯೊಳಗೆ ತುಂಬಿದ್ದರಿಂದ ಈ ಮಾರ್ಗದಲ್ಲಿ ಸಂತೃಪ್ತಿಯನ್ನು ಕಂಡಿದ್ದೇನೆ.

– ಶ್ರೀ ಮಂಟಪ ಪ್ರಭಾಕರ ಉಪಾಧ್ಯ
ಪ್ರಸಿದ್ಧ ಯಕ್ಷಗಾನ ಕಲಾವಿದರು

ಗಣೇಶ್ ಅವರು ಮೊದಲ ಬಾರಿ ಕನ್ನಡದಲ್ಲಿ ಶತಾವಧಾನ ಮಾಡುತ್ತಿದ್ದಾರೆಂದು ತಿಳಿದು ಬಹಳ ಸಂತೋಷವಾಯಿತು. ನಮಗೆಲ್ಲ ಗಣೇಶ್ ಅವರು ಪಂಡಿತರಾಗಿ, ಕವಿಯಾಗಿ ಪರಿಚಯ. ಯು.ವಿ.ಸಿ.ಇ. ಇಂಜಿನೀರಿಂಗ್ ಕಾಲೇಜಿನಲ್ಲಿ ಓದುತ್ತಿದ್ದಾಗ ನನಗೆ ಇವರ ಪರಿಚಯ. ಆ ಕಾಲದಲ್ಲೇ ಎಲ್ಲ ಹುಡುಗರ ಮಧ್ಯೆ ತುಂಬಾ ವಿಭಿನ್ನವಾಗಿ ಕಾಣುತ್ತಿದ್ದವರು ಗಣೇಶ್ ಅವರು. ಯಾವಾಗಲೂ ಶಾಲು ಹೊದೆದುಕೊಳ್ಳುತಿದ್ದರು. ನಾವು ನಾಟಕ ಹಾಗೂ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾಗ ಅದರಲ್ಲಿ ಗಣೇಶ್ ಅವರು ನಮ್ಮ ಜೊತೆ ಭಾಗವಹಿಸುತ್ತಿದ್ದರು, ಹಾಗೂ ಸಣ್ಣ–ಪುಟ್ಟ ಸಲಹೆಗಳನ್ನು ನೀಡುತ್ತಿದ್ದರು.

ಇವರು ಎಲ್ಲರಿಗಿಂತ ವಿಭಿನ್ನವಾದವರು, ಎಲ್ಲರಿಗಿಂತ ಬೇರೆಯಾದ ವ್ಯಕ್ತಿ ಅಂತ ನಮಗೆಲ್ಲರಿಗೆ ತಿಳಿದಿತ್ತು. ಅವರು ನಮ್ಮೆಲ್ಲರ ಜೊತೆ ಸಹಜವಾಗಿರುತ್ತಿದ್ದರು. ಆದರೆ ಅವರದೇ ಒಂದು ಲೋಕ ಸೃಷ್ಟಿಮಾಡಿಕೊಂಡಿದ್ದರು. ಇವರು ಮುಂದೆ ಏನು ಆಗುತ್ತಾರೆ ಎಂದು ನಮಗೆ ಸೋಜಿಗ. ಕೊನೆಗೆ ಅವರನ್ನು ದೂರದರ್ಶನದಲ್ಲೋ ಅಥವಾ ಇಂತಹ ಕಾರ್ಯಕ್ರಮದಲ್ಲಿ ನೋಡಿದಾಗ ತುಂಬಾ ಆಶ್ಚರ್ಯವಾಗುತ್ತದೆ. ನಾವುಗಳೆಲ್ಲಾ ಒಂದು ದಾರಿಯನ್ನು ಹಿಡಿದರೆ, ಅವರು ಇನ್ನೊಂದು ದಾರಿಯನ್ನು ಹಿಡಿದರು. ನಾವುಗಳೆಲ್ಲಾ ಇದನ್ನು ಬರೀ ರಾಜರ ಕಾಲದಲ್ಲಿ, ಸಿನಿಮಾಗಳಲ್ಲಿ ನೋಡಿದ್ದೆವು. ಇದನ್ನು ನಿಜಜೀವನದಲ್ಲಿ ನಮ್ಮ ಗಣೇಶ್ ಅವರ ರೂಪದಲ್ಲಿ ನೋಡುತ್ತಿರುವುದು ಬಹಳ ಸಂತೋಷವಾಗುತ್ತದೆ. ಅವರ ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ವೀಕ್ಷಿಸಿದಾಗ ತುಂಬಾ ಸಂತೋಷವಾಯಿತು. ನಂತರ ಲಂಡನ್ನಿನಲ್ಲಿ ಭೇಟಿಯಾದಾಗ ಹಳೆಯ ವಿಧ್ಯಾರ್ಥಿದಿನಗಳನ್ನು ನೆನಪಿಸಿಕೊಂಡೆವು. ಈಗಲೂ ಆಗಾಗ ಬೇರೆ ಬೇರೆ ವೇದಿಕೆಗಳಲ್ಲಿ ಭೇಟಿಯಾಗುತ್ತಿರುತ್ತೇವೆ. ನಿಮ್ಮ ಈ ಶತಾವಧಾನ ಕಾರ್ಯಕ್ರಮಕ್ಕೆ ನನ್ನ ಶುಭಹಾರೈಕೆ ಇದೆ.

– ರಮೇಶ್ ಅರವಿಂದ್
ಪ್ರಸಿದ್ಧ ಚಲನಚಿತ್ರನಟರು

ಭೂಮಿಕೆ

ಶತಾವಧಾನಿ ಡಾ॥ ಆರ್ ಗಣೇಶ್ ಅವರ ಮೊತ್ತಮೊದಲ ತುಂಬುಗನ್ನಡದ ಶತಾವಧಾನದ ಸಂದರ್ಭದಲ್ಲಿ ಹೊರತರುತ್ತಿರುವ ಈ ಸ್ಮರಣಸಂಚಿಕೆಯ ಭೂಮಿಕೆಯನ್ನು ಬರೆಯುವುದು ನಿಜಕ್ಕೂ ಒಂದು ಸವಾಲೇ ಸರಿ. ಕಾರಣವಿಷ್ಟೆ: ಹಲವಾರು ರಂಗಗಳಲ್ಲಿ ಅನುಪಮವಾದ ಸೇವೆ ಸಲ್ಲಿಸಿರುವ ಅನೇಕ ಮಹನೀಯರು ಬರೆದಿರುವ ಬರೆಹಗಳಿರುವಾಗ ನಾನ್ಯಾವ ಹೊಸ ಹೊಳಹನ್ನು ಕೊಟ್ಟೇನು? ಇದಷ್ಟೇ ಅಲ್ಲದೆ ಸ್ವನಾಮಧನ್ಯರಾದ ಗಣೇಶರ ಕಲೆ–ವ್ಯಕ್ತಿತ್ವಗಳನ್ನು ಈ ಮಾಧ್ಯಮದಲ್ಲಿ ಸಮರ್ಥವಾಗಿ ಕಟ್ಟಿಕೊಡಬಲ್ಲ ಸಾಮಥ್ಯವೂ ನನಗಿಲ್ಲ. ಇಲ್ಲಿಯ ಉದ್ದೇಶವೇನಿದ್ದರೂ ಗಣೇಶರ ಸಾರಸ್ವತಸತ್ರದಲ್ಲಿ ಹಲವು ವರ್ಷಗಳಿಂದ ಅನುಭವಿಸುತ್ತಿರುವ ರಸಾನುಭವಕ್ಕೆ ಕೃತಜ್ಞತೆ ಸಮರ್ಪಿಸುವುದಷ್ಟೆ.

ಗಣೇಶರನ್ನು ನೆನೆದಾಗಲೆಲ್ಲ ನನಗೆ ನೆನಪಿಗೆ ಬರುವುದು ಸಾಹಿತ್ಯಲೋಕದ ಮಾಹಾಪಾತ್ರಗಳಲ್ಲೊಂದಾದ ಶೆರ್ಲಾಕ್ ಹೋಮ್ಸನ ಮಾತುಗಳು. 'A Study in Scarlet' ನಲ್ಲಿ ಆತ ಹೇಳುತ್ತಾನೆ – "No man lives or has ever lived who has brought the same amount of study and of natural talent to the detection of crime which I have done" ಎಂದು. ಈ ವಾಕ್ಯದಲ್ಲಿ ಕಾರ್ಯಕ್ಷೇತ್ರವೊಂದನ್ನು ಕಾವ್ಯರಚನೆಗೆ ಬದಲಿಸಿದರೆ ಮಿಕ್ಕದ್ದೆಲ್ಲವೂ ಅನಾಯಾಸವಾಗಿ ಗಣೇಶರಿಗೆ ಅನ್ವಯಿಸುತ್ತದೆ ಎಂದರೆ ಅತಿಶಯೋಕ್ತಿಯೇನೂ ಅಲ್ಲ. ಮೂಲತಃ ಅವರೊಬ್ಬ ಅಭಿಜಾತಶೈಲಿಯ ಶ್ರೇಷ್ಠ ಆಶುಕವಿ. ಇನ್ನು ಅವರ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಗುಣ ಜಿಗೀಷೆ. ಇವೆರಡರ ಫಲಸ್ವರೂಪವಾಗಿ ಅವರೊಬ್ಬ ಶ್ರೇಷ್ಠ ಅವಧಾನಿ. ಸಾಮಾನ್ಯವಾಗಿ ಅವಧಾನವನ್ನು ಕಲೆಗಿಂತ ಹೆಚ್ಚಾಗಿ ಕ್ರೀಡೆಯೆಂದರೆ ಸರಿಯಾದೀತು. ಅದು ಕ್ರೀಡೆಯಿಂದ ಕಲೆಯ ಮಟ್ಟಕ್ಕೆ ಏರಬೇಕಾದರೆ ರಸಗರ್ಭಿತವಾದ ಪ್ರಶ್ನೆಗಳ ಜೊತೆಗೆ ಅಸಾಧಾರಣವಾದ ಶಕ್ತಿ–ಸಾಮರ್ಥ್ಯಗಳುಳ್ಳ ಅವಧಾನಿಯು ಅನಿವಾರ್ಯ. ಈ ದೃಷ್ಟಿಯಿಂದ ನೋಡಿದಾಗ ರಸಗರ್ಭಿತವಾದ ಪ್ರಶ್ನೆಗಳಿದ್ದ ಯಾವ ಸಂದರ್ಭದಲ್ಲೂ ಗಣೇಶರ ಅವಧಾನವು ಕಲೆಯ ಸೌಧದಿಂದ ಕೆಳಗಿಳಿದದ್ದಿಲ್ಲ. ಇದಕ್ಕೆ ಕಾರಣ ಅವರು ತಮ್ಮ ಕಾವ್ಯರಚನೆಯ ವಸ್ತು–ವಿನ್ಯಾಸಗಳಲ್ಲಿ ತೋರುವ ವೈವಿಧ್ಯ–ವೈದುಷ್ಯ. ಇದು ಸಿದ್ಧಿಸಿರುವುದು ಅವರು ಹತ್ತಾರು ಕ್ಷೇತ್ರಗಳಲ್ಲಿ ಗಳಿಸಿಕೊಂಡಿರುವ ಅಸಾಮಾನ್ಯವಾದ ವಿದ್ವತ್ತಿನಿಂದಾಗಿ. ತಮಗೆ ಅತ್ಯಂತ ಪ್ರಿಯವಾದ ಅಲಂಕಾರಶಾಸ್ತ್ರವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿಕೊಂಡಿರುವ ಗಣೇಶರು ಅದರ ಬೆಳಕಿನಲ್ಲಿ ಹತ್ತಾರು ಶಾಸ್ತ್ರಗಳ ಹೃದಯವನ್ನು ಅರಿತುಕೊಂಡವರು. ಇದಷ್ಟೆ ಅಲ್ಲದೆ ಹತ್ತಾರು ದೇಶೀಯ–ವಿದೇಶೀಯ ಭಾಷೆಗಳ ಪ್ರಾತಿನಿಧಿಕಸಾಹಿತ್ಯವೆಲ್ಲವನ್ನೂ ಆಯಾ ಭಾಷೆಗಳಲ್ಲೇ ಓದಿ ರಕ್ತಗತಮಾಡಿಕೊಂಡವರು. ಈ ಎಲ್ಲ ಅಧ್ಯಯನವೂ ಪರ್ಯವಸಾನವಾಗುವುದು ಅವರ ಪದ್ಯರಚನೆಯಲ್ಲಿ. ಆದ್ದರಿಂದಲೇ ಅವರ ಅವಧಾನಗಳಲ್ಲಿ ಅಂತಹ ಅಪರೂಪದ ಆಕರ್ಷಣೆಯಿರುವುದು.

ಇಂತಹ ಗುಣಮಟ್ಟಕ್ಕೆ ಒಗ್ಗಿಹೋದ ರಸಿಕರಿಗೆ ಕೂಡ ನಿರಂತರವಾಗಿ 'ಆಹಾ' ಎಂದು ಉದ್ಗರಿಸುವಂತೆ ಮಾಡುವುದು ಗಣೇಶರ ಅವಧಾನದ ನಿತ್ಯನವೀನತೆಯ ಲಕ್ಷಣ. ಇದಕ್ಕೆ ಕಾರಣ ಅವರು ನಿರಂತರವಾಗಿ ಅವಧಾನದ ಪಾರಂಪರಿಕವಾದ ಚೌಕಟ್ಟುಗಳನ್ನು ಶಾಸ್ತ್ರೀಯವಾಗಿ ಮೀರುವುದು. ಇಂತಹ ಕೆಲವು ಪ್ರಾತಿನಿಧಿಕವಾದ ಉದಾಹರಣೆಗಳನ್ನು ಗಮನಿಸಬಹುದು. ನಿಷೇಧಾಕ್ಷರಿಯಲ್ಲಿ ಹಲವು ಬಾರಿ ಒಂದು ಅಕ್ಷರಕ್ಕೆ ಬದಲಾಗಿ ಒಂದೊಂದು ವ್ಯಂಜನವರ್ಗವನ್ನೇ ನಿಷೇಧವಾಗಿ ಸ್ವೀಕರಿಸಿದ್ದುಂಟು. ಶಿಖರಿಣಿಯಂತಹ ದೊಡ್ಡವೃತ್ತದಲ್ಲಿ ನಿಷೇಧಾಕ್ಷರಿಯನ್ನು ನಿಭಾಯಿಸಿದ್ದುಂಟು. ಇನ್ನು ಚಿತ್ರಕಾವ್ಯಕ್ಕೆ ಬಂದರೆ ಅಲ್ಲಿಯವರೆಗೆ ನೋಡದ–ಕೇಳದ ಬಂಧಗಳಲ್ಲಿ ಪದ್ಯ ರಚಿಸಿದ್ದು ಹಲವು ಬಾರಿ. ಪರಿಚಿತವಾದ ಬಂಧಗಳಲ್ಲಿ ಕೂಡ ವೈಶಿಷ್ಟ್ಯ ಮೆರೆಯುವುದುಂಟು. ಉದಾಹರಣೆಗೆ "ಗುಣಿತಾಕ್ಷರೀ" ಎಂಬ ಪ್ರಭೇದದಲ್ಲಿ ಯಾವುದಾದರೂ

ಒಂದು ವ್ಯಂಜನದ ಕಾಗುಣಿತದ ಸರಣಿಯಷ್ಟೂ ಪದ್ಯದಲ್ಲಿ ಎಲ್ಲಾದರೂ ಹೇಗಾದರೂ ಬಂದಿರಬೇಕು ಎಂಬ ನಿಯಮ. ಗಣೇಶರು ಅದನ್ನು ಯಾವಾಗಲೂ ಕಾಗುಣಿತದ ಆನುಪೂರ್ವಿಯಲ್ಲೇ ಮಾಡುತ್ತಾರೆ. ಕೆಲವೊಮ್ಮೆ ಒಂದೇ ಪ್ರಶ್ನೆಗೆ 2 ಬಂಧಗಳಲ್ಲಿ ಪದ್ಯ ರಚಿಸಿದ್ದೂ ಉಂಟು. ಇನ್ನು ಆಶುಕವಿತೆಗೆ ಬಂದರೆ, 4 ಆಶುಕವಿತೆಗಳು ಅವಧಾನಕ್ಕೆ ಅಗತ್ಯ. ಆಪ್ತವಾದ ರಸಿಕವೃಂದ ಮತ್ತು ಸಮಯಗಳಿದ್ದಾಗ ಪೃಚ್ಛಕರ ಪರಿಚಯವೂ ಆಶುಕಾವ್ಯಗಳ ಮೂಲಕವೇ ನಡೆಯುತ್ತದೆ. ಹೃದ್ಯವಾದ ಕಾವ್ಯವಾಚನವಾದಲ್ಲಿ ಉತ್ತರಕ್ಕೆ ಹೊರತಾಗಿ ವಾಚಕರ ಪ್ರಶಂಸೆ ಕೂಡ ಪದ್ಯರೂಪದಲ್ಲೇ ನಡೆಯುತ್ತದೆ. ಹೀಗೆ ಅವಧಾನದ ಅಂಗವಾದ ಆಶುಕವಿತೆಯೂ ಸೇರಿ 17–18 ಆಶುಪದ್ಯಗಳನ್ನು ಹೇಳಿದ್ದುಂಟು (1 ಪ್ರಾರ್ಥನೆ; 8 ಪೃಚ್ಛಕಪರಿಚಯ; 4 ಆಶುಕವಿತೆ; 4 ಕಾವ್ಯವಾಚನವಿವರಣೆ; 1 ಕಾವ್ಯವಾಚನಪ್ರಶಂಸೆ). ನಂತರ ಕಾವ್ಯವಾಚನಕ್ಕೆ ಬಂದರೆ ಅಪರೂಪದ, ಅಲ್ಪಖ್ಯಾತಿಯ ಕೃತಿಗಳನ್ನು ಕೂಡ ಅವುಗಳ ನಾಮಾಂತರಗಳೊಡನೆ ಗುರುತಿಸಿ ವಿವರಿಸಿದ್ದುಂಟು. ಗಣೇಶರ ಅವಧಾನಗಳಲ್ಲಿ ಅಪ್ರಸ್ತುತಪ್ರಸಂಗಕ್ಕೆ ಸಿಗುವಷ್ಟು ಅವಕಾಶ ಎಲ್ಲಿಯೂ ಯಾವ ಅವಧಾನಿಯೂ ಕೊಡುವದನ್ನು ನಾನಂತೂ ಕಾಣೆ. ಇದಲ್ಲದೆ ಅವಧಾನದಲ್ಲಿ ಯಾವ ಛಂದಸ್ಸೂ ಒಂದು ಬಾರಿಗಿಂತ ಹೆಚ್ಚಾಗಿ ಪ್ರಯೋಗ ಮಾಡಬಾರದೆಂಬುದೊಂದು ವ್ರತ. ಹೀಗೆ ಗಣೇಶರ ಅವಧಾನದ ಸ್ವಾರಸ್ಯಗಳು ಅಪಾರ. ಒಟ್ಟಿನಲ್ಲಿ ಗಣೇಶರ ಅವಧಾನವನ್ನು ವರ್ಣಿಸಬೇಕೆಂದರೆ ಕವಿಕುಲಗುರು ಕಾಳಿದಾಸನನ್ನೇ ಆಶ್ರಯಿಸಬೇಕು – "ವಿಯತಿ ಬಹುತರಂ ಸ್ತೋಕಮುರ್ವ್ಯಾಂ ಪ್ರಯಾತಿ" – ಹೆಚ್ಚಾಗಿ ಆಕಾಶದಲ್ಲೇ ಇರುತ್ತದೆ ; ಆಗೊಮ್ಮೆ ಈಗೊಮ್ಮೆ ಭೂಮಿಯನ್ನು ಸ್ಪರ್ಶಿಸುತ್ತದೆ.

ಇನ್ನು ಅವರ ಸಹೃದಯತೆಯನ್ನು ಗಮನಿಸಬಹುದು. ಒಂದು ಒಳ್ಳೆಯ ಪುಸ್ತಕವನ್ನು ಓದಿದರೆ ಅಥವಾ ಒಳ್ಳೆಯ ಭಾಷಣವನ್ನು ಕೇಳಿದರೆ ಆಯಾ ಕಲಾವಿದರನ್ನು ಮಾತನಾಡಿಸಿ ಮೆಚ್ಚುಗೆ ಸೂಚಿಸುವ ತನಕ ಅವರಿಗೆ ನೆಮ್ಮದಿಯಿಲ್ಲ. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ನಾಗರತ್ನಮ್ಮನವರ ಬದುಕಿನ ಬಗೆಗೆ ಇಂಗ್ಲಿಷಿನಲ್ಲಿ 'The Devadasi and the Saint' ಎಂಬ ಮನೋಹರವಾದ ಪುಸ್ತಕವನ್ನು ಓದಿದ ಗಣೇಶರು ಅದರ ಕರ್ತೃವಾದ ವಿ. ಶ್ರೀರಾಮ್ ಅವರನ್ನು ಇ–ಮೇಲಿನ ಮೂಲಕ ಸಂಪರ್ಕಿಸುವ ತನಕ ಚಡಪಡಿಸುತ್ತಿದ್ದರು. ಹಾಗೆಯೇ ಸುಮಾರು ಒಂದು ವರ್ಷದ ಕೆಳಗೆ ವಿಜಯಾ ಕಾಲೇಜಿನಲ್ಲಿ ಆಯೋಜಿಸಿದ್ದ ಸಮ್ಮೇಳನವೊಂದರ ಅಂಗವಾಗಿ ಪ್ರಹ್ಲಾದಾಚಾರ್ಯ ಎಂಬುವವರ ಮನೋಹರವಾದ 'Shadow Play' ಪ್ರದರ್ಶನವನ್ನು ನೋಡಿದಾಗ ಅವರನ್ನು ಹುಡುಕಿಕೊಂಡು ಹೋಗಿ ಅವರ ಕೈಗಳನ್ನು ಪರೀಕ್ಷಿಸಿ ಅಭಿನಂದಿಸಿ ಬಂದರು. ಇನ್ನು ಅವಧಾನಗಳಲ್ಲಂತೂ ಪೃಚ್ಛಕರ ಪದ್ಯಗಳಿಗೆ ಔಪಚಾರಿಕವಲ್ಲದ ಯಥೋಚಿತವಾದ ಮೆಚ್ಚುಗೆ ಸಂದೇ ಸಲ್ಲುತ್ತದೆ. ಹೀಗೆ ಒಳ್ಳೆಯದನ್ನು ಅನುಭವಿಸಿ ಮೆಚ್ಚುಗೆ ಸೂಚಿಸುವುದರಲ್ಲಿ ಕಾರ್ಪಣ್ಯವಿಲ್ಲವೇ ಇಲ್ಲ. ಅವರಿಗೆ ಸ್ವಕ್ಷೇತ್ರವಾದ ಸಾಹಿತ್ಯದಷ್ಟೆ ಗಾಢವಾದ ಪ್ರೀತಿ–ಆಸಕ್ತಿಗಳು ಇತರ ಮೂಲಭೂತಕಲೆಗಳಾದ ಸಂಗೀತ, ನೃತ್ಯ, ಚಿತ್ರ ಹಾಗೂ ಶಿಲ್ಪಗಳಲ್ಲಿ ಕೂಡ ಉಂಟು. ಆಯಾ ಕಲೆಗಳ ರಂಗಪ್ರಯೋಗಗಳು ಎಲ್ಲೇ ನಡೆಯಲಿ ಹೋಗಿ ಆಸ್ವಾದಿಸುವುದಾಗುತ್ತದೆ. ತಮ್ಮ ಅಲಂಕಾರಶಾಸ್ತ್ರದ ಗಟ್ಟಿನೆಲೆಯಿಂದ ಅವುಗಳ ಮರ್ಮವನ್ನು ಶೋಧಿಸಿ ಆಯಾ ಕಲೆಗಳಲ್ಲಿನ ಪ್ರಯೋಗಪರಿಣತರೊಡನೆ ಚರ್ಚಿಸಿ ಸ್ವಬೋಧಪರಿಶುದ್ಧಿಯನ್ನೂ ಸಾಧಿಸುವುದಾಗುತ್ತಿರುತ್ತದೆ. ಸಮಾನಮನಸ್ಕರಾದ ಇಂತಹ ಕಲಾವಿದರೊಡನೆ ಆಯಾ ಕಲೆಗಳಲ್ಲಿನ ಚೌಕಟ್ಟುಗಳನ್ನೂ ಶಾಸ್ತ್ರೀಯವಾಗಿ ಮೀರುವುದಾಗುತ್ತದೆ. ಇದಕ್ಕೆ ಪ್ರಾತಿನಿಧಿಕವಾದ ಉದಾಹರಣೆ ಅವರದೇ ಪರಿಕಲ್ಪನೆಯಿಂದ ಮೂಡಿಬಂದ "ಕಾವ್ಯ–ಚಿತ್ರ–ಗೀತ–ನೃತ್ಯ" ಪ್ರಯೋಗಗಳು. ಇದರ ಕೀರ್ತಿ ಈ ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಳ್ಳಲು ಸಮ್ಮತಿಸಿ ಅದರ ಯಶಸ್ಸಿಗೆ ಪ್ರಾಮಾಣಿಕವಾಗಿ ದುಡಿದಿರುವ ಕುಂಚಬ್ರಹ್ಮ ಬಿ. ಕೆ. ಎಸ್ ವರ್ಮಾ, ಸಂಗೀತಚೂಡಾಮಣಿ ಡಾ॥ ನಾಗವಲ್ಲೀ ನಾಗರಾಜ್, ಚಿತ್ರನಟ ಹಾಗೂ ನೃತ್ಯಪಟು ಶ್ರೀಧರ್, ಕೀರ್ತಿಶೇಷರಾದ ಶ್ರೀಮತಿ ಸುಂದರೀ ಸಂತಾನಂ, ಶ್ರೀ ಮಂಟಪ ಪ್ರಭಾಕರ ಉಪಾಧ್ಯ, ಶ್ರೀ ಹೆಚ್. ಎಸ್. ವೇಣುಗೋಪಾಲ್ ಮುಂತಾದ ಹಲವಾರು ಕಲಾವಿದರಿಗೂ ಸಲ್ಲುತ್ತದೆ. ಸುಮಾರು 1000 ಪ್ರದರ್ಶನಗಳನ್ನು ಕಂಡಿರುವ ಈ ಪ್ರಯೋಗವು ಹಲವು ರೀತಿಗಳಲ್ಲಿ ವಿನೂತನವಾದದ್ದು. ಇದು ಒಂದೆಡೆ ಮೂಲಭೂತಕಲೆಗಳೆಲ್ಲವುಗಳಲ್ಲಿನ ಸಾಮರಸ್ಯವನ್ನು ತೋರಿಸಿದರೆ ಮತ್ತೊಂದೆಡೆ ಒಂದೇ ವಸ್ತುವಿನ

ಬೇರೆ ಬೇರೆ ಆಯಾಮಗಳು ಬೇರೆ ಬೇರೆ ಕಲಾಮಾಧ್ಯಮಗಳಲ್ಲಿ ಹೇಗೆ ಬಳಕೆಗೊಳ್ಳುತ್ತವೆ ಎಂಬುದನ್ನು ಪ್ರದರ್ಶಿಸುತ್ತದೆ. ಇಲ್ಲಿ ಕಾವ್ಯ, ಗೀತ, ನೃತ್ಯ, ಚಿತ್ರ – ಎಲ್ಲ ಆಶುವಾಗಿ ನಡೆಯುತ್ತದೆ. ತಮ್ಮ ಕಲೆಗಳಲ್ಲಿ ಅಪಾರವಾದ ಪ್ರತಿಭೆ–ಪಾಂಡಿತ್ಯಗಳಿರುವ ಕಲಾವಿದರಿಗಷ್ಟೆ ಇಲ್ಲಿ ಸುಖಪ್ರಸವ. ಗಣೇಶರ ಆಶುಕಾವ್ಯಪ್ರತಿಭೆ ಎಲ್ಲರಿಗೂ ತಿಳಿದದ್ದೇ. ಆದರೆ ಈ ಪ್ರಯೋಗದಿಂದ ಬೇರೆ ಕಲಾವಿದರ ಆಶುಪ್ರಯೋಗಪರಿಣತಿಯು ಲೋಕಕ್ಕೆ ತಿಳಿಯುವಂತಾಯಿತು. ಇದಷ್ಟೆ ಅಲ್ಲದೆ, ಸಾಮಾನ್ಯವಾಗಿ ಈ ಪ್ರಯೋಗಗಳಲ್ಲಿ ಚಿತ್ರ–ಗೀತ–ನೃತ್ಯಗಳು ಪಡೆಯುವಷ್ಟು ಮೆಚ್ಚುಗೆ–ಮನ್ನಣೆಗಳು ಹಲವು ಬಾರಿ ಕಾವ್ಯಕ್ಕೆ ದಕ್ಕುವುದಿಲ್ಲ. ಇದಕ್ಕೆ ಕಾರಣ, ಮಿಕ್ಕ ಮೂರು ಪ್ರಕಾರಗಳಲ್ಲಿನ ಪ್ರಕ್ರಿಯೆ–ಪರಿಣಾಮಗಳೆರಡೂ ಒಟ್ಟೊಟ್ಟಿಗೇ ನೇರವಾಗಿ ಇಂದ್ರಿಯಮಾರ್ಗದಿಂದ ಗ್ರಹಿಸಲ್ಪಡುತ್ತವೆ. ಕಾವ್ಯಕ್ಕೆ ಈ ಅನುಕೂಲವಿಲ್ಲ. ಕಾವ್ಯದ ಪ್ರಕ್ರಿಯೆ ಕಾಣುವಂಥದ್ದಲ್ಲ. ಪರಿಣಾಮವಾದರೋ ಅದೇ ರಂಗದಲ್ಲಿ ವಿರಾಜಿಸುವ ಇತರ ಮಾಧ್ಯಮಗಳಷ್ಟು ಮೂರ್ತವಲ್ಲ. ಇದರ ಪ್ರಸ್ತಾವ ಮಾಡಿದ್ದರ ಕಾರಣವಿಷ್ಟೆ – ಇಂದು ನಮ್ಮ ನಡುವೆ ಇರುವ ಎಷ್ಟೋ ಮಂದಿ ಕಲಾವಿದರು ತಮ್ಮದೇ ಕಲಾಪ್ರಕಾರದ ಇತರ ಕಲಾವಿದರ ಪ್ರದರ್ಶನಗಳಿಗೆ ಹೋಗುವುದು ವಿರಳ. ಇನ್ನು ಬೇರೆ ಕಲಾಪ್ರಕಾರಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದಂತೂ ಇನ್ನೂ ವಿರಳ. ಇವೆಲ್ಲ ನಡೆದರೂ ನಡೆದೀತು; ಆದರೆ ರಂಗಸ್ಥಳದಲ್ಲಿ ಬೇರೆ ಕಲಾವಿದರು ತಮಗಿಂತ ಹೆಚ್ಚು ಮೆಚ್ಚುಗೆ ಗಳಿಸುವಂತಹ ಪ್ರಯೋಗವನ್ನು ಸೃಷ್ಟಿಸಿ ಬೆಳೆಸುವಂತಹ ಔದಾರ್ಯವಿರುವುದು ಪ್ರಾಯಶಃ ಗಣೇಶರಿಗೊಬ್ಬರಿಗೇ ಎಂದು ಹೇಳಬಹುದು. ಈ ವಾದಗಳೆಲ್ಲವೂ ಅವರ ಮತ್ತೊಂದು ಪರಿಕಲ್ಪನೆಯಾದ "ಏಕವ್ಯಕ್ತಿ–ಯಕ್ಷಗಾನ"ಕ್ಕೂ ಅನ್ವಯಿಸುತ್ತದೆ. ಯಕ್ಷಗಾನದ ವ್ಯಾಕರಣವನ್ನು ಬಳಸಿಕೊಂಡು ಅದಕ್ಕೆ ಸಾತ್ತ್ವಿಕಾನುಭವದ ಹೂರಣವನ್ನು ತುಂಬಿದ ಅವರ ಪರಿಕಲ್ಪನೆ 1000ಕ್ಕೂ ಹೆಚ್ಚು ಸಫಲಪ್ರದರ್ಶನಗಳನ್ನು ಕಂಡಿದೆ. ಮಂಟಪ ಪ್ರಭಾಕರ ಉಪಾಧ್ಯರ ಸಾತ್ತ್ವಿಕಾಭಿನಯಶಕ್ತಿಯು ಲೋಕಕ್ಕೆ ಕಾಣುವಂತೆ ಮಾಡಿದ್ದು ಈ ಪ್ರಯೋಗ. ಈ ಪ್ರಯೋಗದಲ್ಲಿ ಪ್ರದರ್ಶಿಸಲ್ಪಡುವ ಪ್ರಸಂಗಗಳೆಲ್ಲವೂ ಗಣೇಶರ ಕವಿಹೃದಯದಿಂದಲೇ ಹೊಮ್ಮಿರುವಂಥವು. ಇನ್ನು ಸಂಗೀತದ ಕ್ಷೇತ್ರಕ್ಕೆ ಬಂದರೆ ಅವರು ರಚಿಸಿರುವ ಕೃತಿಗಳು ಹಲವಾರು. ಅದನ್ನು ಅತಿಸಮರ್ಥವಾಗಿ ಹಾಡಿರುವವರು ಸಂಗೀತಚೂಡಾಮಣಿ ಡಾ॥ ನಾಗವಲ್ಲೀ ನಾಗರಾಜ್ ಅವರು. ಅಷ್ಟನಾಯಿಕಾಪದಗಳು, ರಾಗಮಾಲಿಕೆಗಳು, ತಿಲ್ಲಾನಗಳು, ಕೃತಿಗಳು ಇತ್ಯಾದಿಯಾಗಿ ಹಲವೆಡೆ ಗಣೇಶರ ಪ್ರತಿಭೆ ದುಡಿದಿದೆ. ಅವುಗಳನ್ನು ಕೇಳಿದಾಗ ಲಲಿತವಾದ ಸಾಹಿತ್ಯವು ಸಂಗೀತಕ್ಕೆ ಕೊಡಬಹುದಾದ ಮಾಧುರ್ಯದ ಪರಿಚಯವಾಗುತ್ತದೆ. ಅವರ ಈ ಆಯಾಮವನ್ನು ಇತರ ಸಂಗೀತಗಾರರು ದುಡಿಸಿಕೊಳ್ಳದಿರುವುದು ವಿಷಾದದ ಸಂಗತಿ. ಇದಕ್ಕೆ ಬಹುಮಟ್ಟಿಗೆ ಇಂದಿನ ಸಂಗೀತಪ್ರಪಂಚದ ಸಂಪ್ರದಾಯಜಡತ್ವವೂ ಕಾರಣ ಎನ್ನಬಹುದು. ಈ ಮಾತು ಶುದ್ಧವಾದ ರಾಗವಿಸ್ತರಣೆಯತ್ತಲಷ್ಟೆ ಗಮನ ನೀಡುವ ಹಿಂದೂಸ್ತಾನಿ ಸಂಗೀತಕ್ಕೆ ಅಷ್ಟಾಗಿ ಅನ್ವಯಿಸುವುದಿಲ್ಲ. ಆದರೆ ಕೃತಿಗಳನ್ನೇ ಆಧಾರವಾಗಿಟ್ಟುಕೊಂಡಿರುವ ಕರ್ಣಾಟಕಶಾಸ್ತ್ರೀಯಸಂಗೀತಕ್ಕಂತೂ ಇಡಿಯಾಗಿ ಒಪ್ಪುತ್ತದೆ. ಇನ್ನು ಗಣೇಶರ ಸಾರಥ್ಯದಲ್ಲಿ ನಡೆದ ಭಾರತೀಯಶಾಸ್ತ್ರೀಯಸಂಗೀತದ ರಾಗಗಳ ಪರಿಚಯಾತ್ಮಕಪ್ರಯೋಗವಾದ 'ರಾಗಾನುರಾಗ' ಕೂಡ ಅಪಾರವಾದ ಮೆಚ್ಚುಗೆ ಗಳಿಸಿದೆ. ಇದರಲ್ಲಿ ರಾಗಗಳ ರೂಪ–ಸ್ವರೂಪಗಳನ್ನು ಪಾರಂಪರಿಕವಾದ ಕೃತಿಗಳು, ಚಿತ್ರಸಂಗೀತ, ರಂಗಸಂಗೀತ ಮುಂತಾದ ಹಲವು ಉದಾಹರಣೆಗಳ ಮೂಲಕ ಮನದಟ್ಟು ಮಾಡಿಸುವ ಪರಿ ಅನ್ಯಾದೃಶವಾದದ್ದು. ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಮೊದಲು ನಡೆದ ಈ ಪ್ರಯೋಗವು ಈಗ ಬೇರೆ ವೇದಿಕೆಗಳಲ್ಲಿ ಕೂಡ ನಡೆಯುತ್ತಿದೆ. ಇದಕ್ಕೆ ಕೂಡ ಎಂದಿನಂತೆ ಸಹಕಾರ ನೀಡುತ್ತಿರುವವರು ಸಂಗೀತಚೂಡಾಮಣಿ ಡಾ॥ ನಾಗವಲ್ಲೀ ನಾಗರಾಜ್ ಅವರು. ಇನ್ನು ನೃತ್ಯದ ವಲಯದಲ್ಲಂತೂ ಗಣೇಶರಿಗೆ ಅಗ್ರತಾಂಬೂಲ ಸಂದೇ ಸಲ್ಲುತ್ತದೆ. ಪದ್ಮಭೂಷಣ ಡಾ॥ ಪದ್ಮಾ ಸುಬ್ರಹ್ಮಣ್ಯಂ ಅವರೇ ಗಣೇಶರಿಗಿಂತ ಉತ್ತಮನಾದ ಸಹೃದಯನು ನನ್ನ ಪ್ರಯೋಗಗಳಿಗೆ ಲಭಿಸಿಲ್ಲ ಎಂದು ಹೇಳಿರುವುದಷ್ಟೆ ಸಾಕು – ಇನ್ನೇನನ್ನೂ ಹೇಳಲು ಬಾಕಿಯಿರದು. ನೃತ್ಯಪಟುಗಳಿಗೆ ನಿರಂತರವಾಗಿ ಪ್ರಯೋಗದಲ್ಲಿ ಬಳಸಬಹುದಾದ ಸಲಹೆಗಳನ್ನು ನೀಡುವುದಲ್ಲದೆ ಆಗಾಗ ನೃತ್ಯಪ್ರಯೋಗಗಳಿಗೆ ಸಾಹಿತ್ಯವನ್ನು ಒದಗಿಸುತ್ತಿರುವುದುಂಟು. ಇದಷ್ಟೆ ಅಲ್ಲದೆ ಹತ್ತು ವರ್ಷಗಳಿಂದ ಆಪ್ತವಾದ ಕಲಾರಸಿಕವೃಂದಕ್ಕೆ ಭರತನ

"ನಾಟ್ಯಶಾಸ್ತ್ರ"ವನ್ನು ಸಹ ಬೋಧಿಸುತ್ತಿದ್ದಾರೆ. ಹೀಗೆ ತಮಗೆ ಆನಂದ ನೀಡಿರುವ ಎಲ್ಲ ಕಲಾಪ್ರಕಾರಗಳಿಗೂ ಋಣಿಯಾಗಿದ್ದು ಯಥೋಚಿತವಾಗಿ ಅವುಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆ.

ಇನ್ನು ಸ್ವಕ್ಷೇತ್ರವಾದ ಸಾಹಿತ್ಯದಲ್ಲಿ ಗಣೇಶರ ಚಟುವಟಿಕೆಗಳಿಗೆ ಲೆಕ್ಕವೇ ಇಲ್ಲ. ಅವರು ಆಳವಾಗಿ ಅಧ್ಯಯನ ಮಾಡಿರುವ ಭಾರತೀಯಸಂಸ್ಕೃತಿ ಅವರ ಮುಖ್ಯವಾದ ಸಂಶೋಧನಕ್ಷೇತ್ರ. ಅದರ ಯಾವುದೇ ಆಯಾಮದ ಬಗೆಗಾಗಲೀ ಅವರಷ್ಟು ಸಾರೋದಾರವಾಗಿ, ತರ್ಕಶುದ್ಧವಾಗಿ, ಸಾಲಂಕಾರವಾಗಿ ಹಾಗೂ ಪರಿಣಾಮಕಾರಿಯಾಗಿ ಉಪನ್ಯಾಸ ಮಾಡುವ ಮತ್ತೊಬ್ಬ ವಾಗ್ಮಿ ಇಂದು ನಮ್ಮ ನಡುವೆ ಇಲ್ಲ ಎಂದರೆ ತಪ್ಪಾಗದು. ಅವರು ಪ್ರೌಢಮನೋಹರವಾಗಿ ವ್ಯಾಖ್ಯಾನಿಸಿ ಧ್ವನಿಮುದ್ರಿತವಾಗದಿರದ ಮಹಾಕೃತಿಗಳು ಸಂಸ್ಕೃತದಲ್ಲಾಗಲೀ ಕನ್ನಡದಲ್ಲಾಗಲೀ ಉಳಿದಿಲ್ಲ. ಈ ಗುಂಪಿನಲ್ಲಿ ಕಾವ್ಯಗಳು ಮಾತ್ರವಲ್ಲದೆ ಇತಿಹಾಸ, ಧರ್ಮಶಾಸ್ತ್ರ, ವೇದಾಂತಗಳೂ ಸೇರಿವೆ. ಇಲ್ಲಿ ವಿಶೇಷವಾಗಿ ನೆನೆಯಬೇಕಾದದ್ದು ಇತ್ತೀಚಿನ ವರ್ಷಗಳಲ್ಲಿ ಅವರು ನಡೆಸಿಕೊಟ್ಟಿರುವ 'ಕುಮಾರವ್ಯಾಸಭಾರತ" ಹಾಗೂ "ಶ್ರೀರಾಮಾಯಣದರ್ಶನಂ" ಕಾವ್ಯಗಳ ಕಾವ್ಯವಾಚನ-ವ್ಯಾಖ್ಯಾನ ಪ್ರಯೋಗಗಳನ್ನು. ಇವುಗಳಿಗೆ ಮನೋಹರವಾಗಿ ಹಾಗೂ ರಸೋಚಿತವಾಗಿ ಕಾವ್ಯವಾಚನ ಮಾಡಿರುವವರು ಬ್ರಹ್ಮಾವರದ ವಿದ್ವಾನ್ ಚಂದ್ರಶೇಖರ ಕೆದಿಲಾಯರು; ಮಧುರವಾದ ವೇಣುವಾದನದ ಸಂಸ್ಕಾರವನ್ನು ನೀಡಿರುವವರು ವಿದ್ವಾನ್ ಹೆಚ್. ಎಸ್. ವೇಣುಗೋಪಾಲ್ ಅವರು. ಈ ಕಲಾವಿದರೆಲ್ಲರೂ ಸೇರಿ ಕಾವ್ಯವಾಚನ-ವ್ಯಾಖ್ಯಾನಗಳಲ್ಲಿ ತೋರಿರುವ ಪ್ರತಿಭೆ-ರಸೌಚಿತ್ಯಗಳನ್ನು ಸದ್ಯೋಭವಿಷ್ಯದಲ್ಲಿ ಬೇರೆಲ್ಲಿ ಕಾಣಬಹುದೋ ತಿಳಿಯದು. ಇವುಗಳಲ್ಲದೆ ಪಾಶ್ಚಾತ್ಯಮಹಾಕಾವ್ಯಗಳಾದ ಇಲಿಯಡ್, ಒದೆಸ್ಸಿ, ಇನಿಯಡ್ ಮುಂತಾದವುಗಳ ಬಗ್ಗೆಯೂ ಗಣೇಶರು ಪ್ರೌಢವಾದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಇವೆಲ್ಲವುಗಳಿಂದ ಗಣೇಶರ ಉಪನ್ಯಾಸಗಳ ವ್ಯಾಪ್ತಿ-ವಿಸ್ತಾರಗಳನ್ನು ತಿಳಿಯಬಹುದು. ಅವರ ಬರೆಹಗಳ ವ್ಯಾಪ್ತಿಯೂ ಅಷ್ಟೇ ವಿಸ್ತಾರವಾದದ್ದು. ಅವುಗಳು ಹಲವಾರು ಪುಸ್ತಕಗಳ ರೂಪದಲ್ಲಿ ಮುದ್ರಣವನ್ನೂ ಕಂಡಿವೆ. ಅಷ್ಟೇ ಅಲ್ಲದೆ ಎಲ್ಲೂ ಮುದ್ರಣ ಕಾಣದ ಸ್ವಾಂತಃಸುಖಾಯ ಬರೆದ ಪದ್ಯಗಳು ಸಾವಿರಾರು. ಅವರ ಮನೆಯನ್ನು ಹೊಕ್ಕು ಅವರ ಅಧ್ಯಯನದ ಸ್ಥಾನಗಳನ್ನು ಗಮನಿಸಿದರೆ ಅಂಚೆಲಕೋಟೆಗಳ ಮೇಲೆ, ಎಲ್ಲೆಡೆಯಿಂದಲೂ ಬರುವ ಹತ್ತಾರು ಆಹ್ವಾನಪತ್ರಿಕೆಗಳ ಮೇಲೆ – ಹೀಗೆ ಎಲ್ಲೆಡೆ ಅಂದಿನ ದಿನ ಅಥವಾ ಹಿಂದಿನ ದಿನ ಬರೆದ ಪದ್ಯಗಳಿರುತ್ತವೆ. ಹೀಗೆ ಗಣೇಶರದು ನಿರಂತರಸಾಧನೆ. ಈ ಸಾಧನೆಯನ್ನು ಗಮನಿಸಿದಾಗ ಅವರ ಸಿದ್ಧಿಯ ನೆಲೆ ತಿಳಿಯುತ್ತದೆ. ಇದನ್ನು ಕಾಣದವರು ಪೂರ್ವಜನ್ಮಸಂಸ್ಕಾರ, ದೈವಾನುಗ್ರಹ ಮುಂತಾದ ಮುಗ್ಧಮನೋಹರವಾದ ಕಾರಣಗಳಿಂದ ಅವರ ಸಿದ್ಧಿಯನ್ನು ವ್ಯಾಖ್ಯಾನಿಸಬೇಕಾಗುತ್ತದೆ. ಇದರ ವಿಸ್ತರಣೆ ಸ್ವಲ್ಪಮಟ್ಟಿಗೆ ಅಗತ್ಯ. ಗಣೇಶರ ಸಿದ್ಧಿಯನ್ನು ಕಂಡು ಅವಾಕ್ಕಾಗಿ ದೂರಸರಿಯುವುದಕ್ಕಿಂತ ಅವರ ಸಾಧನೆಯನ್ನು ಕಂಡು ಸ್ಫೂರ್ತಿ ಪಡೆಯುವುದು ಎಷ್ಟೋ ಮೇಲು. ಅವರು ಯಾವುದನ್ನೂ ಗುರುಮುಖೇನ ಕಲಿತದ್ದಲ್ಲ. ಸ್ವಂತಪರಿಶ್ರಮದಿಂದ, ನಿಘಂಟು, ಅನುವಾದಗಳ ಸಹಾಯದಿಂದ ಸಂಸ್ಕೃತ, ಕನ್ನಡ, ತೆಲುಗು, ಗುಜರಾತಿ ಮುಂತಾದ ಹಲವು ಭಾಷೆಗಳ ವಿಪುಲವಾದ ಸಾಹಿತ್ಯವನ್ನು ಓದಿಕೊಂಡರು. ಇದನ್ನು ಓದಿದರೆ ಉಪಯೋಗ; ಇದು ಉಪಯೋಗಕ್ಕೆ ಬಾರದ್ದು ಎಂದು ಮಾರ್ಗದರ್ಶನವನ್ನು ಕೊಡತಕ್ಕಂಥವರು ಯಾರೂ ಇರಲಿಲ್ಲ. ಹೀಗಾಗಿ ಪೋಲಾದ ಪರಿಶ್ರಮವೇನೂ ಕಡಿಮೆಯಲ್ಲ. ಆದರೆ ಪರಿಶ್ರಮದ ಬಂಡವಾಳಕ್ಕೆ ಅವರಲ್ಲಿ ಕೊರತೆಯಿರಲಿಲ್ಲ. ಇನ್ನಷ್ಟು ಮತ್ತಷ್ಟು ಸುರಿದರು. ಸಿದ್ಧಿಯೂ ದೊರೆಯತೊಡಗಿತು. ಸಿದ್ಧಿ ದೊರೆತಷ್ಟೂ ಸಾಧನೆ ಪಟುವಾಗತೊಡಗಿತು. ಈ ಪ್ರಕ್ರಿಯೆಯನ್ನು ಇಂದಿಗೂ ಗಣೇಶರಲ್ಲಿ ಅವಿರತವಾಗಿ ಕಾಣಬಹುದು. ಈ ಆಯಾಮಾದ ಬಗೆಗೆ ಗಮನ ಹರಿದಾಗಲೆಲ್ಲ ನನಗೆ ಬ್ರಹ್ಮರ್ಷಿ-ವಿಶ್ವಾಮಿತ್ರರ ನೆನಪಾಗುತ್ತದೆ. ಅವರ ಸಿದ್ಧಿಯ ದಾರಿಯೂ ಹೀಗೆಯೇ ಇದ್ದಂಥದ್ದು. ನಿರಂತರವಾಗಿ ಅವರ ತಪಃಸಂಚಯವೂ ನಡೆಯುತ್ತಿತ್ತು; ಅಷ್ಟೇ ನಿರಂತರವಾಗಿ ವಿತರಣೆಯೂ ಆಗುತ್ತಿತ್ತು. ಅದರ ಬಗೆಗೆ ಎಂದೂ ಅವರು ಚಿಂತಿಸಲಿಲ್ಲ. ಕೊನೆಗೊಮ್ಮೆ ಸಂಚಯವು ವಿತರಣೆಯನ್ನು ಮೀರಿ ಬೆಳೆದು ಬ್ರಹ್ಮರ್ಷಿಯಾದರು. ಗಣೇಶರ ಅಧ್ಯಯನದ ಹಾದಿಯೂ ಹೀಗೆಯೇ ಇರುವುದು. ಅಷ್ಟು ಅಲೆದು, ಎಡವಿ, ತಡಕಾಡಿ ಗುರಿ ತಲುಪಿರುವುದರಿಂದಲೇ ಅವರ ಚಿಂತನೆಗಳಲ್ಲಿ,

ಲೇಖನಗಳಲ್ಲಿ ಹಾಗೂ ಉಪನ್ಯಾಸಗಳಲ್ಲಿ ಅಂತಹ ದಾರ್ಢ್ಯವಿರುವುದು. ಹಾಗೂ ಇದೇ ಕಾರಣದಿಂದಾಗಿಯೇ ಅವರು ನಿರಾಧಾರವಾಗಿ ಅಥವಾ ಅಪ್ರಾಮಾಣಿಕವಾಗಿ ಭಾರತೀಯಸಂಸ್ಕೃತಿ ಅಥವಾ ಇತಿಹಾಸದ ಬಗೆಗೆ ಮಾತನಾಡುವುದನ್ನು ಸ್ವಲ್ಪವೂ ಸಹಿಸುವುದಿಲ್ಲ. ಅವಕಾಶ ಸಿಕ್ಕಲ್ಲೆಲ್ಲ ಇಂತಹ ಆಗ್ರಹಪ್ರೇರಿತ ವಿಚಾರಗಳನ್ನು ಸಾಧಾರವಾಗಿ ಖಂಡಿಸುವುದನ್ನೂ ಮರೆಯುವುದಿಲ್ಲ.

ಇತ್ತೀಚಿನ ವರ್ಷಗಳಲ್ಲಿ ಗಣೇಶರು ಯುವಪೀಳಿಗೆಯ ಆಸಕ್ತರಿಗೆ ಭಾರತೀಯಸಂಸ್ಕೃತಿ, ಕಾವ್ಯ, ಕಲೆಗಳ ಪರಿಚಯ ಮಾಡುವ ಹಲವು ಯತ್ನಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವಿಶ್ವವಿದ್ಯಾಲಯಗಳ ರಾಜಕೀಯಪ್ರೇರಿತ ಸಾಹಿತ್ಯಾಭಾಸವನ್ನು ಕಲಿತಿರುವವರಿಗಿಂತ ಆ ವ್ಯವಸ್ಥೆಯ ಹೊರಗಿರುವ ವಿವೇಕಿಗಳೇ ನಮ್ಮ ಸಂಸ್ಕೃತಿ, ಭಾಷೆ ಹಾಗೂ ಕಲೆಗಳ ನಿಜವಾದ ವಾರಸುದಾರರು ಎಂದು ಅವರು ಆಗಾಗ ಹೇಳುವುದುಂಟು. ಈ ನಿಟ್ಟಿನಲ್ಲಿ ಸುಮಾರು ಏಳು ವರ್ಷಗಳ ಹಿಂದೆ ಯುವವೃಂದವೊಂದಕ್ಕೆ ಭಾರತೀಯಸಂಸ್ಕೃತಿಯ ಅತ್ಯಂತ ಅಧಿಕೃತ ವಕ್ತಾರನಾದ ಕಾಳಿದಾಸನ 'ರಘುವಂಶ'ವನ್ನು ಪಾಠಮಾಡಲು ಪ್ರಾರಂಭಿಸಿದರು. ಕಾವ್ಯವು ನೆಪವಷ್ಟೆ. ಈ ವೃಂದದಲ್ಲಿ ಭಾರತೀಯಸಂಸ್ಕೃತಿಯ ಎಲ್ಲ ಆಯಾಮಗಳ ಬಗೆಗೆ ಮುಕ್ತವಾಗಿ ಚರ್ಚೆಗಳು ನಡೆಯುತ್ತವೆ. 'ರಘುವಂಶ'ವು ಮುಗಿದು ಈಗ 'ಮೃಚ್ಛಕಟಿಕ'ದ ಅಧ್ಯಯನ ನಡೆಯುತ್ತಿದೆ. ಇದಲ್ಲದೆ ಮಲ್ಲೇಶ್ವರದಲ್ಲಿ ಮಿತ್ರವೃಂದವೊಂದಕ್ಕೆ "ಮಂಕುತಿಮ್ಮನ ಕಗ್ಗ"ದ ಪಾಠ ನಡೆಯುತ್ತದೆ. ಅಂತರ್ಜಾಲದ ಮೂಲಕ 'ಸ್ಕೈಪ್'ನಲ್ಲಿ ಪಾಠಮಾಡಿಸಿಕೊಳ್ಳುವ ಯುವಕರು ಕೆಲವರು. ಹೀಗೆ ಯುವಪೀಳಿಗೆಯೊಡನೆ ಇಷ್ಟು ಮುಕ್ತವಾಗಿ ಬೆರೆಯುವ ಇಷ್ಟು ಪ್ರತಿಭಾಶಾಲಿಯಾದ ಕಲಾವಿದರು ಮತ್ತೊಬ್ಬರಿಲ್ಲ ಎನ್ನಬಹುದು. ಈಗ್ಗೆ ಸುಮಾರು ಒಂದು ವರ್ಷದ ಕೆಳಗೆ 'ರಘುವಂಶ'ವು ಮುಗಿದ ಸಂದರ್ಭದಲ್ಲಿ ಈ ವೃಂದದ ಗೆಳೆಯರು ಗಣೇಶರನ್ನು ಪದ್ಯರಚನೆಗೆ ಬೇಕಾದ ಮೂಲಭೂತವಾದ ವಿಷಯಗಳ ಪಾಠ ಮಾಡಬೇಕೆಂದು ಕೋರಿಕೊಂಡರು. ಗಣೇಶರು ಅದನ್ನು ಸಂತೋಷವಾಗಿ ನಡೆಸಿಕೊಟ್ಟರು. ಈ ಪ್ರವಚನಗಳು ಈಗ ಅಂತರ್ಜಾಲದಲ್ಲಿ ಯಾರಿಗೂ ಲಭ್ಯ. ಈ ಪಾಠಗಳನ್ನು ಪಡೆದ ಮಿತ್ರವೃಂದವು 'ಪದ್ಯಪಾನ'ವನ್ನು ಹುಟ್ಟುಹಾಕಿತು. ಪ್ರತಿ ಸಪ್ತಾಹ ವಿಷಯವೊಂದನ್ನು ಆರಿಸಿಕೊಂಡು ಪದ್ಯರಚನೆ ಮಾಡುವ ಪಣತೊಟ್ಟು ಅದರಂತೆ ನಡೆದರು. ಇಂದು 'ಪದ್ಯಪಾನ'ದಲ್ಲಿ ಬರುವ ಪ್ರೌಢವಾದ ಅಭಿಜಾತಶೈಲಿಯ ಪದ್ಯಗಳು ಗಣೇಶರ ಅನೇಕ ವರ್ಷಗಳ ಆಸೆಯನ್ನು ಪೂರೈಸಿವೆ. ವಿದೇಶಗಳಲ್ಲಿ ಕೂಡ ಸಮಾನವಾದ ಅಭಿರುಚಿಯುಳ್ಳ ರಸಿಕರು 'ಪದ್ಯಪಾನ'ದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಯುವಮಿತ್ರರು ಗಣೇಶರನ್ನು ಶತಾವಧಾನ ಮಾಡಿರೆಂದು ಕೇಳಿಕೊಂಡಾಗ ಅವರು ಸಂತೋಷವಾಗಿ ಒಪ್ಪಿ 'ಪದ್ಯಪಾನ'ದ ಮಿತ್ರರಲ್ಲೇ ಹಲವರನ್ನು ಪೃಚ್ಛಕರಾಗುವಂತೆ ಸಹ ಪ್ರೇರಿಸಿದರು. 'ರಘುವಂಶ'ದ ದಿನಗಳಲ್ಲಿ ಈ ಮಿತ್ರವೃಂದಕ್ಕೆ ಪರಿಚಯಮಾಡಿಸಲ್ಪಟ್ಟ ನಾನು ಕೂಡ ಇದರ ಅನೇಕ ಫಲಾನುಭವಿಗಳಲ್ಲಿ ಒಬ್ಬ. ಇದೀಗ 'ಪದ್ಯಪಾನ'ದ ಕಿಂಕರ. ಈ ಪ್ರಮಾಣದ ಆಯೋಜನೆಯ ಅನುಭವ ನಮಗಿಲ್ಲ. ಆದರೆ ಪದ್ಯರಚನೆಗೆ ಕಾಲಿಟ್ಟ ಹುಂಬತನದಲ್ಲೇ ಇದಕ್ಕೂ ಕಾಲಿಟ್ಟಿರುತ್ತೇವೆ. ನಮ್ಮ ಈ ಪ್ರಯತ್ನಕ್ಕೆ ಉದಾರವಾಗಿ ತನು-ಮನ-ಧನಸಹಾಯ ಮಾಡಿರುವ ವ್ಯಕ್ತಿಗಳು, ಸಂಸ್ಥೆಗಳಿಗೆ ನಾವು ಅಭಾರಿಗಳು. ಅತ್ಯಲ್ಪಕಾಲದಲ್ಲಿ ಈ ಸ್ಮರಣಸಂಚಿಕೆಗೆ ಉದಾತ್ತವಾದ ಲೇಖನಗಳನ್ನು ಬರೆದು ಕಳುಹಿಸಿದ ಎಲ್ಲ ವಿದ್ವಾಂಸರಿಗೂ 'ಪದ್ಯಪಾನ'ದ ಪರವಾಗಿ ಸವಿನಯವಾದ ನಮನಗಳನ್ನು ಸಲ್ಲಿಸುತ್ತೇನೆ. ತೀವ್ರವಾದ ಅನಾರೋಗ್ಯದ ನಡುವೆಯೂ ನಮ್ಮ ಕೋರಿಕೆಯನ್ನು ಮನ್ನಿಸಿ ಈ ಸಂಚಿಕೆಗೆ ಮಕುಟಪ್ರಾಯವಾಗುವಂತಹ ಲೇಖನವನ್ನು ಕರುಣಿಸಿದ ವಿದ್ವದ್ವಿಭೂತಿಗಳೂ ಗೋಖಲೆ ಸಾರ್ವಜನಿಕ ಸಂಸ್ಥೆಯ ಗೌರವಕಾರ್ಯದರ್ಶಿಗಳೂ ಸರ್ವಾರ್ಥದಲ್ಲಿ ಹಿರಿಯರೂ ಆದ ಶ್ರೀ ಎಸ್. ಆರ್. ರಾಮಸ್ವಾಮಿಯವರಿಗೆ ನಮ್ಮ ವಿಶೇಷ ಗೌರವಗಳು ಸಲ್ಲುತ್ತವೆ. ಹಾಗೆಯೇ ಈ ಸಂಚಿಕೆಯನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ರಾಷ್ಟ್ರೋತ್ಥಾನ ಮುದ್ರಣ ಸಂಸ್ಥಾನಕ್ಕೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಇನ್ನು ಮುಂದೆ ಕೂಡ 'ಪದ್ಯಪಾನ'ದ ಚಟುವಟಿಕೆಗಳಿಗೆ ಈ ಎಲ್ಲರೂ ಹೀಗೆಯೇ ಹರಸಲಿ ಎಂದು ಆಶಿಸುತ್ತಾ ವಿರಮಿಸುತ್ತೇನೆ.

– ವಾಸುಕಿ ಹೆಚ್ ಎ

('ಪದ್ಯಪಾನ'ದ ಪರವಾಗಿ)

ವಿದ್ವಲ್ಲೋಕದ ವಿಸ್ಮಯ; ಸಂಸ್ಕೃತಿಯ ಪ್ರಹರಿ ಶತಾವಧಾನಿ ಡಾ॥ ರಾ. ಗಣೇಶ್

– ಡಾ॥ ಎಸ್. ಆರ್. ರಾಮಸ್ವಾಮಿ
ಗೌರವ ಕಾರ್ಯದರ್ಶಿಗಳು, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಪ್ರಧಾನ ಸಂಪಾದಕರು, ಉತ್ಥಾನ ಮಾಸಪತ್ರಿಕೆ

ಸುಮಾರು ಹದಿನೈದು ವರ್ಷಗಳ ಹಿಂದೆ ಶತಾವಧಾನಿ ಡಾ॥ ರಾ. ಗಣೇಶ್ ಅವರನ್ನು ಕುರಿತು ಒಂದು ಸಂದರ್ಭದಲ್ಲಿ ಮಾತನಾಡುವಾಗ ಅವರನ್ನು 'ವಿದ್ವಲ್ಲೋಕದ ವಿಸ್ಮಯ' ಎಂದು ವರ್ಣಿಸಿದ್ದೆ. ಅದೇಕೋ ಈ ವರ್ಣನೆ ನೆಲೆನಿಂತು ಆಗಿಂದಾಗ ಬಳಕೆಯಾಗುತ್ತ ಬಂದಿದೆ. ಆ ವರ್ಣನೆಯೇನೋ ಸಮುಚಿತವೇ. ಆದರೆ ಗಣೇಶ್ ಅವರ ವ್ಯಕ್ತಿತ್ವಕ್ಕೆ ವಿದ್ವತ್ತನ್ನು ಮೀರಿದ ಆಯಾಮಗಳು ಇವೆ. ವಿದ್ವತ್ತೆ ಅವರಿಗೆ ನಮ್ಮ ಸಂಸ್ಕೃತಿಯ ಹೃದಯವನ್ನು ಪ್ರಕಾಶಪಡಿಸುವ ಸಾಧನವಾಗಿ ಒದಗಿಬಂದಿದೆ. ಸಂಸ್ಕೃತಿಯ ಪ್ರತಿಪಾದಕರಾಗಿಯೂ ಸಮರ್ಥಕರಾಗಿಯೂ ವಿಕೃತಿಪ್ರಸರಣಪ್ರಯಾಸಗಳ ವಿರುದ್ಧ ತಡೆಗೋಡೆಯಾಗಿಯೂ, ವಿವಿಧ ಬಗೆಗಳಲ್ಲಿ ಸಮಾಜದಲ್ಲಿ ಸದಭಿರುಚಿಯ ಪೋಷಣೆ–ವರ್ಧನೆಗಾಗಿಯೂ ಅವರು ಸತತ ಪ್ರಯತ್ನಶೀಲರಾಗಿದ್ದಾರೆ. ಈ ದಿಶೆಯಲ್ಲಿ ಇಷ್ಟು ವ್ಯಾಪಕವಾದ ಮತ್ತು ಮೇಲ್ಮಟ್ಟದ ಕೈಂಕರ್ಯ ಸಲ್ಲಿಸುತ್ತಿರುವವರು ಬಹುಶಃ ನಮ್ಮ ನಡುವೆ ಬೇರೊಬ್ಬರಿಲ್ಲ. ಗಣೇಶ್ ಅವರು ಗಳಿಸಿಕೊಂಡಿರುವ ವ್ಯುತ್ಪತ್ತಿ, ಅವರು ಬೆಳೆಸಿಕೊಂಡಿರುವ ಸಮಾಜಹಿತಸಾಧನಾಕಾಂಕ್ಷೆ – ಎರಡಕ್ಕೂ ನಮ್ಮ ನಮನ ಸಲ್ಲಬೇಕಾಗಿದೆ.

ಪರಂಪರಾಪ್ರಜ್ಞೆ :

ಗಣೇಶ್ ಅವರ ಮಾನಸಿಕತೆಗೆ ಅಧಿಷ್ಠಾನವನ್ನು ಒದಗಿಸಿರುವುದು ಪರಂಪರಾಪ್ರಜ್ಞೆ. ಆ ಪ್ರಜ್ಞೆಯ ಅಂಗಗಳು ಅಭಿಜಾತವಾಙ್ಮಯದ ತಲಸ್ಪರ್ಶಿಮಥನ, ಭಾರತೀಯಸಂಸ್ಕೃತಿಯ ಸ್ವರೂಪದ ಗ್ರಹಿಕೆ, ಹಲವು ಸಹಸ್ರಾಬ್ದಗಳಷ್ಟು ವಿಶಾಲವಾದ ಭಾರತೇತಿಹಾಸದ ಪರಿಜ್ಞಾನ, ಭಾರತೀಯ ಸಮಾಜದ ಬೇರುಗಳೊಡನೆ ತಾದಾತ್ಮ್ಯ, ಗಂಭೀರ ಅಧ್ಯಯನಕ್ಕೆ ಅವಶ್ಯವಾದ ಭಾಷಾಶಾಸ್ತ್ರಾದಿ ಉಪಸ್ಕರಗಳ ಮೇಲೆ ಪ್ರಭುತ್ವ, ಸನ್ನಿವೇಶಾತೀತ ಮೌಲ್ಯನಿಷ್ಠೆ ಮತ್ತು ಋಜುದೃಷ್ಟಿ. ಈ ಗುಣಸಮುಚ್ಚಯ ಮತ್ತು ಮೇಧೋವೈಶಾಲ್ಯವೇ ಗಣೇಶ್ ಅವರ ಮಾತು–ಬರಹಗಳನ್ನು ಅಸಾಮಾನ್ಯವಾಗಿಸಿರುವವು. ಅವರ ಒಂದೊಂದು ಅಭಿಮತಕ್ಕೂ ವಿಶ್ಲೇಷಣೆಗೂ ಪ್ರತಿಪಾದನೆಗೂ ನಿಶ್ಚಾಯಕವಾಗಿರುವುದು ಈ ದೃಢವಾದ ಭೂಮಿಕೆ. ಪ್ರಸಕ್ತ ವಿಷಯ ಸಂಸ್ಕೃತಿಸಂಬಂಧಿತವೇ ಇರಲಿ ಅಥವಾ ಸಾಹಿತ್ಯಿಕವೇ ಆಗಿರಲಿ; ಅವರ ನಿರ್ಣಯವು ಗಟ್ಟಿಯಾದ ತಳಹದಿಯ ಮೇಲೆ ಸಮಗ್ರವೂ ಆಧಾರಭೂತವೂ ಆದ ನೆಲೆಯಲ್ಲಿ ನಿಷ್ಪನ್ನವಾಗಿರುತ್ತದೆ. ಇಂತಹ ದಾರ್ಢ್ಯ ಈಗಿನ ಪರಿಸರದಲ್ಲಿ ಅತ್ಯಂತ ಆವಶ್ಯಕವಾಗಿದೆ. ಏಕೆಂದರೆ ಒಂದು ಕಡೆ ಸಹೃದಯಸ್ಪಂದನ ಪುಷ್ಟೀಕೃತವಾಗಬೇಕಾಗಿದೆ; ಇನ್ನೊಂದು ಕಡೆ ಛಲಜನ್ಯ ಮತ್ತು ವಿಚಾರಶೂನ್ಯ ಪ್ರತಿರೋಧಗಳನ್ನು ನಿರಸ್ತಗೊಳಿಸಬೇಕಾಗಿದೆ. ಈ ಎರಡೂ ಕಾಯಕಗಳನ್ನು ಗಣೇಶ್ ಅವರು ಕಳೆದ ಮೂರು ದಶಕಗಳಿಂದ ಅವಿಶ್ರಾಂತವಾಗಿ, ಪ್ರಜ್ವಲವಾಗಿ ನಡೆಸಿದ್ದಾರೆ. ಈ ವಿವಕ್ಷೆಯಲ್ಲಿ ಗಣೇಶ್ ಅವರಿಗೆ ಸಂಸ್ಕೃತಿಯ ಪ್ರಹರಿ ಎಂಬ ಅಭಿಧಾನ ಸಲ್ಲುತ್ತದೆ. ಈ ಹೊಣೆಗಾರಿಕೆಯ ನಿರ್ವಹಣೆಯನ್ನು ತಮ್ಮ ಜೀವನದ ಪ್ರಮುಖಲಕ್ಷ್ಯವನ್ನಾಗಿ ಈಗ್ಗೆ ಮೂರು ದಶಕಗಳ ಹಿಂದೆಯೇ ಸ್ವೀಕರಿಸಿ ಅದಕ್ಕೆ ತಮ್ಮನ್ನು ಅಗಾಧ ಶ್ರಮದಿಂದ ಸಜ್ಜುಗೊಳಿಸಿಕೊಂಡಿರುವವರು ಅವರು. ಈ ಲಕ್ಷ್ಯದ ಸಾಧನೆಯು ಅಪೇಕ್ಷಿಸುವ ಪಾಂಡಿತ್ಯ, ಸಾಮಾಜಿಕ ಬದ್ಧತೆ – ಎರಡನ್ನೂ ಸತತವಾಗಿ ಅವರು ತೀಕ್ಷ್ಣಗೊಳಿಸಿಕೊಳ್ಳುತ್ತ ಸಾಗಿದ್ದಾರೆ. ಸಂಕ್ಷಿಪ್ತರೂಪದಲ್ಲಿ ಮೇಲಿನದು ಗಣೇಶ್ ನಡೆದುಬಂದಿರುವ ಹಾದಿ.

ಗಣೇಶ್ ಅವರ ಬೌದ್ಧಿಕ ಪ್ರಗಲ್ಭತೆಯ ಹಾರ್ಡ್‌ವೇರ್, ಸಾಫ್ಟ್‌ವೇರ್ - ಎರಡೂ ಅಸಾಧಾರಣವೇ. ಸಂಸ್ಕೃತಾಧ್ಯಯನದ ಅಡಿಗಲ್ಲುಗಳಾದ ವ್ಯಾಕರಣಶಾಸ್ತ್ರ-ಅಲಂಕಾರಶಾಸ್ತ್ರಗಳಂತೂ ಅವರಿಗೆ ಕರತಲಾಮಲಕ. ಒಂದೊಂದರದೂ ಒಂದು ವಿಶಾಲ ಸ್ವತಂತ್ರ ಪ್ರಪಂಚವೆನ್ನಬಹುದಾದ ನ್ಯಾಯ-ವೇದಾಂತಾದಿ ದರ್ಶನಗಳೊಂದೊಂದರ ಜಟಿಲ ಶಾಸ್ತ್ರಗ್ರಂಥಗಳಲ್ಲಿಯೂ ಅವರ ಪರಿಶ್ರಮವಿದೆ.

ಅಧ್ಯಯನವೈಶಾಲ್ಯ :

ಇದಕ್ಕಿಂತ ಹೆಚ್ಚಿನ ಗಮನ ಸೆಳೆಯುವ ಸಂಗತಿಯೆಂದರೆ ಅವರ ಸಾಹಿತ್ಯಾಧ್ಯಯನದ ವಿಸ್ತೃತಿ. ಸಂಸ್ಕೃತಸಾಹಿತ್ಯವಷ್ಟೆ ಅಲ್ಲ; ಉಪಲಬ್ಧ ಪ್ರಾಕೃತಾದಿ ಸಾಹಿತ್ಯವಾರಿಧಿಯಲ್ಲಿಯೂ ಅವರು ಮಿಂದವರು. ಸಂಸ್ಕೃತ-ಕನ್ನಡಗಳಷ್ಟೆ ಲೀಲಾಜಾಲವಾಗಿ ಪ್ರಾಕೃತದಲ್ಲಿಯೂ ಅವರ ಕಾವ್ಯರಚನಾಪ್ರತಿಭೆ ಮೆರೆದಿದೆ. ಪ್ರಮುಖ ದೇಶಭಾಷೆಗಳಲ್ಲದೆ ಐರೋಪ್ಯ ಭಾಷೆಗಳೂ ಅವರ ತೂಣೀರದಲ್ಲಿ ಎಡೆಮಾಡಿಕೊಂಡಿವೆ. ಆ ಹಲವಾರು ಭಾಷೆಗಳು ಮಾತ್ರವಲ್ಲದೆ ಆ ಭಾಷೆಗಳಲ್ಲಿನ ಪ್ರಮುಖ ಸಾಹಿತ್ಯವನ್ನೂ ಅವರು ಕರಗತ ಮಾಡಿಕೊಂಡಿದ್ದಾರೆ. ಅವರ ಅಧ್ಯಯನದ ಹರಹನ್ನು ಅದ್ಭುತವೆಂದಷ್ಟೆ ವರ್ಣಿಸಬಹುದು. ಸಂಸ್ಕೃತದಲ್ಲಿಯಂತೂ ತೀರಾ ವಿರಳವಾದ ಮತ್ತು ಅಪ್ರಚಲಿತವಾದ ಕಾವ್ಯ-ನಾಟಕಗಳೂ ಯಾವುದೂ ಅವರ ವೀಕ್ಷಣೆಯಿಂದ ಹೊರಗೆ ಉಳಿದಿಲ್ಲ. ಸಂಸ್ಕೃತವಲ್ಲದೆ ಕನ್ನಡ ಮತ್ತು ಆಂಗ್ಲಭಾಷೆಗಳ ಅಭಿಜಾತಕೃತಿಗಳಂತೆ ಅರ್ವಾಚೀನಕೃತಿಗಳನ್ನೂ ಅವರು ಕಟಾಕ್ಷಿಸದೆ ಬಿಟ್ಟಿಲ್ಲ. ಕನ್ನಡ ಮಾತ್ರವಲ್ಲದೆ ಉಳಿದ ದ್ರಾವಿಡಭಾಷೆಗಳ ಪಾರಂಪರಿಕ ಕೃತಿಗಳನ್ನೂ ಅವರು ಆ ಮೂಲಭಾಷೆಗಳಲ್ಲಿಯೇ ಸಮೀಕ್ಷಿಸಿದ್ದಾರೆ. ಸಾಹಿತ್ಯ ಮಾತ್ರವಲ್ಲದೆ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಕಲೆಗೂ ಗಣೇಶ್ ಅವರಿಂದ ಕೊಡುಗೆ ಸಂದಿದೆ.

ಮೇಲೆ ಒಂದು ಪಟ್ಟಿಕೆಯ ರೀತಿಯಲ್ಲಷ್ಟೆ ಗಣೇಶ್ ಅವರ ಬೌದ್ಧಿಕ ಸಿರಿವಂತಿಕೆಯ ಆಯಾಮಗಳನ್ನು ಉಲ್ಲೇಖಿಸಲಾಗಿದೆ. ಈ ಪಟ್ಟಿಕೆಯೂ ಉಪಲಕ್ಷಣರೀತಿಯದೇ ವಿನಾ ಸಮಗ್ರವಾದುದಲ್ಲ. ಅವಧಾನಗಳು, ವಿದ್ವದ್ಗೋಷ್ಠಿಗಳ ಮಂಡನೆಗಳು, ನಿರಂತರ ಉಪನ್ಯಾಸಗಳು, ಸರ್ಜನಾತ್ಮಕ ಕೃತಿಗಳು, ಸ್ತಂಭಲೇಖನಗಳು - ಹೀಗೆ ಹಲವು ಮಾಧ್ಯಮಗಳಲ್ಲಿ ಗಣೇಶ್ ಅವರ ಉನ್ನತಪ್ರತಿಭೆ ಅಭಿವ್ಯಕ್ತಗೊಂಡಿದೆ.

ಕಾವ್ಯೋಪಾಸನೆ :

ಅಭಿಜಾತಯುಗದಿಂದ ಆಧುನಿಕಕಾಲದವರೆಗಿನ ಕಾವ್ಯಸಂಪದವನ್ನು ಈ ಪೀಳಿಗೆಯವರಿಗೆ ನಿರಂತರ ಪ್ರವಚನಗಳ ಮೂಲಕ ಪರಿಚಯಿಸುತ್ತ ಬಂದಿರುವುದು ಗಣೇಶ್ ಅವರ ಒಂದು ಅನನ್ಯ ಕೊಡುಗೆ. ವ್ಯಾಸ-ವಾಲ್ಮೀಕಿ-ಕಾಳಿದಾಸರಿಂದ ಹಿಡಿದು ಸಾಂಪ್ರತಕಾಲದ ಅಗ್ರಪಂಕ್ತಿಯ ಕನ್ನಡ ಕವಿಗಳವರೆಗಿನ ಸಾರಸ್ವತಪರಂಪರೆಯನ್ನು ಈಗಿನ ಪೀಳಿಗೆಯವರಿಗೆ ಗಣೇಶ್ ಅವರು ಆಪ್ತವಾಗಿಸಿರುವ ರೀತಿ ಅನುಪಮವಾದುದು. ಈ ಸಂದರ್ಭದಲ್ಲಿ ಅವರ 'ಭಾರತೀಯ ಛಂದಃಶಾಸ್ತ್ರಕ್ಕೆ ಸೇಡಿಯಾಪು ಕೊಡುಗೆ', 'ಬೇಂದ್ರೆ ; ಅಧ್ಯಾರೋಪ ಮತ್ತು ಅಪವಾದ', 'ನರಸಿಂಹಸ್ವಾಮಿಯವರ ಮಲ್ಲಿಗೆಯ ಕಾವ್ಯಕಂಪು' ಮೊದಲಾದ ಪ್ರಬಂಧಗಳು ಉಲ್ಲೇಖನೀಯ.

ಡಿ.ವಿ.ಜಿ.ಯವರ ಚಿಂತನೆಯ ಅತ್ಯಂತ ಸಮರ್ಥ ವ್ಯಾಖ್ಯಾತರೆಂದು ಗಣೇಶ್ ಅವರು ಯಥಾರ್ಥವಾಗಿಯೇ ಗುರುತಿಸಲ್ಪಟ್ಟಿದ್ದಾರೆ. ಡಿ.ವಿ.ಜಿ.ಯವರ ಗದ್ಯ-ಪದ್ಯಕೃತಿಗಳ ಬಗೆಗೆ ವರ್ಷಗಳುದ್ದಕ್ಕೂ ಗಣೇಶ್ ಅವರು ನೀಡಿರುವ ಪ್ರವಚನಗಳು ಸಾಹಿತ್ಯಾಸಕ್ತರ ಪಾಲಿಗೆ ದೊಡ್ಡ ವರದಾನವಾಗಿವೆ. ಆರ್ಷಪರಂಪರೆಯು ಡಿ.ವಿ.ಜಿ.ಯವರ ವಾಙ್ಮಯದಲ್ಲಿ ಹೇಗೆ ಪ್ರತಿನಿಧಿತವಾಗಿದೆ ಎಂಬುದು ಗಣೇಶ್ ಅವರ ವ್ಯಾಖ್ಯಾನಗಳಲ್ಲಿ ಹೊಮ್ಮಿರುವಷ್ಟು ಸಮರ್ಥವಾಗಿ ಬೇರೆಲ್ಲಿಯೂ

ಸ್ಫುಟಗೊಂಡಿಲ್ಲವೆಂದರೆ ಉತ್ಪ್ರೇಕ್ಷೆಯಾಗದು. ಇದಕ್ಕೆ ಒಂದು ಕಾರಣವೆಂದು ಊಹಿಸಬಹುದಾದುದು ಡಿ.ವಿ.ಜಿ. ನಡೆಸಿದ ಬೌದ್ಧಿಕಪಯಣಕ್ಕೆ ತುಲ್ಯವಾದ ಹಾದಿಯನ್ನೇ ಗಣೇಶ್ ಅವರೂ ಕ್ರಮಿಸಿದ್ದಾರೆ ಎಂಬುದು. ಈ ಹಿನ್ನೆಲೆಯಿಂದಾಗಿ ಅಗಾಧಪರಿಶ್ರಮದಿಂದ ಡಿ.ವಿ.ಜಿ. ನಿಷ್ಪಾದಿಸಿಕೊಂಡು ಸಮಾಜಕ್ಕೆ ವಿತರಿಸಿದ ಚಿಂತನೆಗೆ ಹೃದಯದಾಳದಿಂದಲೂ ತಾದಾತ್ಮ್ಯದಿಂದಲೂ ಸ್ಪಂದಿಸುವುದು ಗಣೇಶ್ ಅವರಿಗೆ ಸಾಧ್ಯವಾಗಿದೆ. ಈ ರಸಜ್ಞತೆಯೇ ಗಣೇಶ್ ಅವರು ನೀಡಿರುವ 'ಬ್ರಹ್ಮಪುರಿಯ ಭಿಕ್ಷುಕ' ಸಂಕಲನದಲ್ಲಿ ಏಕತ್ರಿತವಾಗಿರುವ ಡಿ.ವಿ.ಜಿ. ಕೃತಿಗಳನ್ನಾಧರಿಸಿದ ಪ್ರೇರಕಘಟನಾವಳಿಯ ದರ್ಶನವನ್ನೂ 'ಬೆಲೆಬಾಳುವ ಬರಹಗಳು' ಶೀರ್ಷಿಕೆಯಲ್ಲಿ ಸಂಕಲನಗೊಂಡಿರುವ ಡಿ.ವಿ.ಜಿ. ಬರಹಗಳ ಪ್ರಾತಿನಿಧಿಕಸಂಗ್ರಹವನ್ನೂ ಚೋದಿಸಿರುವುದು.

ಗಣೇಶ್ ಅವರ 'ಡಿ.ವಿ.ಜಿ. ಅವರ ಛಂದಃಪ್ರಯೋಗಗಳು', 'ಡಿ.ವಿ.ಜಿ. ಅವರ ಶೃಂಗಾರಮಂಗಳಂ' – ಎರಡೂ ಉನ್ನತಮಟ್ಟದ ಶೋಧಪ್ರಬಂಧಗಳೇ ಆಗಿವೆ.

ಡಿ.ವಿ.ಜಿ.ಯವರನ್ನು ಕುರಿತೇ ಅವಧಾನವೊಂದರಲ್ಲಿ ಗಣೇಶ್ ಅವರು ಮಾಡಿದ್ದ ಸ್ತವನ ಇದು:

ಶಾ॥ ಶ್ರೀಮಂತಂ ಕವಿತಾವಿಶೇಷವಿಭವಂ ಪಾಂಡಿತ್ಯಪಿಂಡೀಕೃತಂ
ಧೀಮಂತಂ ಜನಶಕ್ತಿಶುಕ್ತಿವಿಗಲನ್ಮುಕ್ತಾಫಲಪ್ರಾಣಿತಂ।
ಸಾಮಂತರ್ಕಳೆನಲ್ಕೆ ಧೀರನಿಚಯಂ ಚಕ್ರೇಶ್ವರಂ ಶಾಶ್ವತಂ
ಸೀಮಂತಂ ಕರುನಾಡದೇವಿಗೆನಲೀ ಗುಂಡಪ್ಪನತ್ಯುನ್ನತಂ ॥

ಅಭಿಜಾತ ಕಾವ್ಯ-ನಾಟಕಗಳ ವಿಷಯದಲ್ಲಿ ಗಣೇಶ್ ಅವರು ಸೋತ್ಸಾಹವಾಗಿಯೂ ಆಳವಾದ ಗ್ರಹಿಕೆಯಿಂದಲೂ ಮಾತನಾಡುವವರಾದರೂ ಅವರ ಪರಾಮರ್ಶನದೃಷ್ಟಿಯು ಎಲ್ಲಿಯೂ ಮಸಕಾಗುವುದಿಲ್ಲ. ಅವರು ಆತ್ಯಂತಿಕವಾಗಿ ಆರಾಧಿಸುವ ಮೇರುಕವಿ ಕಾಳಿದಾಸನಲ್ಲಿಯೂ ಅತ್ಯಂತ ವಿರಳವಾಗಿ ನುಸುಳಿರುವ ಲಾಕ್ಷಣಿಕನ್ಯೂನತೆಗಳನ್ನು ಅವರು ಗಮನಿಸದಿರುವುದಿಲ್ಲ. ಉಕ್ತಿವಿಶೇಷದ ತವನಿಧಿಯೆಂದೂ ಅಲಂಕಾರಗಳ ಆಗರವೆಂದೂ ಗುಣ-ರೀತಿಗಳ ತವರು ಎಂದೂ ಅವರೇ ವರ್ಣಿಸಿರುವ ಭೋಜನ ಚಂಪೂರಾಮಾಯಣದ ಗದ್ಯಭಾಗಗಳು ಬಹುಮಟ್ಟಿಗೆ ಜಡ ಮತ್ತು ರೂಢ ಎಂಬ ವಿಶ್ಲೇಷಣೆಯನ್ನೂ ನೀಡುತ್ತಾರೆ.

ಲೇಖನಕಲೆ :

'ಓದು ಬರಹದ ಶತ್ರು' ಎಂಬ ಅನುಭವೋಕ್ತಿ ಇದೆಯಷ್ಟೆ. ನಿರಂತರಾಧ್ಯಯನ, ಕಾವ್ಯಾನುಸಂಧಾನ, ಶಾಸ್ತ್ರಜಿಜ್ಞಾಸೆ, ಸತತ ಬೋಧನ-ಪ್ರವಚನ – ಈ ಜಗತ್ತು ಅದರಲ್ಲಿ ವ್ಯಸ್ತರಾದವರ ಪಾಲಿಗೆ ಎಷ್ಟು ರೋಚಕವೆಂದರೆ ಅದು ಒಬ್ಬ ವ್ಯಕ್ತಿಯ ಇಡೀ ಅಂತರಂಗವನ್ನು ವ್ಯಾಪಿಸಬಲ್ಲದು. ಅದು ಎಂತಹ ತನ್ಮಯೀಭವನವನ್ನು ನಿರ್ಮಿಸುತ್ತದೆಂದರೆ ಅದರಿಂದ ಹೊರಬಂದು ಲೇಖನಕ್ರಿಯೆಯಲ್ಲಿ ತೊಡಗಿಕೊಳ್ಳುವುದರಲ್ಲಿ ಅಭಿರುಚಿಯನ್ನೂ ಅದು ಅಪೇಕ್ಷಿಸುವ ವಿಶೇಷರೀತಿಯ ಶಿಸ್ತನ್ನೂ ಬೆಳೆಸಿಕೊಳ್ಳುವುದು ಎಲ್ಲರಿಗೂ ಶಕ್ಯವಲ್ಲ. ಈ ಕಾರಣದಿಂದಲೇ ಶತಮಾನಗಳುದ್ದಕ್ಕೂ ಸಾರಸ್ವತಪರಂಪರೆಯನ್ನು ಜೀವಂತವಾಗಿ ಉಳಿಸಿದ ಉದ್ದಂಡರಲ್ಲಿ ಲೇಖನಿಯನ್ನು ಹಿಡಿಯದವರ ಸಂಖ್ಯೆಯೇ ಅಧಿಕ. ಇದು ಒಂದು ವಿಪರ್ಯಾಸವೇ. ಬರವಣಿಗೆ ಮಾಡಬೇಕಾದವರು ವ್ಯುತ್ಪತ್ತಿಯೂ ಅಧಿಕಾರವೂ ಇರುವವರೇ ತಾನೆ. ಮೌಖಿಕಪರಂಪರೆಯನ್ನು ಎಷ್ಟೇ ಕೀರ್ತಿಸಿದರೂ ಪರಂಪರೆಯ ಮುಂದುವರಿಕೆಗೆ ಪ್ರಮುಖಸಾಧನವಾಗಬಲ್ಲದ್ದು ಲೇಖನವ್ಯವಸಾಯವೇ. ಅಂತರ್ಮಥನಫಲಿತವನ್ನು ತತ್ಕಾಲೀನ ಪರೋಕ್ಷ ಅಭ್ಯಾಸಿಗಳಿಗೂ ಮುಂದಿನ ತಲೆಮಾರಿಗೂ ಉಳಿಸುವವರು ಧನ್ಯರು; ಹಾಗೆ ಉಪಕೃತರಾದವರು ಹೆಚ್ಚು ಧನ್ಯರು.

ಈ ಸಂವಹನದ ಹೊಣೆಗಾರಿಕೆಯನ್ನು ಮನಗಂಡು ಗಣೇಶ್ ಅವರು ಲೇಖನಕೌಶಲವನ್ನೂ ಸಿದ್ಧಿಸಿಕೊಂಡು ಗಣನೀಯ ಪ್ರಮಾಣದ ಬರಹವನ್ನು ಒದಗಿಸಿರುವುದು ನಮ್ಮ ಸೌಭಾಗ್ಯ. ಅಸಂಖ್ಯ ಅವಧಾನಗಳಲ್ಲಿಯೂ ಅವಿಶ್ರಾಂತ ಪ್ರವಚನಗಳಲ್ಲಿಯೂ ಸ್ಫುಟಿತವಾಗುವ ಅವರ ಪ್ರತಿಭೋನ್ಮೇಷ ಸದ್ಯಃಪರ್ಯವಸಿತವಾಗುವುದು ಅನಿವಾರ್ಯ. ಆದರೆ ನಿರಂತರ ಬೌದ್ಧಿಕಪರಿಕ್ರಮದ ನಡುವೆಯೂ ಅವರು ಸಮಾಜಕ್ಕೆ ನೀಡಿರುವ ಸ್ವತಂತ್ರ ಗದ್ಯ-ಪದ್ಯ ಕೃತಿಗಳು, ಅಂಕಣಬರಹಗಳು, ಅನುವಾದಗಳು, ಪ್ರಬಂಧಗಳು, ಸಂದರ್ಭಚೋದಿತ ಲೇಖನಗಳು, ಸಾಹಿತ್ಯಪರಾಮರ್ಶನೆಗಳು, ಸಂಸ್ಕೃತಿಸಂಬಂಧಿತ ವ್ಯಾಖ್ಯೆಗಳು, ಸಾಮಾಜಿಕಾವಲೋಕನಗಳು, ಮೌಲ್ಯಸಮರ್ಥನೆಗಳು, ಸಾಹಿತ್ಯಕಲಾದಿಕ್ಷೇತ್ರಗಳ ಶುಷ್ಕಪ್ರವೃತಿಗಳ ನಿರಸನಗಳು – ಈ ವಾಙ್ಮಯರಾಶಿಯು ಅತ್ಯಂತ ಪ್ರಗಲ್ಭವೂ ಪ್ರಬೋಧಕವೂ ಆಗಿದೆ.

ಕೃತಿಸಂಪದ :

'ಮಧುಸದ್ಮ' ಕಾವ್ಯಗುಚ್ಛ, ಸಂದೇಶಕಾವ್ಯ 'ವಂಶೀಸಂದೇಶಂ', ಮೇಘದೂತದ ವಿಡಂಬನೆಯಾದ 'ಧೂಮದೂತ' ಮೊದಲಾದ ಒಂದೊಂದೂ ಅನನ್ಯನಿರ್ಮಿತಿಯೇ. 'ವಂಶೀಸಂದೇಶ' ಮೊದಲಾದವನ್ನು ಸಾಂಪ್ರದಾಯಿಕ ಪ್ರಕಾರದವೆಂದು ಗಣಿಸಬಹುದು. ಆದರೆ ಅಣಕುಕಾವ್ಯ 'ಧೂಮದೂತ' ವ್ಯಂಗ್ಯ-ಹಾಸ್ಯದ ಉಡುಗೆಯನ್ನು ತೊಟ್ಟ ಧ್ವನಿಗರ್ಭಿತ ಸಮಾಜಾವಲೋಕನವಾಗಿದೆ. ಇಷ್ಟು ರೋಚಕವಾದ ವ್ಯಂಗ್ಯಕಾವ್ಯ ಈಚಿನ ದಿನಗಳಲ್ಲಿ ಕನ್ನಡದಲ್ಲಿ ಬೇರೊಂದು ಬಂದಿದೆಯೇ ಎಂಬುದು ಶಂಕಾಸ್ಪದ. ಇಲ್ಲಿಯ ವಿಡಂಬನವಿಲಾಸಕ್ಕೆ ಹೇರಳ ಸಾಮಗ್ರಿಯನ್ನು ಒದಗಿಸಿರುವವು ಸಮಕಾಲೀನ ವಿದ್ಯಮಾನಗಳು. ಅದೊಂದು ಅಕ್ಷಯಪಾತ್ರೆ.

ಕೇಳಿಕೇಳಿ ಕಿವುಡಾಯ್ತು ಲೋಕಸಭೆಯಲ್ಲಿ ನಮಗಿದನ್ನು
ನೋಡಿನೋಡಿ ಕುರುಡಾಯ್ತು ಪತ್ರಿಕೆಗಳಲ್ಲಿ ನಮಗಿದನ್ನು
ನೀನೆ ಹೇಳು ಪರಿಹಾರವೇನು? ಪರಿಹಾರವೇಕೆ ಬೇಕು?
ಅಳಿದ ರೋಗ ಹೊಸ ರೋಗ ಬರಲು ಹರಿಕಾರ ತಾನೆ! ಸಾಕು!

ಕಂಡು ಕೇಳದಿಹ ತೊಂದರೆಗಳು ಹೊಸವೇಕೆ ಬೇಕು ನಮಗೆ?
ಇಂದು ಕಷ್ಟವಾಗಿಹುದು ನಾಳೆ ಹೊಂದಾಣಿಕೆಗಳಿಗೊಸಗೆ
ಅದೂ ಅಲ್ಲದೆ ರಹಸ್ಯವೊಂದು ನಿನ್ನಲ್ಲಿ ಮಾತ್ರವಿರಲಿ
ಹಳ್ಳಿ ಹಸಿವೆ ತೀರಿದರೆ ದಿಲ್ಲಿ ದುರ್ಗಮ್ಮಗಾವುದು ಬಲಿ?

ಹೀಗೆ ಸಾಗುತ್ತದೆ ವ್ಯಂಗ್ಯವಿಲಾಸ.

ಸಮುನ್ನತವರ್ಗದ ರಾಷ್ಟ್ರನಿರ್ಮಾಪಕರೂ ಅನುಪಮ ಸಂಘಟಕರೂ ಲೋಕಸಂಗ್ರಹಧುರಂಧರರೂ ಆದ ವಿದ್ಯಾರಣ್ಯಯತಿಗಳ ಚರಿತೆಯನ್ನು ಆಧಾರಭೂತವಾಗಿ ಪರಿಚಯಿಸಿರುವ ಕೃತಿ 'ವಿಭೂತಿಪುರುಷ ವಿದ್ಯಾರಣ್ಯ'. ವಿಶೇಷವಾಗಿ ಎಳೆವಯಸ್ಸಿನ ವಿದ್ಯಾರ್ಥಿಗಳನ್ನು ಗುರಿಯಾಗಿರಿಸಿಕೊಂಡ ಸುಭಾಷಿತಸಂಗ್ರಹ 'ನಿತ್ಯನೀತಿ'. ಮೌಖಿಕಪರಂಪರೆಯಲ್ಲಿ ಪ್ರಸಿದ್ಧವಾಗಿರುವ ಸಂದರ್ಭನಿರ್ಣೀತ ಪದ್ಯಗಳ ಹಿನ್ನೆಲೆಯ ಕಥಾಪ್ರಸಂಗಗಳ ನಿರೂಪಣೆ 'ಕವಿತೆಗೊಂದು ಕಥೆ'.

ಆರ್ಷಪರಂಪರೆಯನ್ನು ಈಗಿನ ಪೀಳಿಗೆಗೆ ಸುಲಭಗ್ರಾಹ್ಯ ರೀತಿಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಹೊಮ್ಮಿರುವವು 'ಸಾಮಾನ್ಯ ಧರ್ಮ' ಮತ್ತು 'ಸಂಧ್ಯಾದರ್ಶನ'.

ಮಹಾಪುರುಷಸಂಶ್ರಯದಲ್ಲಿ ಆತ್ಯಂತಿಕ ಆಸ್ಥೆಯುಳ್ಳವರು ಗಣೇಶ್. ಅಧ್ಯಯನ-ಅಧ್ಯಾಪನ, ಪಾರಂಪರಿಕಜ್ಞಾನದ ರಕ್ಷಣೆ ಮತ್ತು ಪ್ರಸರಣ, ವ್ಯಾಖ್ಯಾನ, ಬೋಧನೆ, ಮೌಲಿಕ ಗ್ರಂಥರಚನೆ, ಸಮಾಜಹಿತಸಾಧಕ ಪ್ರಕ್ರಮ – ಈ ವಿವಿಧ

ಮಾರ್ಗಗಳಿಂದ ಸಂಸ್ಕೃತಿಯ ದೃಢೀಕರಣಕ್ಕಾಗಿ ತಮ್ಮ ಜೀವನವನ್ನು ಅರ್ಪಿಸಿಕೊಂಡ ಹಿಂದಿನ ಮತ್ತು ಈಚಿನ ಸಮುನ್ನತರ ವಾರಸಿಕೆಯನ್ನು ನಿತ್ಯವೂ ತಮ್ಮಲ್ಲಿ ಆವಾಹನೆ ಮಾಡಿಕೊಳ್ಳುವುದು ಗಣೇಶ್ ಅವರ ಪಾಲಿಗೆ ಋಣಸಂದಾಯವಾಗಿರುವುದರ ಜೊತೆಗೆ ಅವರಿಗೆ ಶಕ್ತಿಯ ಸ್ರೋತವೂ ಆಗಿದೆ. ಆ ಭವ್ಯಪರಂಪರೆಗೂ ಸಾಂಪ್ರತಪೀಳಿಗೆಗೂ ನಡುವೆ ಗಣೇಶ್ ಅವರು ಸೇತುವೆಯಂತೆ ಇದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಕಾಲದಲ್ಲಿ ಪ್ರಬುದ್ಧತೆಯ ಶೃಂಗಾಗ್ರಗಳೆನ್ನಬಹುದಾದ ಮೂವರು ಋಷಿಕಲ್ಪರ ಜೀವನ-ಸಾಹಿತ್ಯ ಪರಿಚಯಗ್ರಂಥಗಳನ್ನು ಗಣೇಶ್ ಅವರು ನೀಡಿರುವುದನ್ನು ವಿಶೇಷವಾಗಿ ಉಲ್ಲೇಖಿಸಬೇಕು:

(1) ಆಚಾರ್ಯ ಎಂ. ಹಿರಿಯಣ್ಣ ಅವರನ್ನು ಕುರಿತ 'ಆರ್ದ್ರಜ್ಯೋತಿ';

(2) ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ ಅವರನ್ನು ಕುರಿತ 'ವಾಣೀವಾಹನ';

(3) ವಿದ್ಯಾಲಂಕಾರ ಪ್ರೊ॥ ಸಾ.ಕೃ. ರಾಮಚಂದ್ರರಾವ್ ಅವರನ್ನು ಕುರಿತ 'ಸರ್ವತಂತ್ರಸ್ವತಂತ್ರ'.

ಇಂತಹವರಷ್ಟು ಎತ್ತರದ ಜ್ಞಾನೋಪಾಸನವ್ರತಿಗಳೂ ಬಹುಶಾಸ್ತ್ರಪಾರಂಗತರೂ ವಿರಳಾತಿವಿರಳರು; ಇಡೀ ದೇಶದಲ್ಲಿ ಅಂತಹವರು ಬೆರಳೆಣಿಕೆಯಷ್ಟೆ ದೊರೆತಾರು. ನಮ್ಮ ನಡುವೆಯೇ ವಿರಾಜಮಾನರಾದ ಈ ಸ್ಫಟಿಕೋಜ್ಜ್ವಲ ವಿದ್ವದ್ವರೇಣ್ಯರ ಸಾಧನೆಯ ಪರಿಚಯ ಸಾಮಾನ್ಯರ ಮಟ್ಟದಲ್ಲಿಯೂ ವ್ಯಾಪಕವಾಗಿ ಆಗಬೇಕಾಗಿದೆ. ಈ ಆವಶ್ಯಕತೆಯನ್ನು ಮನಗಂಡು ಗಣೇಶ್ ಅವರು ಮೇಲಣ ಮೂರು ಉತ್ಕೃಷ್ಟ ಪರಿಚಯಕೃತಿಗಳನ್ನು ಒದಗಿಸಿರುವುದು ಅತ್ಯಂತ ಪ್ರಶಂಸನೀಯವಾಗಿದೆ. ಆ ಸಾಧಕರ ಜೀವನದ ಮತ್ತು ಕೃತಿಗಳ ಬಗೆಗೆ ಸಮಗ್ರ ಮಾಹಿತಿಯಂತೂ ಈ ಬರಹಗಳಲ್ಲಿ ಇದ್ದೇ ಇದೆ. ಜೊತೆಗೆ ಆ ಮಹನೀಯರ ಕೃತಿಗಳ ಮಹತ್ತ್ವವನ್ನು ಪರಂಪರೆಯ ನೆಲೆಗಟ್ಟಿನಲ್ಲಿ ಗಣೇಶ್ ಅವರು ಪ್ರಕಾಶಪಡಿಸಿರುವುದು ಈ ಕೃತಿಗಳನ್ನು ಅನುಪಮವಾಗಿಸಿದೆ.

ಅನುವಾದಗಳು ಮತ್ತು ಅಂಕಣಬರಹಗಳು :

ಸಂಸ್ಕೃತದ ಹಲವಾರು ಶ್ರೇಷ್ಠಕೃತಿಗಳ ಅನುವಾದವನ್ನು ಗಣೇಶ್ ಅವರು ಕನ್ನಡ ಓದುಗರಿಗೆ ಲಭ್ಯವಾಗಿಸಿದ್ದಾರೆ. 17ನೇ ಶತಮಾನದಲ್ಲಿ ಆಗಿಹೋದ ಪ್ರಸಿದ್ಧ ಕವಿ ನೀಲಕಂಠದೀಕ್ಷಿತನ 'ಕಲಿವಿಡಂಬನಶತಕ', 'ಸಭಾರಂಜನಶತಕ', 'ವೈರಾಗ್ಯಶತಕ' – ಈ ಶತಕತ್ರಯದ ಕನ್ನಡ ಗದ್ಯಾನುವಾದವನ್ನು ಗಣೇಶ್ ಅವರು ಅನೇಕ ವರ್ಷ ಹಿಂದೆಯೇ ಸಿದ್ಧಪಡಿಸಿದ್ದರೂ ಅದರ ಪ್ರಕಾಶನ ಸಾಧ್ಯವಾದದ್ದು 1997ರಲ್ಲಿ. ಆ ಅನುವಾದಕ್ಕೆ ಗಣೇಶ್ ಅವರು ನೀಲಕಂಠದೀಕ್ಷಿತನನ್ನೂ ಅವನ ಕೃತಿಗಳನ್ನೂ ಕುರಿತು ಬರೆದಿರುವ ಮನನೀಯವಾದ ಪ್ರಸ್ತಾವನೆ ಅದೇ ಒಂದು ಸ್ವತಂತ್ರಗ್ರಂಥವೆನಿಸುವಷ್ಟು ಸಮಗ್ರವೂ ವ್ಯಾಸಂಗಾರ್ಹವೂ ಆಗಿದೆ.

ಮೇಲಿನದಕ್ಕೆ ಪೂರಕವೆನಿಸುವ ಕುಸುಮದೇವನ 'ದೃಷ್ಟಾಂತಕಲಿಕಾಶತಕ', ಕ್ಷೇಮೇಂದ್ರನ 'ಚಾರುಚರ್ಯೆ', ಶಿಲ್ಹಣನ 'ಶಾಂತಿಶತಕ' – ಈ ಮೂರು ಅಪೂರ್ವ ಕೃತಿಗಳ ಗದ್ಯಾನುವಾದವನ್ನು ಟಿಪ್ಪಣಿಗಳೊಡನೆ ಇತ್ತೀಚೆಗಷ್ಟೆ (2012) ಗಣೇಶ್ ಅವರು ಹೊರತಂದಿದ್ದಾರೆ.

ಗಣೇಶ್ ಅವರ ಅಂಕಣಬರಹಗಳ ಮತ್ತು ಸಾಂದರ್ಭಿಕಪ್ರಬಂಧಗಳ ಆರೇಳು ಸಂಕಲನಗಳು ಹೊರಬಂದಿವೆ: 'ಹೊಕ್ಕಳಬಳ್ಳಿಯ ಸಂಬಂಧ', 'ಹಾಸುಬೀಸು' ಇತ್ಯಾದಿ. ಹೀಗೆ ಅವರ ಪ್ರಮುಖ ಚಿಂತನೆ-ಧೋರಣೆಗಳ ಅಲ್ಪಭಾಗವಾದರೂ ಕೈಗೆಟಕುವ ರೀತಿಯಲ್ಲಿ ಗ್ರಂಥಸ್ಥಗೊಂಡು ಲಬ್ಧವಿರುವುದು ಕನ್ನಡ ಓದುಗರ ಭಾಗ್ಯ. ಅಂಕಣಬರಹಗಳ ಮರ್ಯಾದೆಯೂ ಗ್ರಂಥರೂಪ ಪ್ರತಿಪಾದನೆಯ ಮರ್ಯಾದೆಯೂ ಕಿಂಚಿದ್ ಭಿನ್ನವಾದವು. ಅಂತೆಯೇ ಶಾಸ್ತ್ರೀಯ ಪ್ರಮಾಣಬದ್ಧ ಬರಹದ ಮರ್ಯಾದೆ, ವ್ಯಾಖ್ಯಾನ-ಪ್ರವಚನ ಮರ್ಯಾದೆ – ಇವೂ ಸ್ವಲ್ಪ ಭಿನ್ನವಾದವೇ. ಆದರೆ ಗಣೇಶ್ ಅವರ

ಸಂದರ್ಭದಲ್ಲಿ ಈ ಪರಿಮಿತಿಯ ಪರಿಣಾಮ ಅಷ್ಟಾಗಿ ಎದ್ದು ಕಾಣುವಂತಹದಲ್ಲವೆನಿಸುತ್ತದೆ. ಇದಕ್ಕೆ ಕಾರಣವೆಂದರೆ ಗಣೇಶ್ ಅವರ ಚಿಂತನೆ, ಮಾತು ಮತ್ತು ಬರಹಗಳ ನಡುವೆ ಇರುವ ಸಾಂಗತ್ಯ. ಅವರ ಚಿಂತನೆಯೇ ಶಾಸ್ತ್ರಶುದ್ಧರೀತಿಯದು. ಅವರ ಮಾತು-ಬರಹಗಳು ಆ ಚಿಂತನೆಯ ಅಭಿವ್ಯಕ್ತಿಗಳು. ಅವರ ಮಾತು ಅವರ ಬರಹದಷ್ಟೇ ಪರಿಷ್ಕಾರಪೂರ್ಣ, ಸ್ಫುಟ, ಖಚಿತ.

ಗಣೇಶ್ ಅವರ ಬರಹ ಕ್ಲಿಷ್ಟವೆಂದೂ ಸಾಮಾನ್ಯ ಓದುಗರಿಗೆ ದುರ್ಗ್ರಾಹ್ಯವೆಂದೂ ಒಮ್ಮೊಮ್ಮೆ ಅನಿಸಿಕೆ ವ್ಯಕ್ತವಾಗಿರುವುದುಂಟು. ಯಾವುದೇ ಗಂಭೀರರೀತಿಯ ಬರಹದ ಬಗೆಗೆ ಇಂತಹ ಅನಿಸಿಕೆಗಳು ಸಂಭವನೀಯವೇ. ಆದರೆ ಸಂಗೀತದಲ್ಲಿ ಶ್ರುತಿಯೂ ಲಯವೂ ಅನಿವಾರ್ಯಪರಿಕರಗಳಾಗಿರುವಂತೆ ಗಂಭೀರ ಬರಹದಲ್ಲಿಯೂ ಒಂದು ಮಟ್ಟದ ಸೌಷ್ಠವ ಅವಶ್ಯವಾಗುತ್ತದೆ. ಚಿಂತನೆಗೆ ಅನುಗುಣವಾದ ಭಾಷಾಶುದ್ಧಿಯೂ ಶೈಲಿಯ ಸಶಕ್ತತೆಯೂ ಇರಬೇಕಾಗುತ್ತದೆ. ಈ ಪಾರಿಶುದ್ಧ್ಯವನ್ನು ಆಧಾರಶ್ರುತಿಯಾಗಿ ಸ್ವೀಕರಿಸಿರುವವರು ಗಣೇಶ್. ಅಲ್ಲದೆ ಹೆಚ್ಚಿನ ಸಂದರ್ಭಗಳಲ್ಲಿ ಅವರು ಸೂಕ್ಷ್ಮಸ್ತರದ ಭಾವನೆಗಳಲ್ಲಿ ವ್ಯವಹರಿಸುವವರು. ಈ ಕಾರಣದಿಂದಲೂ ಅಶಿಥಿಲ ಬರಹ ಅವರಿಗೆ ಸ್ವಭಾವಗತವಾಗಿದೆ. ಈ ಹಿನ್ನೆಲೆಯಲ್ಲಿ ಅವರ ಬರಹದ ರೀತಿಗೆ ಸಹ-ಸ್ಪಂದನ ಸಲ್ಲುತ್ತದೆ. ಕೆಲವು ವಲಯಗಳಲ್ಲಿ ಸೌಷ್ಠವದ ಬಗೆಗೆ ಅಶ್ರದ್ಧೆ ಹರಡುತ್ತಿರುವುದನ್ನು ಗಮನಿಸಿದಲ್ಲಿ ಶುದ್ಧತೆಯ ಮತ್ತು ಖಚಿತತೆಯ ಬಗೆಗೆ ಗಣೇಶ್ ಅವರ ಪಕ್ಷಪಾತ ಇನ್ನೂ ಹೆಚ್ಚು ಸಮರ್ಥನೀಯವೆನಿಸೀತು. ಆದರೆ ಇದಕ್ಕೆ ಹೊರತಾಗಿಯೂ ಗಣೇಶ್ ಅವರ ಭಾಷಾಪ್ರಯೋಗವು ಸ್ವಯಂ-ನಿಷ್ಪನ್ನವೇ ಆಗಿರುವಂತಹದು. ಅವರ ಮಾತಿನ ಮತ್ತು ಬರಹದ ರೀತಿಯು ಒಂದು ವಿಶಾಲ ಗ್ರಾಹಕವರ್ಗವನ್ನು ಗಳಿಸಿಕೊಂಡಿರುವುದೂ ಅಷ್ಟೇ ತಥ್ಯ.

'ಸಂಕೇತನಿಗೂಹನಗಳು' :

ಸಾಮಾನ್ಯರು ಆಂತರ್ಯದಲ್ಲಿ ಗುರುತಿಸುವ ಆದರೆ ಶಬ್ದರೂಪದಲ್ಲಿ ಪ್ರಕಟೀಕರಿಸಲಾರದ ಸಾಂಸ್ಕೃತಿಕಮೌಲ್ಯಗಳತ್ತ ಗಣೇಶ್ ಅವರು ತರ್ಜನಿ ಚಾಚಿ ಪ್ರಕಾಶಗೊಳಿಸುವ ಪರಿ ಅತ್ಯಂತ ಹೃದ್ಯವಾದುದು. ಹೆಚ್ಚಿನ ಸಂದರ್ಭಗಳಲ್ಲಿ ಗತಾನುಗತಿಕವೆಂದು ತೋರಬಹುದಾದ ರೀತಿರಿವಾಜುಗಳ ಹಿನ್ನೆಲೆಯನ್ನು ನಿಕಷಕ್ಕೊಡ್ಡಿ ಅವುಗಳ ಆಶಯದ ಆಯಾಮಗಳ ಮೇಲೆ ಅವರು ಬೆಳಕನ್ನು ಚೆಲ್ಲಿದ್ದಾರೆ. ಹೀಗೆ ಹಬ್ಬ-ಹರಿದಿನಗಳು, ನಮಸ್ಕಾರಕ್ರಿಯೆಯಂತಹ ಆಚರಣೆಗಳು, ದೇವಾಲಯಗಳು, ಸಾಮಾನ್ಯ ಬದುಕಿನ ಸಾಧನ - ಸಾಮಗ್ರಿಗಳು, ಕೌಟುಂಬಿಕ-ಸಾಮಾಜಿಕ ಸಂಬಂಧಗಳು - ಇವೆಲ್ಲವುಗಳ 'ಸಂಕೇತನಿಗೂಹನ'ಗಳನ್ನು ಗಣೇಶ್ ಅವರು ವಿವರಿಸುವ ಅನುಸಂಧಾನವೂ ಕಲಾವಂತಿಕೆಯೂ ಉತ್ಸವಪ್ರಾಯವಾಗಿವೆ. ಈ ಬಗೆಯ ಸಂವಿಧಾನವು ಶುಷ್ಕ ಲಾಕ್ಷಣಿಕ ಪ್ರತಿಪಾದನೆಗಿಂತ ಹೆಚ್ಚು ಪರಿಣಾಮಕಾರಿಯಾಗಿದೆ ಎಂಬುದು ಸ್ವಯಂವೇದ್ಯ.

'ಪುರಾಣಪ್ರಜ್ಞಾಪುನರವಲೋಕನ', 'ದೇವಾಲಯತತ್ತ್ವ', 'ಗೌತಮಧರ್ಮಸೂತ್ರದ ಎಂಟು ಆತ್ಮಗುಣಗಳು' ಮೊದಲಾದ ಅವರ ನಾಲ್ಕಾರು ಬಿಡಿ ಪ್ರಬಂಧಗಳು ನಮ್ಮ ಪರಂಪರೆಯ ಅನೇಕ ಮುಖ್ಯ ಪ್ರಮೇಯಗಳ ಚಿರಕಾಲಿಕತೆಯನ್ನು ಉಪಪತ್ತಿಪೂರ್ವಕವಾಗಿ ಮನದಟ್ಟುಮಾಡಿಸಿವೆ.

ಸಾಹಿತ್ಯಶಾಸ್ತ್ರದಂತೆ ಸಂಗೀತ-ನೃತ್ಯ-ಸ್ಥಾಪತ್ಯಾದಿ ಕಲೆಗಳ ಪರಿಜ್ಞಾನವೂ ಸಾಮಾಜಿಕ-ಧಾರ್ಮಿಕ ಇತಿಹಾಸಪ್ರಜ್ಞೆಯೂ ವಿವಿಧದರ್ಶನಪರಿಚಿತಿಯೂ ಮೇಳವಿಸಿರುವುದರಿಂದ ಸಿದ್ಧಿಸಿರುವುದು ಗಣೇಶ್ ಅವರ ದೃಷ್ಟಿವೈಶಾಲ್ಯ ಮತ್ತು ಪರಿಷ್ಕೃತಿ.

ಪ್ರಾಜ್ಞದಿಗ್ದರ್ಶನ :

ಪ್ರಚಾರದ ಅಬ್ಬರ, ನಾವೀನ್ಯದ ಮೆರಗು ಮೊದಲಾದ ಕಾರಣಗಳಿಂದ ಕಳಪೆ ಪ್ರಯತ್ನಗಳು ಮಾಧ್ಯಮಗಳಲ್ಲಿ ಹಲವೊಮ್ಮೆ ಎಷ್ಟು ಪ್ರಾಶಸ್ತ್ಯ ಪಡೆದುಕೊಂಡುಬಿಡುತ್ತವೆಂದರೆ ಅವನ್ನು ಟೀಕಿಸುವುದು ಮಹಾಪರಾಧವೆನಿಸಿಬಿಡುತ್ತದೆ. ಇಂತಹ ವಿಪರ್ಯಾಸಗಳನ್ನು ಗಣೇಶ್ ಅವರು ತಪ್ಪದೆ ಗಮನಿಸುತ್ತಾರೆ. ನಿದರ್ಶನಕ್ಕೆ: ಅವ್ಯುತ್ಪನ್ನ ಬುದ್ಧಿಜೀವಿಗಳ ಪ್ರಶಂಸೆ ಪಡೆದುಕೊಂಡ ಪೀಟರ್ ಬ್ರೂಕ್ಸ್ ಮಹಾಭಾರತ. ಭಾಷಾಸಾಂಕರ್ಯದಿಂದ ಹಿಡಿದು ವೇಷಭೂಷಗಳ ಎಡವಟ್ಟಿನವರೆಗೆ ಎಲ್ಲ ಆಭಾಸಗಳನ್ನೂ ಒಳಗೊಂಡ ಆ ಪ್ರಯೋಗದ ಆಯೋಜಕನನ್ನು ಮಹಾಭಾರತವನ್ನು ರಂಗಭೂಮಿಗೆ ತಂದ ಆದ್ಯ ಎಂದೆಲ್ಲ ವಿಮರ್ಶಕರು ವಾಚಾಮಗೋಚರ ಹೊಗಳಿದರು. ಅದಕ್ಕೆ ಗಣೇಶ್ ಅವರ ಪ್ರತಿಕ್ರಿಯೆ:

"ರಾಜಶೇಖರಮಹಾಕವಿಯ (ಕ್ರಿ.ಶ. 10ನೆಯ ಶತಮಾನ) 'ಪ್ರಚಂಡಪಾಂಡವ', ಕಾಶ್ಮೀರಕವಿ ಕ್ಷೇಮೇಂದ್ರನ (ಕ್ರಿ.ಶ. 11ನೆಯ ಶತಮಾನ) 'ಚಿತ್ರಭಾರತ', ದಾಕ್ಷಿಣಾತ್ಯಕವಿ ಅಗಸ್ತ್ಯನ (ಕ್ರಿ.ಶ. 14ನೆಯ ಶತಮಾನ) 'ಬಾಲಭಾರತ'ಗಳು ವ್ಯಾಸವಾಣಿಯನ್ನು ದೃಶ್ಯಕಾವ್ಯವನ್ನಾಗಿಸುವ ಯತ್ನಗಳೆಂದು ತಿಳಿದ ಯಾವ ಪ್ರಾಜ್ಞರಿಗಾಗಲಿ ಇಂಥ ಅನಭಿಜ್ಞರ ಅಪಲಾಪಗಳು ಹಾಸ್ಯಾಸ್ಪದವಾಗಿ ಕಾಣದಿರವು. ನಮ್ಮ ದೇಶೀಯರಂಗಭೂಮಿಗಳಾದ ಯಕ್ಷಗಾನ, ಕಥಕಳಿ, ಭಾಗವತಮೇಳಾದಿಗಳ ರೂಪದಲ್ಲಿ ಅದೆಷ್ಟು ಬಾರಿ ಸಮಗ್ರಮಹಾಭಾರತವು ಪ್ರದರ್ಶಿತವಾಗುತ್ತ ಬಂದಿಲ್ಲ? ಬ್ರೂಕ್ಸರ ಪ್ರಯೋಗಗಳು ಅಭಾರತೀಯರಿಗೆ ಅಥವಾ ವ್ಯಾಸರ ಕಾವ್ಯದ ಪರಿಚಯವಿಲ್ಲದವರಿಗೆ ರುಚಿಸಬಹುದು. ಆದರೆ ಭಾರತದ ಹೃದಯವನ್ನು ಬಲ್ಲವರಿಗೆ, ಸರಳಹೃದಯದ ಭಾರತದೇಶದ ಶ್ರೀಸಾಮಾನ್ಯರಿಗೆ ಮಾತ್ರ ಸರಿ(ವಿ) ಯಾಗವು." ('ಹಾಸುಬೀಸು', ಪುಟ 242)

ಅದಕ್ಕೆ ಹೋಲಿಸಿದರೆ ದೂರದರ್ಶನದ ಮಹಾಭಾರತ ಧಾರಾವಾಹಿ (ಅದರ ಹಲವು ತಾಂತ್ರಿಕ ದೋಷಗಳನ್ನು ಕುರಿತು ದೀರ್ಘ ವಿಶ್ಲೇಷಣಾತ್ಮಕ ಪ್ರಬಂಧವನ್ನೇ ತಾವೇ ನೀಡಿದ್ದರೂ) ದೂರದರ್ಶನದ ಧಾರಾವಾಹಿಯು ಆರ್ಷಪ್ರಜ್ಞೆಗೆ ಹತ್ತಿರವೂ ಮಾರ್ಗದರ್ಶಕವೂ ಆದ ಉತ್ತಮ ದೃಶ್ಯಕಾವ್ಯವಾಗಿದೆ, ಭಾರತೀಯ ಮಾನಸಿಕತೆಗೆ ಹೆಚ್ಚು ಆಸ್ವಾದ್ಯವೂ ಆಗಿದೆ – ಎಂದಿದ್ದಾರೆ ಗಣೇಶ್.

ಇಂತಹ ಸಂದರ್ಭಗಳಲ್ಲಿ ಶಿಷ್ಟಸಮಾಜಕ್ಕೆ ಪ್ರಾಜ್ಞದಿಗ್ದರ್ಶನ ಮಾಡುತ್ತಬಂದಿರುವುದೂ ಋಜುದೃಷ್ಟಿಯ ಸಮರ್ಥಕರಾಗಿರುವುದೂ ಗಣೇಶ್ ಅವರಿಂದ ಸಂದಿರುವ ಅನುಪಮ ಕೊಡುಗೆ.

ಸ್ವೀಯ ನೂತನರಚನೆಗಳ ಮೂಲಕ ಗಣೇಶ್ ಅವರು ಸಂಗೀತ, ನೃತ್ಯ, ಯಕ್ಷಗಾನ ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ('ಭಾಮಿನಿ' ಇತ್ಯಾದಿ) ಸುವಿದಿತವೇ ಆಗಿದೆ. ಕಲೆಯ ಕ್ಷೇತ್ರಕ್ಕೇ ನೇರ ಸಂಬಂಧಿಸಿದ 'ಭಾರತೀಯಕಲೆಗಳ ವಿಕಾಸ ಮತ್ತು ಏಕತೆ', 'ಸಂಗೀತದಲ್ಲಿ ರಸ', 'ರಾಗ–ತಾಳಗಳ ವಾಸ್ತವಸಾಧ್ಯತೆ' ಮೊದಲಾದ ಗಣೇಶ್ ಅವರ ಪ್ರಬಂಧಗಳು ಈ ಕಲಾಪ್ರಕಾರಗಳ ಬಗೆಗೆ ಪ್ರಬೋಧಕ ಒಳನೋಟಗಳನ್ನು ನೀಡಿವೆ.

ಅವಧಾನಕಲೆಯ ಸಮೀಕ್ಷೆ

ಗಣೇಶ್ ಅವರ ಅವಧಾನಚಾತುರಿಯಂತೂ ಸಾಮಾನ್ಯ ರಸಿಕರ ಮಾತಿರಲಿ, ನಮ್ಮ ಕಾಲದ ಸಾರಸ್ವತಸಾಧನೆಯ ಶಿಖರಪ್ರಾಯರೆಂದು ಪರಿಗಣಿತರಾಗಿರುವ ಸಮುನ್ನತರಿಂದಲೂ ಮುಕ್ತಕಂಠಪ್ರಶಂಸೆಯನ್ನು ಗಳಿಸಿದೆ. ಅವಧಾನಪ್ರದರ್ಶನ ಪ್ರಮುಖವಾಗಿ ಒಂದು ವೈನೋದಿಕ ಪ್ರಕ್ರಿಯೆ, ಅದರಲ್ಲಿ ಆದ್ಯತೆಯ ಅಂಶವೆಂದರೆ ನಿರ್ವಹಣೆಯೇ – ಎಂಬುದು ಎಲ್ಲೆಡೆ ಸ್ವೀಕೃತವಾಗಿರುವ ತತ್ತ್ವ. ಗಣೇಶ್ ಅವರು ಅನೇಕ ದಶಕಗಳಿಂದ ಕರ್ನಾಟಕದಲ್ಲಿ ಕಣ್ಮರೆಯಾಗಿದ್ದ ಅವಧಾನಕಲೆಯನ್ನು ಪುನರುಜ್ಜೀವಿಸಿದುದು ಮಾತ್ರವಲ್ಲದೆ ಅವಧಾನಕ್ಕೆ ಹೊಸ ಆಯಾಮಗಳನ್ನು ಸೇರ್ಪಡೆಗೊಳಿಸಿದ್ದಾರೆ.

ವೈಶಿಷ್ಟ್ಯವೆಂದರೆ ಗಣೇಶ್ ಅವರ ರಚನೆಗಳೂ ಪೂರಣಗಳೂ ನಿಭಾವಣೆಗಳೂ ಸ್ವತಂತ್ರಕವನಗಳಾಗಿಯೂ ಉನ್ನತಸ್ಥಾನವನ್ನು ಪಡೆದುಕೊಳ್ಳಬಲ್ಲವಾಗಿವೆ ಎಂಬುದು. ಅಪ್ರಸ್ತುತಪ್ರಸಂಗಾದಿ ಸಂದರ್ಭಗಳಲ್ಲಿ ಅವರು ಮೆರೆಯುವ ಚಮತ್ಕೃತಿಯೂ ಸ್ಮರಣೀಯವೆನಿಸಿದೆ.

ಅವಧಾನಕಲೆಯ ಇತಿಹಾಸ, ಧಾರಣಸ್ವರೂಪ, ವಿವಿಧ ಅಂಗಗಳು, ಕವಿತ್ವ ಮತ್ತು ಕಲೆಗಾರಿಕೆ, ವಿದ್ವದ್ವೈಭವ–ಆನಂದಾದಿ ಪ್ರಯೋಜನಗಳು, ನೂರಾರು ಸ್ವೀಯ ಹಾಗೂ ಅನ್ಯ ಅವಧಾನಾದ್ಭುತಗಳು – ಇವುಗಳ ಸಮೀಕ್ಷೆಗೇ ಮೀಸಲಾದ ಮತ್ತು ಗಣೇಶ್ ಅವರಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿಯನ್ನು ದೊರಕಿಸಿಕೊಟ್ಟ 'ಕನ್ನಡದಲ್ಲಿ ಅವಧಾನಕಲೆ' ಗ್ರಂಥ ಕನ್ನಡ ಸಾಹಿತ್ಯೇತಿಹಾಸದ ಒಂದು ಮೈಲಿಗಲ್ಲು ಎಂದರೆ ಹೆಚ್ಚು ಹೇಳಿದಂತೆ ಆಗಲಿಲ್ಲ. (ಇದು ಕನ್ನಡ ವಿಶ್ವವಿದ್ಯಾಲಯ ನೀಡಿದ ಮೊತ್ತಮೊದಲ ಡಾಕ್ಟರೇಟ್ ಕೂಡಾ.) ಅವಧಾನತಾಂತ್ರಿಕತೆಯನ್ನು ಕುರಿತು ಇಷ್ಟು ವಿಸ್ತಾರವೂ ಸಮಗ್ರವೂ ಆದ ಗ್ರಂಥ ನಮಗೆ ತಿಳಿದಿರುವಂತೆ ಬೇರೆ ಯಾವ ಭಾಷೆಯಲ್ಲಿಯೂ ಇದುವರೆಗೆ ಬಂದಿಲ್ಲ. ಹಲವಾರು ವರ್ಷ ನೂರಾರು ಅವಧಾನಗಳನ್ನು ನಡೆಸಿ ಗೆದ್ದಿರುವ ಗಣೇಶ್ ಅವರೇ ಅವಧಾನಕಲೆಯ ಪೂರ್ವೋತ್ತರಗಳ ಬಗೆಗೆ ಸಂಶೋಧನೆ ನಡೆಸಿ ಈ ಉದ್ಗ್ರಂಥವನ್ನು ಸಿದ್ಧಪಡಿಸಿರುವುದು ಒಂದು ವಿಶೇಷ. ವಿವಿಧ ಅಂಗಗಳಿಗೆ ದಾರ್ಷ್ಟಾಂತಿಕವಾಗಿ ಇಲ್ಲಿ ಅನೇಕ ಕಡೆ ನೀಡಲಾಗಿರುವುದು ಗಣೇಶ್ ಅವರವೇ ಆದ ಅವಧಾನೋದ್ಧೃತಗಳು. ಇದು ಅನಿವಾರ್ಯವೇ ಆಗಿದೆ. ಏಕೆಂದರೆ ಸ್ವಭಾವದಲ್ಲಿಯೇ ಪ್ರಯೋಗಪ್ರಧಾನಗಳಾದ ಅವಧಾನಗಳು ಸಮಗ್ರರೀತಿಯಲ್ಲಿ ವಿರಳವಾಗಷ್ಟೆ ದಾಖಲೆಗೊಳ್ಳುತ್ತವೆ. ಈ ಕಾರಣದಿಂದ ಅಪೇಕ್ಷೆಗನುಗುಣವಾದ ಉದಾಹೃತಗಳು ದುಷ್ಪ್ರಾಪ್ಯ.

ಸಾರಸ್ವತಪರಂಪರೆಯ ಮತ್ತು ಕಾವ್ಯೋದ್ಯಮವಿಲಾಸದ ಒಳ್ಳೆಯ ಪರಿಚಯ ಬಯಸುವವರಿಗೂ ಗಣೇಶ್ ಅವರ ಈ ಕೃತಿ ದೊಡ್ಡ ನಿಧಿಯಾಗಿದೆ.

ಅಪೂರ್ವ ವಿಕ್ರಮ :

ಅವಧಾನಕಲೆಗೆ ಗಣೇಶ್ ಅವರು ಹೊಸ ಆಯಾಮಗಳನ್ನು ಸೇರ್ಪಡೆ ಮಾಡಿದ್ದಾರೆ ಎಂದು ಮೇಲೆ ಹೇಳಲಾಯಿತಷ್ಟೆ. ತತ್ಸಂಬಂಧವಾಗಿ ಇಲ್ಲಿ ನೆನಪಿಗೆ ಬರುತ್ತಿರುವುದು ಈಗ್ಗೆ ಇಪ್ಪತ್ತೊಂದು ವರ್ಷ ಹಿಂದೆ (15–12–1991) ಬೆಂಗಳೂರು ಭಾರತೀಯ ವಿದ್ಯಾಭವನದಲ್ಲಿ ಗಣೇಶ್ ಅವರು ನಡೆಸಿದ ಶತಾವಧಾನ ಕಾರ್ಯಕ್ರಮ. ಅದು ಮುಂಜಾನೆಯಿಂದ ರಾತ್ರಿಯವರೆಗೆ ಅಖಂಡವಾಗಿ ನಡೆಯಿತು. ವಿಶೇಷವೆಂದರೆ ಗಾತ್ರಬಾಹುಳ್ಯದಿಂದಾಗಿ ಶತಾವಧಾನಗಳಿಗೆ ಕನಿಷ್ಠ ಮೂರು ದಿನಗಳ ಕಾಲ ಹಿಡಿಯುವುದು ಸಾಮಾನ್ಯ. ಈಗಲೂ ಅದೇ ರೂಢಿ ಆಂಧ್ರದಲ್ಲಿ ಇದೆ. ವಿರಳವಾಗಿ ಸಾಹಸಿಗಳು ಎರಡು ದಿನಗಳಲ್ಲಿ ನಿಭಾಯಿಸಿರುವ ನಿದರ್ಶನಗಳಿವೆ. ಆದರೆ ವಿಶ್ರಾಂತಿಯನ್ನೂ ಮತ್ತು ಧಾರಣೆಗೆ ಮನನಾವಕಾಶದ ಅನುಕೂಲವನ್ನೂ ಅವಧಾನಿ ಬಳಸಿಕೊಂಡನೆಂಬ ಆಪಾದನೆಗೆ ಅವಕಾಶ ಬೇಡವೆಂದು ಗಣೇಶ್ ಅವರು ಒಂದೇ ದಿನದಲ್ಲಿ ಶತಾವಧಾನ ನಡೆಸುವ ಅಪೂರ್ವ ನಿರ್ಣಯ ಕೈಗೊಂಡು ಸಫಲರಾದರು.

"ಅವಧಾನ ಕ್ಷೇತ್ರದಲ್ಲಿ ಮೇರುಸದೃಶರೆನಿಸಿದ್ದ ತಿರುಪತಿ ವೇಂಕಟಕವಿಗಳು, ಗಡಿಯಾರಂ ವೇಂಕಟಶೇಷಶಾಸ್ತ್ರಿಗಳು ಮೊದಲಾದ ಸ್ವನಾಮಧನ್ಯರ ಸಾಲಿನಲ್ಲಿ ನಿಲ್ಲಬಲ್ಲವರು ಗಣೇಶ್" – ಎಂದು ಸ್ವಯಂ ದ್ವಿಭಾಷಾವಧಾನಿಗಳಾದ ಜೆ. ಸದಾನಂದಶಾಸ್ತ್ರಿಗಳೇ ಉದ್ಗರಿಸಿದ್ದಾರೆ ಎಂದ ಮೇಲೆ ಹೆಚ್ಚು ಹೇಳುವುದೇನಿದೆ?

ಗಣೇಶ್ ಅವರ ಅವಧಾನಪರಿಕ್ರಮದಲ್ಲಿ ಹಲವು ಮೈಲಿಗಲ್ಲುಗಳನ್ನು ಗುರುತಿಸುವ ಆಕಾಂಕ್ಷೆ ಸಹಜವಾದರೂ ಅದು ವ್ಯರ್ಥಪ್ರಯಾಸವೇ ಆದೀತು. ಒಂದಾದಮೇಲೊಂದು ವಿಕ್ರಮಗಳನ್ನು ಸ್ಥಾಪಿಸುತ್ತ ಸಾಗಿದ್ದಾರೆ ಅವರು. ಆ ಪದಚಿಹ್ನೆಗಳನ್ನು ಗುರುತಿಸಹೊರಟರೆ ನಾಲ್ಕು ಹೆಜ್ಜೆಗಳಿಗೊಂದರಂತೆ ಕಲ್ಲುಗಳನ್ನು ನೆಡುತ್ತಹೋಗಬೇಕಾಗುತ್ತದೆ.

ಉಪಲಕ್ಷಣಾರ್ಥ ಒಂದೆರಡು ಸಾಧನೆಗಳನ್ನು ಸ್ಮರಿಸಬಹುದಾದರೆ: ಮೇಲೆ ಪ್ರಸ್ತಾವಿಸಿದಂತೆ ಒಂದೇ ದಿನದ ಅವಧಿಯಲ್ಲಿ ಅವರು ನಡೆಸಿದ ಶತಾವಧಾನ; ಮೊತ್ತಮೊದಲ ಬಾರಿಗೆ ರಾಷ್ಟ್ರೋತ್ಥಾನ ಕಲಾಕೇಂದ್ರದ ಆಯೋಜನೆಯಲ್ಲಿ 1995ರ ಆಗಸ್ಟ್ 11ರಂದು ಅಭಿನವ ರವಿವರ್ಮ ಬಿ.ಕೆ.ಎಸ್. ವರ್ಮ ಅವರೊಡನೆ ನಡೆಸಿದ 'ಕಾವ್ಯ–ಚಿತ್ರ' ಜುಗಲಬಂದಿ; 1996 ಆಗಸ್ಟ್ 8 ರಂದು ನಡೆದ 'ಕಾವ್ಯ–ಚಿತ್ರ–ಗೀತ–ನೃತ್ಯ'; ರಾಷ್ಟ್ರೋತ್ಥಾನ ಪರಿಷತ್ತಿನ ವೇದಿಕೆಯಲ್ಲಿಯೆ ಭಾರತಸ್ವಾತಂತ್ರ್ಯದ ಸುವರ್ಣೋತ್ಸವ ನಿಮಿತ್ತ 1997 ಆಗಸ್ಟ್ 24ರ ಸಂಜೆಯಿಂದ 25ರ ಸಂಜೆಯ ತನಕ ಅಖಂಡವಾಗಿ ಇಪ್ಪತ್ತನಾಲ್ಕು ಗಂಟೆಗಳ ಕಾಲ ನಡೆಸಿ ದಾಖಲೆ ನಿರ್ಮಿಸಿದ 'ನಿರಂತರ ಕಾವ್ಯ–ಚಿತ್ರ'; ಮೊದಲಾದವು.

ಅಸಮಾನ ಪ್ರತಿಭಾವಿಲಾಸ :

ನಿಷೇಧಾಕ್ಷರೀ, ಸಮಸ್ಯಾಪೂರಣ, ದತ್ತಪದೀ, ನ್ಯಸ್ತಾಕ್ಷರೀ, ವ್ಯಸ್ತಾಕ್ಷರೀ, ವರ್ಣನೆ, ಆಶುಕವಿತ್ವ, ಕಾವ್ಯವಾಚನ, ಅಪ್ರಸ್ತುತಪ್ರಸಂಗ, ಸಂಖ್ಯಾಬಂಧ ಮೊದಲಾದ ಒಂದೊಂದು ಅವಧಾನಾಂಗದಲ್ಲಿಯೂ ಗಣೇಶ್ ಅವರು ಅಪೂರ್ವ ಪ್ರತಿಭೆಯನ್ನು ಮೆರೆದಿದ್ದಾರೆ.

ಮೇಲ್ನೋಟಕ್ಕೆ ಅಶ್ಲೀಲವೆನಿಸುವ ಸಮಸ್ಯಾವಾಕ್ಯಗಳಿಗೆ ಸಮರ್ಥ ಪಾದಪೂರಣ, ಬಹುಶಃ ಅವಧಾನವೇದಿಕೆಯಲ್ಲಷ್ಟೆ ಕಾಣಸಿಗುವ ವಿರಳ ಛಂದೋಬಂಧಗಳ ಬಳಕೆ, ಯಾವಾವುದೋ ಭಾಷೆಗಳ ಅಸಂಬದ್ಧ ಶಬ್ದಸಮೂಹಗಳನ್ನು 'ದತ್ತಪದೀ'ಯಲ್ಲಿ ಅಳವಡಿಸುವಿಕೆ – ಮೊದಲಾದ ದಿಗ್ಭ್ರಮೆಗೊಳಿಸುವ ಸವಾಲುಗಳನ್ನು ಗಣೇಶ್ ಅವರು ಸಮರ್ಥವಾಗಿಯೂ ಲೀಲಾಜಾಲವಾಗಿಯೂ ನಿರ್ವಹಿಸಿದ್ದಾರೆ. ಒಂದೇ ಪದ್ಯದಲ್ಲಿ ಸಪ್ತವರ್ಣಗಳ ಶ್ಲೇಷಾತ್ಮಕ ಉಲ್ಲೇಖ; 'ರಾಮ' ಎಂಬ ಶಬ್ದ ಬಾರದಂತೆ ಸೀತೆಯ ಸ್ತುತಿ; ರಾಮನಿಂದ ರಾವಣ ನಶ್ಯ ಕೇಳಿದ; – ಇಂತಹ ನೂರಾರು ಸವಾಲುಗಳು ಗಣೇಶ್ ಅವರ ಅವಧಾನಗಳಲ್ಲಿ ಸುಳಿದುಹೋಗಿವೆ. 'ಕಂದ'ದಂತಹ ಸಣ್ಣ ಛಂದಸ್ಸನ್ನು ಹೆಜ್ಜೆಹೆಜ್ಜೆಗೂ ನಿಷೇಧವನ್ನು ದಾಟಿ ಅರ್ಥಕ್ಕೆ ಭಂಗಬಾರದಂತೆ ನಿರ್ವಾಹ ಮಾಡಿರುವ ಪ್ರಸಂಗಗಳು ಎಷ್ಟೋ. 'ಇಬ್ಬರು ಪಾಂಡವರು ಲೋಕವಿಶ್ರುತರು', 'ಅರ್ಜುನನು ಕರ್ಣನ ಮಗಳನ್ನು ಮದುವೆಯಾದ', 'ಭೀಮನು ಕುಂತಿಯನ್ನು ಕೊಂದನು', 'ರಾಮಾಯಣಯುದ್ಧದಲ್ಲಿ ಶಂಕರ ಸತ್ತ' . . . ಇಂತಹ ಅಸಂಖ್ಯ ಸವಾಲುಗಳಿಗೆ ಅವಧಾನಿಗಳು ಸಮರ್ಪಕ ಪೂರಣ ನೀಡಿದ್ದಾರೆ.

'ರಾಮನು ಗೋಹತ್ಯೆ ಮಾಡಿ ಯಾತ್ರೆಗೆ ಹೋದ' – ಎಂಬ ಸಮಸ್ಯೆಗೆ ಅವಧಾನಿಗಳು ನೀಡಿದ ಪೂರಣ:

ಧೀಮಂತಂ ಗೌತಮಮುನಿ
ನೇಮಮಿರಲ್ ಸ್ವೈರಿಸಲ್ಕೊದವದ ಮುನೀಶರ್।
ಸ್ತೋಮಿಸಿ ವಂಚಿಸೆ, ಸುಗುಣಾ–
ರಾಮಂ ಗೋಹತ್ಯೆಗೆಯ್ದು ಯಾತ್ರೆಗೆ ಪೋದಂ॥

ಚಮತ್ಕೃತಿ :

'ದತ್ತಪದೀ'ಗಳದಂತೂ ಒಂದು ಅತ್ಯಂತ ವಿಕಟ ಪ್ರಪಂಚ. 'ಸರಸರ, ಚರಚರ, ಪರಪರ, ಜರಜರ', ದೆಹಲಿ, ಕಲಕತ್ತ, ಮದರಾಸು, ಮುಂಬಯಿ'; 'ಕರಿಬೇವು, ಕೊತ್ತಂಬರಿ, ಶುಂಠಿ, ಪುದಿನ' . . . ಇಂತಹ ನೂರಾರು ಶಬ್ದಗುಚ್ಛಗಳನ್ನು ಒಳಗೊಂಡ ಪದ್ಯಗಳು ಅವಧಾನಗಳಲ್ಲಿ ನುಸುಳಿಹೋಗಿವೆ.

ಆಗಿಂದಾಗ ಸ್ಮರಣೆಗೊಂಡಿರುವ ಗಣೇಶ್ ಅವರ ಒಂದು ರೋಚಕ ರಚನೆ 'ಇಡ್ಲಿ, ಸಾಂಬಾರು, ದೋಸೆ, ಪೂರಿ' ಈ ದತ್ತಪದಗಳ ನಿರ್ವಹಣೆ:

ಶಾ॥ ತುಂಬಿರ್ಪಾಳ್ತೆಯಿನೆನ್ನ ಚಿತ್ತಮಿಡಲಿ ತ್ವತ್ಪಾದದೊಳ್ ವೃತ್ತಿಯಂ
ಸಾಂಬಾ! ರುದ್ರ – ಶಿವದ್ವಯಾಕೃತಿಯಿನೀ ಲೋಕೋತ್ಸವೋದ್ಭಾಸಕಾ!
ಲಂಬಾಘಂಗಳಿನಾದುದೋ ಸೆಳೆತಮಾ ದುರ್ಲೋಕದತ್ತಲ್ ಕರಂ
ನಂಬಿರ್ಪಾನತಭಕ್ತರಂ ಪೊರೆವುದಯ್ ದೇವಾ! ದಯಾಪೂರಿತಾ!

'ರಂ, ಜಿನ್, ವೈನ್, ವಿಸ್ಕಿ' – ಈ ದತ್ತಪದಗಳನ್ನು ಬಳಸಿದ ಅಮೃತೋದ್ಭವವರ್ಣನೆ:

ಮ॥ ಸುರರುಂ ದಾನವರುಂ ಸಮಂತು ಕಡೆಯಲ್ಕಾ ಕ್ಷೀರಸಾರಾಕರಂ
ಮೆರಸಲ್ ಕ್ಷ್ವೇಲ–ಸುಧಾಂಶು–ರತ್ನ–ಸುರಭಿ–ಶ್ರೀಮುಖ್ಯರಂ ಮಾರಜಿನ್–
ನರಮಿತ್ರರ್ಕಳ ಕೂರ್ಮೆಯಿಂ ಕಳೆದುವೈ ನುಗ್ಗಾಗಿ ಕಷ್ಟಂಗಳುಂ
ಸ್ಫುರಿಸುತ್ತಿರ್ದುದದಾಗಳಾ ಸುಧೆ ಹವಿಸ್ ಕೀಳಾದ ಪೊಲ್ ದೇವರೊಳ್॥

ಶತಾವಧಾನ ಕಾರ್ಯಕ್ರಮದಲ್ಲಿ ಒಡ್ಡಲಾಗಿದ್ದ ಒಂದು ದತ್ತಪದೀ ಸವಾಲು – 'ಹಲೋ, ಹಾಯ್, ಸ್ವೀಟ್, ಹನೀ' ಎಂದು ರಾಮನು ಶೂರ್ಪಣಖೆಯನ್ನು ಸಂಬೋಧಿಸುತ್ತಾನೆ ಎಂಬುದು. ಅವಧಾನಿಗಳ ಪರಿಹಾರ:

ಶಿ॥ ವಿನೋದಾರ್ಥಂ ಸಾರ್ಥಂ ಮುನಿನಿವಹಲೋಲೋ ರಘುವರಃ
ಸ್ಪೃಹಾಯಾಂ ರಾಗಾಂಧಾಂ ವಿಕಟವನಿತಾಂ ದಂಡಕವನೇ ।
ಮಹಾತೇಜಸ್ವೀಟ್ ಪ್ರತ್ಯಯಸಮುಚಿತಶ್ಚೈಕವನಿತೋ
ವಿಶಾಲಾಕ್ಷೀತ್ಯೇವಂ ವದತಿ ಮಹನೀಯೋ ವಿಧಿವಶಾತ್॥

(ಟಿಪ್ಪಣಿ:– ಮಹಾತೇಜಸ್ವೀ+ಈಟ್=ಈಶ; ಪ್ರತ್ಯಯ=ವಿಶ್ವಾಸ)

ಚಿತ್ರಬಂಧವು ಅವಧಾನದಲ್ಲಿ ಅತ್ಯಂತ ಜಟಿಲವೂ ಆಯಾಸಕರವೂ ಆದ ಅಂಗ. ಹಾರ, ಮುರಜ, ಗೋಮೂತ್ರಿಕಾ ಮೊದಲಾದ ಬಗೆಬಗೆಯ ಅಸಾಮಾನ್ಯ ಬಂಧಗಳನ್ನು ಗಣೇಶ್ ಅವರು ನಿರ್ವಹಿಸಿರುವುದಲ್ಲದೆ ಎರಡು ಅಥವಾ ಮೂರು ಅರ್ಥಗಳನ್ನೀಯುವ ಶ್ಲೇಷಪದ್ಯಗಳನ್ನೂ ಎರಡೇ ಅಕ್ಷರದ ಮತ್ತಿತರ ಚಿತ್ರಕಾವ್ಯಗಳನ್ನೂ ಯಥೇಷ್ಟವಾಗಿ ರಚಿಸಿದ್ದಾರೆ. ಅತ್ಯಂತ ವಿಶಿಷ್ಟವಾದ 'ಗರ್ಭಕವಿತ್ವ' ರಚನೆಗಳನ್ನೂ ಅವಧಾನಗಳಲ್ಲಿ ನೀಡಿದ್ದಾರೆ. ಒಂದು ಅವಧಾನದಲ್ಲಿ ಕಂದವನ್ನು ಗರ್ಭೀಕರಿಸಿಕೊಂಡ ಉತ್ಪಲಮಾಲೆಯ ರಚನೆಯಾಗಿತ್ತು, ಹೀಗೆ:

ಉ॥ ಹೇ ನಟರಾಜ! ರಾಜಮಕುಟಾ! ಕಟಿಕಂಟಕಿತೇಭಕೃತ್ತಿಭೂ–
ಷಾ! ನವತಾವಿಶೇಷ! ಸುಪುರಾತನಕೋಷ! ಚಿದಂಕಪೋಷಣಾ!
ಶ್ರೀನಟನಾತ್ಮಭಾವರಸಿಕಾ! ಘಟನಾಘಟನಾನ್ಯಥಾವಿಧಾ–
ನೇನ! ಘನಾ! ಘನಾಭಗಲಸಂಗತನೀಲಿಮ! ಕಾಯ್ವುದೊಲ್ಮೆಯಿಂ ॥

ಗರ್ಭಿತಕಂದ॥ ನಟರಾಜ! ರಾಜಮಕುಟಾ!
ಕಟಿಕಂಟಕಿತೇಭಕೃತ್ತಿ ಭೂಷಾ! ನವತಾ–।
ನಟನಾತ್ಮಭಾವರಸಿಕಾ!
ಘಟನಾಘಟನಾನ್ಯಥಾ ವಿಧಾನೇನ! ಘನಾ॥

ಗಣೇಶ್ ಅವರ ಅವಧಾನಾಂತರ್ಗತರಚನೆಗಳು ಬಂಧದ ದೃಷ್ಟಿಯಿಂದ ಸಮರ್ಥವಾಗಿರುವುದು ಮಾತ್ರವಲ್ಲದೆ ಉಚ್ಚಸ್ತರದ ಕಾವ್ಯಗುಣವನ್ನೂ ಒಳಗೊಂಡಿವೆ.

ಅವಧಾನ ಕಾರ್ಯಕ್ರಮದುದ್ದಕ್ಕೂ ನಡೆಯುವ ಅಪ್ರಸ್ತುತಪ್ರಸಂಗ ಸದಾ ಚಮತ್ಕಾರದಿಂದ ಕೋರೈಸುತ್ತಿರುತ್ತದೆ.

ಅಪ್ರಸ್ತುತಪ್ರಸಂಗಿ: "ಮ್ಯಾರೇಜಿಗೂ ಗ್ಯಾರೇಜಿಗೂ ಏನು ವ್ಯತ್ಯಾಸ?"

ಅವಧಾನಿ: "ಸರಿಯಾದದ್ದು ಹಾಳಾಗಲು ಮ್ಯಾರೇಜ್; ಹಾಳಾದದ್ದು ಸರಿಯಾಗಲು ಗ್ಯಾರೇಜ್."

ಅ.ಪ್ರ: "ಭಾರತವು ಗಣಿತಶಾಸ್ತ್ರಕ್ಕೆ ಕೊಟ್ಟ ದೊಡ್ಡ ಕೊಡುಗೆ ಏನು?"

ಅ: "ನೀವು ಅವಧಾನಕ್ಕೆ ಕೊಟ್ಟದ್ದೇ – ಶೂನ್ಯ."

ಅ.ಪ್ರ: "ಗಂಡಸಿಗೇಕೆ ಗೌರೀದುಃಖ ಎಂಬ ಗಾದೆ ಈಗ ಹೊಂದುವುದೇ?"

ಅ: "ಅದಕ್ಕೊಂದು ತಿದ್ದುಪಡಿ ಬೇಕು – 'ಗಂಡಸಿಗೇಕೆ ಡೌರೀ ದುಃಖ' ಎಂದು!"

ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ ಅವರಂಥ ಧೀಮಂತರ ಪ್ರಶಂಸೋದ್ಗಾರ ಇದು.

"ಶ್ರೀ ಗಣೇಶ್ ಅವರು ಪ್ರತಿಭಾಶಾಲಿಗಳು, ಕಲಾಭಿಜ್ಞರು, ಕಲ್ಪನಾಶಕ್ತಿಯುಳ್ಳ ರಸಿಕರು. ಅವರ ಜ್ಞಾಪಕಶಕ್ತಿ – ಧಾರಣಶಕ್ತಿಗಳು ಮೇಲುಮಟ್ಟದವು. ಅವರ ಆಶುಕವಿತಾರಚನೆಯ ಸಾಮರ್ಥ್ಯ ವಿಸ್ಮಯಾವಹವಾದುದು. ಅವಧಾನನಿರ್ವಹಣೆಯಲ್ಲಿ ಅವರು ಪ್ರಕಟಿಸುವ ಧೈರ್ಯ – ಆತ್ಮವಿಶ್ವಾಸಗಳು ಶ್ಲಾಘ್ಯವಾದವು; ಗಳಿಸಿರುವ ಜನಪ್ರಿಯತೆ ಮೆಚ್ಚಬೇಕಾದುದು; ಅವರ ಪ್ರಯತ್ನ – ಪರಿಶ್ರಮಗಳ ಫಲವಾಗಿ ಕನ್ನಡದಲ್ಲಿ ಅವಧಾನಕಲೆಯ ಪ್ರಸಾರ ಉಜ್ಜೀವಿಸಲು ಸಾಧ್ಯವಾಗಿದೆ, ಪ್ರಭಾವ ಬೆಳೆಯಲು ಅನುಕೂಲವಾಗಿದೆ."

ಆಧಾರಸಂಹಿತೆ :

ಗಣೇಶ್ ಅವರ ಪ್ರತಿಪಾದನೆಗಳ ಇಂಗಿತ ಪಾರಂಪರಿಕವಾದುದೆಲ್ಲದರ ಸಂಕೀರ್ತನೆಯಲ್ಲ. ಯಾವುದೇ ವಿಕೃತಿಗಳನ್ನು ಟೀಕಿಸಲು ಅವರು ಎಂದೂ ಹಿಂದೆಗೆಯುವವರಲ್ಲ. ಆದರೆ ಅವರ ಪರಾಮರ್ಶನೆಗಳಲ್ಲಿ ಎಲ್ಲೆಡೆ ಕಾಣುವ ಅಂತಃಶ್ರುತಿಯೆಂದರೆ ಅಧ್ಯಾತ್ಮವು ಅಪರಿಚ್ಛಿನ್ನವೆಂಬ ಗ್ರಹಿಕೆ; ಸಾಮಾನ್ಯಸ್ತರಗಳಲ್ಲಿ ಹಲವೊಮ್ಮೆ ಕಾಣುವ ಲೋಪದೋಷಗಳಿಗೆ ಪರಿಹಾರವನ್ನು ಅರಸಬೇಕಾದದ್ದು ವೈಶ್ವಿಕಸ್ತರದಲ್ಲಿ – ಎಂಬ ಸೂತ್ರೀಕರಣ.

ಧರ್ಮ, ಬ್ರಹ್ಮ, ರಸ – ಈ ತತ್ತ್ವತ್ರಯವನ್ನು ಆಶ್ರಯಿಸಿಯೇ ಭಾರತೀಯಸಂಸ್ಕೃತಿ – ಜೀವನಮೌಲ್ಯಗಳೆಲ್ಲ ಬೆಳೆದು ಬೆಳಗಿರುವುದು – ಎಂಬುದು ಗಣೇಶ್ ಅವರ ಆಧಾರಸಂಹಿತೆ.

ಸಾಹಿತ್ಯ-ಕಲಾದಿ ಸಂದರ್ಭದಲ್ಲಿ 'ಎಂಡ್ಸ್ ಆ್ಯಂಡ್ ಮೀನ್ಸ್' ಕುರಿತ ಜಿಜ್ಞಾಸೆ ಎಲ್ಲ ಕಾಲಕ್ಕೂ ನಡೆದಿರುವುದೇ. ಇದನ್ನು ಕುರಿತು ಗಣೇಶ್ ಅವರು ನೀಡಿರುವ ಸೂತ್ರಪ್ರಾಯ ವಿಶ್ಲೇಷಣೆ ಚಿಂತ್ಯವಾಗಿದೆ:

"ಆತ್ಮವಿಸ್ತಾರ ಹಾಗೂ ಅಹಂಕಾರಖಂಡನಗಳನ್ನು ಸಾಧಿಸಲೆಂದಿರುವ ಸಕಲಪ್ರಕಲ್ಪಗಳೂ ಕೇವಲ ತಮ್ಮ ಪರ್ಯಂತಭೂಮಿಯಲ್ಲಿ ಮಾತ್ರ ಫಲಕೊಡುವಂಥವಲ್ಲ; ಅನುಕ್ಷಣದ ಉಪಕ್ರಮದಲ್ಲಿಯೂ ಪ್ರಕ್ರಿಯೆಯೇ ಫಲವಾಗಿ ಪರಿಣಮಿಸುವಂಥವು. ಹೀಗಾಗಿಯೇ ಇವೆಲ್ಲ 'ಮೌಲ್ಯ'ಗಳೆಂದೆನಿಸಿವೆಯಲ್ಲದೆ 'ವಾಸ್ತವ' ಗಳೆಂದಲ್ಲ. (ಈ ಸಂದರ್ಭದಲ್ಲಿ ಆಚಾರ್ಯ ಎಂ. ಹಿರಿಯಣ್ಣನವರ ಮಹಾವಾಕ್ಯವು ಸ್ಮರಣೀಯ – That which does not end in itself is not a value). ಆ ಹಿನ್ನೆಲೆಯಿಂದ ಕಂಡಾಗ ನಾವು ನಮ್ಮ ಪ್ರಸ್ತುತವಾದದ ಚಾಕ್ರಿಕಸ್ಥಿತಿಗೆ (cyclic state) ಬಂದಿದ್ದೇವೆಂಬುದು ತಿಳಿಯದಿರದು. ದಿಟವೇ, ಇದೊಂದು ರೀತಿ ಹಾಗೆಯೇ. ಹುಚ್ಚು ಬಿಡದೆ ಮದುವೆಯಾಗದು, ಮದುವೆಯಾಗದೆ ಹುಚ್ಚು ಬಿಡದು. ಅಹಂಕಾರಖಂಡನೆಯಾಗದೆ ಕುಟುಂಬ-ಕಲೆ-ಮತ-ರಾಷ್ಟ್ರಾದಿಗಳ ಆಂತರ್ಯ ತಿಳಿಯದು; ದಿಟವಾದ ಸತ್ತ್ವವು ಮೆಯ್ಯೂಡದೆ ಅಹಂಕಾರವಳಿಯದು! ಇಂತಿರಲು ಪರಿಹಾರ ಹೇಗೆ? ಇದೊಂದು ಬೀಜವೃಕ್ಷ

ಸಮಸ್ಯೆಯಾಯಿತೆನಿಸಬಹುದು. ಆದರೆ ಸಮಸ್ಯೆಯೊಳಗೆ ಪರಿಹಾರವೂ ಇದೆ. ಸಾಧನಮೌಲ್ಯಗಳನ್ನು ಸಿದ್ಧಿಯೆಂದು ಭ್ರಮಿಸದಿದ್ದರಾಯಿತು, ಎಲ್ಲವೂ ಸರಿಯಾಗುತ್ತದೆ. 'ಯೇನ ತ್ಯಜಸಿ ತತ್ ತ್ಯಜ' ಎಂಬಂತೆ, ಯಾವುದರಿಂದ ನಾವು ಎಲ್ಲವನ್ನೂ ಮೀರುತ್ತೇವೆಯೋ ಕಡೆಗೆ ಆ ಒಂದನ್ನೂ ಮೀರಿ ಸಾಗಬೇಕು. ನೀರಿನಲ್ಲಿ ತೇಲಬೇಕೆಂಬಾತನು ನೀರನ್ನೇ ತಳ್ಳಬೇಕು, ಸಾವನ್ನು ಮೀರಬೇಕೆಂಬಾತನು ದೇಹವನ್ನೇ ಮೀರಬೇಕು. ಇದೊಂದು ಒಡಪಿನಂತೆ ಭಾಸವಾದರೂ ಒಡಪಲ್ಲ, ಅದು ಬಾಳಿನ ಮುಡಿಪು, ಚಿದಾನಂದಕಲೆಯ ಒನಪು." ('ಹೊಕ್ಕುಳಬಳ್ಳಿಯ ಸಂಬಂಧ', ಪುಟ 18–19)

ದೀರ್ಘಕಾಲದ ಮಥನದ ಫಲವಾಗಿ ಗಣೇಶ್ ಅವರು ನಿಶ್ಚಯಿಸಿಕೊಂಡು ಸತತವಾಗಿ ಪ್ರತಿಪಾದಿಸುತ್ತ ಬಂದಿರುವ ನಿಲವು ಇದು:

"ವೇದಾಂತದ ಮಹಾಭವನಕ್ಕಿರುವ ರಮಣೀಯವಾದ ಪ್ರವೇಶದ್ವಾರವೇ ಕಲೆ. ಬೇರೆ ದ್ವಾರಗಳಲ್ಲಿ ಹೆಚ್ಚು ತೆರಿಗೆ ತೆರಬೇಕು. ರಾಡಿಯೂ ಹೆಚ್ಚು. ತರ್ಕದ ದ್ವಾರವಿದೆ; ಆದರೆ ಅಲ್ಲಿ ಮುಳ್ಳು ಹೆಚ್ಚು. ಭಕ್ತಿಯ ದ್ವಾರವಿದೆ; ಅಲ್ಲಿ ಕೆಸರೇ ಅಧಿಕ; ಮುಳುಗಿ ಎದ್ದು, ಜಾರಿಬಿದ್ದು, ತೆವಳಿ ಹೋಗುವಂಥದ್ದು. ಕರ್ಮದ ದ್ವಾರವಿದೆ; ಅದು ಬರಿಯ ಮರುಭೂಮಿ; ಕಾಲು–ತಲೆಗಳೆಲ್ಲ ಸೀದುಹೋಗುವಂಥ ಬಿಸಿಲು ಸೀಮೆ. ಕಲೆಯ ದ್ವಾರ ಮಾತ್ರ ಹೂವಿನ ಹಾಸಿಗೆ. ಇಲ್ಲಿ ಗುರಿಯು ಅಮೃತಭಾಂಡವಾದರೆ ಮಾರ್ಗವೆಲ್ಲ ಪುಷ್ಪಾಕೀರ್ಣ. ಆದ್ದರಿಂದಲೇ ಹೇಳಿದ್ದು – 'ಯೋಗಾನಂದಮಯಾಃ ಕೇಚಿತ್ ಭೋಗಾನಂದಪರಾಃ ಪರೇ। ವಯಂ ಸರ್ವಪ್ರದಾತಾರಂ ರಸಾನಂದಮುಪಾಸ್ಮಹೇ॥' ಎಂದು. ಅಂತಹ ಪುಷ್ಪಮಾರ್ಗ – ಹೂವಿನ ಜೊತೆ ಹೂವಾಗಿ ಹೋಗುವಂಥದ್ದು – ಭಾರತೀಯಕಲೆಗಳ ಏಕತೆಯ ಸೂತ್ರವಾಗಿದೆ. ಆ ಸೌರಭ ನಮ್ಮೆಲ್ಲರ ಪಾಲಿಗಿರಲಿ ಎಂದು ಆಶಿಸೋಣ." ('ಹಾಸುಬೀಸು', ಪುಟ 136).

ಕನ್ನಡದಲ್ಲಿ ಅವಧಾನಕಲೆ

– ವಿದ್ಯಾಲಂಕಾರ ಪ್ರೊ॥ ಸಾ.ಕೃ. ರಾಮಚಂದ್ರರಾವ್

ನಮ್ಮ ಜನರಿಗೆ ಅವಧಾನವಿದ್ಯೆ ಎಂದರೆ ಅದರ ಅಪವಾದದಿಂದ ಮಾತ್ರ ತಿಳಿದೀತು! ಯಾರಿಗೂ ಯಾವುದಕ್ಕೂ ಅವಧಾನಕ್ಕೆ ವ್ಯವಧಾನವೇ ಇಲ್ಲವಲ್ಲ? ಅವಧಾನವೆಂದರೆ ಸಾಮಾನ್ಯವಾಗಿ ಆಲಸಿಕೆಯಿಲ್ಲದೆ ಮನಸ್ಸನ್ನು ಒಂದೆಡೆ ನಿಲ್ಲಿಸುವುದು, ಎಡೆಬಿಡದೆ ಗಮನವಿಡುವುದು, ಚಿತ್ತದ ಏಕಾಗ್ರತೆ – ಎಂದರ್ಥವಾಗುತ್ತದೆ. ಅವಧಾನವಿಲ್ಲದ ಓದು ನೆನಪಿನಲ್ಲಿ ಉಳಿಯಲಾರದು; ಅವಧಾನವಿಡದೆ ಮಾಡಿದ ಕೆಲಸ ಕೆಡುವುದು; ಅವಧಾನವಿಲ್ಲದೆ ನಡೆಯುವವನು ಎಡವಿಯಾನು. ಅವಧಾನವಿದ್ಯೆಯೆಂದರೆ ಇಷ್ಟೇ ಅರ್ಥವಲ್ಲ; ಏಕಕಾಲದಲ್ಲಿ ಅನೇಕ ಕೆಲಸಗಳನ್ನು (ಕಷ್ಟಸಾಧ್ಯವಾದುವನ್ನು) ಅನಾಯಾಸವಾಗಿ, ಆಟವಾಡುವಂತೆ, ಯಶಸ್ವಿಯಾಗಿ ನಿರ್ವಹಿಸುವ ಶಕ್ತಿ. ಇದು ನೆರೆದವರನ್ನು ಬೆರಗುಗೊಳಿಸುತ್ತದೆ, ರಂಜಿಸುತ್ತದೆ. ಅವಧಾನದ ಚಮತ್ಕಾರಕ್ಕೆ, ಅವಧಾನಿಯ ಚಾತುರಿಗೆ ಅಚ್ಚರಿಗೊಳ್ಳುತ್ತೇವೆ.

ತುಂಬ ಹಿಂದಿನಿಂದ ಇದು ಬೆಳೆದುಬಂದ ಕಲೆಯಂತೆ. ಇದನ್ನು ನಿರ್ವಹಿಸುವವರಿಗೆ ಅತಿಮಾನುಷವೆಂಬಂಥ ಸಾಮರ್ಥ್ಯವಿರಬೇಕು. ಬಹುಮಂದಿಗೆ ಇದು ಇರದ ಕಾರಣ ಈ ಕಲೆಯಲ್ಲಿ ಕೈಯಾಡಿಸುವ ಸಾಹಸಿಗಳ ಸಂಖ್ಯೆ ಸಣ್ಣದೇ. ಕನ್ನಡನಾಡಿನಲ್ಲೂ ಬಹು ಪ್ರಾಚೀನ ಕಾಲದಿಂದ ಅವಧಾನಕಲೆ ಇದ್ದಿರಬಹುದಾದರೂ, ನಮ್ಮ ಕಾಲಕ್ಕೆ ನಮ್ಮೆದುರು ಕಾಣುತ್ತಿರುವವರು ಶತಾವಧಾನಿ ಡಾ॥ ಆರ್. ಗಣೇಶ್ ಅವರೊಬ್ಬರೇ. ನೆರೆಯ ತೆಲುಗುದೇಶದಲ್ಲಿ ಈ ಕಲೆಗೊಲಿದವರು ಹತ್ತಾರು ಮಂದಿ ಇದ್ದಾರು. ಈ ಕಲೆ ಜನಸಾಮಾನ್ಯವಾಗಿರುವುದು ಅಲ್ಲಿಯೇ. ಕನ್ನಡನಾಡಿನಲ್ಲೂ ಈ ಕಲೆಗೆ ಹೊಸ ಹುರುಪನ್ನು ತಂದುಕೊಟ್ಟು, ಅದರ ಉಸಿರಾಟಕ್ಕೆ ಉತ್ತೇಜನವಿತ್ತಿರುವವರು ಗಣೇಶ್ ಒಬ್ಬರೇ.

ಅವರು ತಮ್ಮ ಅನುಭವದಿಂದ, ಸಂಶೋಧನೆಯಿಂದ, ಅಧ್ಯಯನದಿಂದ, ಉತ್ಸಾಹದಿಂದ ಸಿದ್ಧಪಡಿಸಿರುವ ಈ ಬೃಹದ್ಗ್ರಂಥ ನಾಡಿನ ಗ್ರಂಥಲೋಕದಲ್ಲಿ ಮೇರುಸದೃಶವಾದುದು, ಕನ್ನಡದ ಸಾರಸ್ವತಸೌಧಕ್ಕೆ ಕಲಶಪ್ರಾಯವಾದುದು. ಅವಧಾನಕಲೆಯನ್ನು ಕುರಿತ ಸಮಗ್ರಚಿತ್ರಣ ಇಲ್ಲಿ ಕಾಣಸಿಗುತ್ತದೆ. ಈ ಕಲೆಯ ಉಗಮ, ಪ್ರಗತಿ, ಸಂವಿಧಾನ, ಸ್ವಾರಸ್ಯ, ಸಂವಿಭಾಗ – ಎಲ್ಲವನ್ನೂ ನಿರೂಪಿಸಿದ್ದಾರೆ, ವಿವರಿಸಿದ್ದಾರೆ. ಈ ವಿಚಾರವಾಗಿ ತಿಳಿಯಹೇಳುವ ಅವರಿಗಿರುವಂತೆ ಅಧಿಕಾರವಾಗಲಿ ಸಾಮರ್ಥ್ಯವಾಗಲಿ ಬೇರೆ ಯಾರಿಗಿದ್ದೀತು? ಅವರನ್ನೆ ಕುರಿತು ಮೊದಲಲ್ಲಿ ನಾಲ್ಕು ಮಾತು ಹೇಳಬೇಕು..

ಅವರನ್ನು ನಾನು ಚೆನ್ನಾಗಿಯೇ ಬಲ್ಲೆ. ಅವರ ವೈದುಷ್ಯ, ಪ್ರತಿಭೆ, ಸಜ್ಜನಿಕೆಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದೇನೆ. ವಯೋಮಾನದಲ್ಲಿ ತರುಣರಾದರೂ ಜ್ಞಾನವೃದ್ಧರು, ಅಪಾರವಾದ ಅನುಭವವುಳ್ಳವರು. ವೇದವೇ, ವೇದಾಂತವೇ, ಧರ್ಮಶಾಸ್ತ್ರವೇ, ಕಾವ್ಯಮೀಮಾಂಸೆಯೇ, ಛಂದಃಶಾಸ್ತ್ರವೇ, ಇತಿಹಾಸವೇ, ಆಧುನಿಕ ವಿದ್ಯೆಯೇ – ಯಾವುದು ಅವರಿಗೆ ಕರತಲಾಮಲಕವಲ್ಲ? ಬಹುಶಾಸ್ತ್ರವೇತ್ತರು, ಬಹುಭಾಷಾಭಿಜ್ಞರು, ಕಲಾಸಕ್ತರು, ಸಾರಸ್ವತಸಿದ್ಧರು. ಸಂಸ್ಕೃತದಲ್ಲಿ ಹದಿನಾರು ಕಾವ್ಯಗಳನ್ನೂ ಹನ್ನೆರಡು ರೂಪಕಗಳನ್ನೂ ರಚಿಸಿದ್ದಾರೆ. ಕನ್ನಡದಲ್ಲಿ ಎಂಟು ಕಾವ್ಯಗಳನ್ನೂ ನಾಲ್ಕು ಕಾದಂಬರಿಗಳನ್ನೂ ಬರೆದಿದ್ದಾರೆ. ಇನ್ನು ಅವರ ಕವಿತೆಗಳೂ ಅನುವಾದಗಳೂ ಪ್ರಬಂಧಗಳೂ ಲೆಕ್ಕಕ್ಕೇ ಸಿಗುವುದಿಲ್ಲ. ಎಳವೆಯಿಂದಲೆ ಸೃಜನಾತ್ಮಕತೆ ತೋರಿಕೊಂಡಿತು. ಆಶುಕವಿತೆ, ಚಮತ್ಕಾರ ರಚನಾಚಾತುರಿ, ನಾನಾ ಬಗೆಯ ಅವಧಾನ ಅವರಿಗೆ ಮೊದಲಿಂದ ಇದ್ದ ಗುಣಗಳೇ.

ನಿಸರ್ಗಸಿದ್ಧವಾಗಿಯೇ ಇದ್ದುದು ಅವರ ಅವಧಾನವಿದ್ಯೆ. ಇದರಲ್ಲಿ ದೈವಾನುಗ್ರಹದ ಪಾತ್ರವೆಷ್ಟೋ, ವ್ಯುತ್ಪತ್ತಿ – ಅಭ್ಯಾಸಗಳ ಪಾತ್ರವೆಷ್ಟೋ, ಪ್ರತಿಭೆಯ ಪಾತ್ರವೆಷ್ಟೋ ನಾನರಿಯೆ. ಎಲ್ಲವೂ ಅಧಿಕಾಧಿಕ ಪ್ರಮಾಣದಲ್ಲಿಯೇ ಇರುವಂತೆ ತೋರುತ್ತದೆ. ಅವಧಾನಕ್ಕಾಗಿಯೇ ಮೆಯ್ವೆತ್ತು ಬಂದವರೋ ಏನೋ. ಇಲ್ಲವಾದರೆ ವಯಸ್ಸು ಇಪ್ಪತ್ತು ಮುಟ್ಟುವ ಮೊದಲೇ ಅವಧಾನಿಯಾದದ್ದು ಹೇಗೆ? ಆ ಕಾಲದಲ್ಲಿ ಅವಧಾನವಿದ್ಯೆಯ ಹೆಸರನ್ನು ಕೇಳಿದ್ದವರೇ ಬಹುಮಂದಿ ಇರಲಿಲ್ಲ; ಅದನ್ನು ನೋಡಿದ್ದವರಂತೂ ಬೆರಳೆಣಿಕೆಗೆ ಆಗುವಷ್ಟು ಮಂದಿ. ಲಂಕಾ ಕೃಷ್ಣಮೂರ್ತಿಯವರು ತೆಲುಗುದೇಶದಿಂದ ಆಗಾಗ ಅವಧಾನಿಗಳನ್ನು ಬರಮಾಡಿಕೊಂಡು ಇಲ್ಲಿ ಪ್ರದರ್ಶನವೇರ್ಪಡಿಸುತ್ತಿದ್ದರು. ಅಂಥ ಒಂದು ಪ್ರದರ್ಶನವನ್ನು ನೋಡಿದ್ದೇ ಗಣೇಶರಿಗೆ ಸಾಕಾಯಿತು. ಈ ಸಂಸ್ಕೃತಾವಧಾನವನ್ನು ನೋಡಿದ ಮರುದಿನವೇ ಕನ್ನಡದಲ್ಲೊಂದು ಅವಧಾನವನ್ನು ಮಿತ್ರಗೋಷ್ಠಿಯಲ್ಲಿ ಮಾಡಿಯೇಬಿಟ್ಟರು! ಇದು 1981ರ ಮಾತು.

ಇದಾದ ಐದಾರು ವರ್ಷಗಳ ಮೇಲೆ ಲಂಕಾ ಕೃಷ್ಣಮೂರ್ತಿಯವರ ಪರಿಚಯವೂ ಆಯಿತು. ಮುಂದೆ ಅವರಿಂದ ಮಾರ್ಗದರ್ಶನವೂ ದೊರೆಯಿತು. ಈ ಪುಸ್ತಕವನ್ನು ಬರೆಯುವ ವೇಳೆಗೆ ಗಣೇಶಾವಧಾನಿಗಳು ಇನ್ನೂರೈವತ್ತು ಅಷ್ಟಾವಧಾನಗಳನ್ನೂ, ಮೂರು ಶತಾವಧಾನಗಳನ್ನೂ ನಡೆಸಿ ಜಯಭೇರಿ ಹೊಡೆದಿದ್ದಾರೆ. ನಾಡಿನಲ್ಲಿ ಅವಧಾನವೆಂದರೆ ಗಣೇಶರೇ, ಗಣೇಶರೆಂದರೆ ಅವಧಾನವೇ – ಎನ್ನುವಂತಾಯಿತು. ಇಡೀ ಕನ್ನಡದೇಶದಲ್ಲಿ ಈಗ ಶತಾವಧಾನಿಯೆಂದರೆ ನಮ್ಮ ಗಣೇಶರೊಬ್ಬರೇ. ಹೀಗಿರುವಾಗ ಅವಧಾನಕಲೆಯನ್ನು ಕುರಿತು ಬರೆಯಲು ಇವರಿಗಿಂತ ಅರ್ಹರಾದವರು ಯಾರು?

ಮೇಲಾಗಿ, ಇವರಿಗೆ ಅವಧಾನ ಬರಿಯ ಜೀವಿಕೆಯೋ ವೃತ್ತಿಯೋ ಅಲ್ಲ. ಅದರಲ್ಲಿ ಅವರಿಗೆ ಬಲು ಪ್ರೀತಿಯಿದೆ. ಪ್ರೀತಿಯಿಂದ ಮಾಡಿದ ಪರಿಶ್ರಮ ತಪಸ್ಸಿನಂತೆ – ಎಂದು ಅವರೇ ಒಂದೆಡೆ ಹೇಳಿದ್ದಾರೆ. ಅವರ ಪಾಲಿಗೆ, ಒಂದೊಂದು ಅವಧಾನಸಂದರ್ಭವೂ ಒಂದು ಯಾಜ್ಞಿಕವಿಧಿಯಂತೆ. ಯಜ್ಞದಲ್ಲಿ ದೇವತೆಗಳನ್ನು ತೃಪ್ತಿಪಡಿಸುವಂತೆ ಅವಧಾನದಲ್ಲಿ ಸಭಾಸದರನ್ನು ತೃಪ್ತಿಪಡಿಸುವ ಉದ್ದೇಶ. ಈ ಹಿನ್ನೆಲೆಯಲ್ಲಿ ಅವರ ಗ್ರಂಥವನ್ನು ಪರಿಶೀಲಿಸಿದಾಗ, ಗ್ರಂಥರಚನೆಯೂ ಒಂದು ಅವಧಾನಕ್ರಿಯೆಯೇ ಎಂಬುದು ಸ್ಪಷ್ಟವಾಗದೆ ಇರದು. ಅದೂ ಒಂದು ತಪಸ್ಸಿನಂತೆಯೇ ಮೈದಳೆದಿದೆ. ಅವರ ಚಿತ್ತವಿಸ್ತಾರರೂಪವಾದ ಈ ಚಮತ್ಕಾರವನ್ನು ವಿಸ್ಮಯವೆಂದೇ ಹೇಳಬಹುದು. ಇಲ್ಲಿ ಅವರ ವಿದ್ವತ್ತು, ಅಭ್ಯಾಸ, ಪ್ರತಿಭೆಗಳೆಲ್ಲದರ ದಿಗ್ದರ್ಶನವಾಗುತ್ತದೆ. ಅವಧಾನ ಹೇಗೆ ಅಭಿಜಾತಕಲೆಯೋ ಅದನ್ನು ಕುರಿತು ಈ ಕೃತಿಯೂ ಹಾಗೆಯೇ ಅಭಿಜಾತರಚನೆಯಾಗಿದೆ.

ಕನ್ನಡದಲ್ಲಿ ಅವಧಾನಕಲೆಯ ಉಗಮ, ವಿಕಾಸಗಳನ್ನು ತಿಳಿಯಹೇಳುವ ಉದ್ದೇಶವಿದ್ದರೂ, ಅವಧಾನಕಲೆಯ ಸರ್ವಾಂಗೀಣ ಪರಿಚಯವನ್ನು ಇಲ್ಲಿ ಪಡೆದುಕೊಳ್ಳಬಹುದು. ಅವಧಾನ ಎಂಬ ಮಾತಿನ ಮೀಮಾಂಸೆಯಿಂದಲೇ ತೊಡಗಿ, ಆ ವಿದ್ಯೆಯ ಹಿನ್ನೆಲೆ ಮತ್ತು ಹುಟ್ಟುಗಳನ್ನು ನಾಡಿನ ಸಂಸ್ಕೃತಿಯ ಚೌಕಟ್ಟಿನಲ್ಲಿ ನಿರೂಪಿಸಿದ್ದಾರೆ. ಅವಧಾನದಲ್ಲಿ ಪ್ರಮುಖ ವಿವರವಾದ ಧಾರಣೆ, ಮತ್ತು ಧಾರಣೆಗೂ ಸ್ಮೃತಿಗೂ ಇರುವ ನಂಟು – ಇವುಗಳ ಕೂಲಂಕಷ ವಿಮರ್ಶೆಯಿದೆ. ಇಲ್ಲಿ ಅವರ ಬಹುಶಾಸ್ತ್ರಾಭ್ಯಾಸದ ಫಲ ಎದ್ದು ಕಾಣುತ್ತದೆ; ಆಧುನಿಕ ಸಂಶೋಧನೆಗಳ ನೆರವನ್ನೂ ಧಾರಾಳವಾಗಿ ಬಳಸಿಕೊಂಡಿದ್ದಾರೆ. ಅವಧಾನದ ಅಂಗಗಳು, ಪ್ರಕಾರಗಳು, ಆಯೋಜನೆ, ಪ್ರಯೋಜನ – ಇವನ್ನೆಲ್ಲ ಸೋದಾಹರಣವಾಗಿ ಎಂಟು ಅಧ್ಯಾಯಗಳಲ್ಲಿ ವಿಸ್ತಾರವಾಗಿ ಪರಾಮರ್ಶೆ ಮಾಡಿದ್ದಾರೆ.

ಅಷ್ಟಾವಧಾನದಲ್ಲಿ ಸಾಮಾನ್ಯವಾಗಿರುವ ನಿಷೇಧಾಕ್ಷರಿ, ಸಮಸ್ಯಾಪೂರಣ, ದತ್ತಪದಿ, ನ್ಯಸ್ತಾಕ್ಷರಿ, ಕಾವ್ಯವಾಚನ, ಆಶುಕವಿತೆ, ಅಪ್ರಸ್ತುತ ಪ್ರಸಂಗ, ಘಂಟಾಗಣನ – ಇವುಗಳ ಜೊತೆಗೆ ಅವರೇ ಸೇರಿಸಿ ಬಳಸಿಕೊಂಡಿರುವ ಚಿತ್ರಕವಿತೆ, ಪದ್ಯಾಭಿನಯ, ಸಂಖ್ಯಾಬಂಧ, ವ್ಯಸ್ತಾಕ್ಷರಿ, ಅನ್ಯೋಕ್ತಿ, ವರ್ಣನೆ ಮೊದಲಾದ ಅಂಗಗಳ ವಿವರಣೆಯೂ ಬಂದಿರುವುದು

ಸ್ವಾರಸ್ಯವಾಗಿದೆ. ಕವಿತ್ವಪ್ರಧಾನವಾಗಿ, ರಸವತ್ತಾಗಿ ಅನವದ್ಯವಾಗಿ ಮೂಡಿಬಂದ ಅಷ್ಟಾವಧಾನ ಅಕ್ಲಿಷ್ಟಕರ್ಮವಾಗಿಯೂ ಇದ್ದಾಗ ಬೆರಗು ಮಾತ್ರ ಬಾರದೆ ರಸಭಾವಕಲಾಚಮತ್ಕಾರವೆಂಬ ಆನಂದವೂ ಸಹೃದಯರ ಪಾಲಿಗೆ ಒದಗಿಬರುವುದನ್ನು ಒತ್ತಿ ಹೇಳಿದ್ದಾರೆ. ಶತಾವಧಾನದಲ್ಲಿ ಕಾಣುವ ವಿಸ್ತಾರ, ಶಾಸ್ತ್ರ–ಗಣಿತ–ಚರ್ಚಾ–ಗೀತರೂಪ, ಪೃಚ್ಛಕರ ಸಂದಣಿ, ಅವಧಾನಿಗಿರಬೇಕಾದ ಧಾರಾ–ಧಾರಣ–ಸ್ಥೈರ್ಯದೊಂದಿಗೆ ಹಾಸ್ಯಪ್ರಜ್ಞೆಯ, ಸಮಯಸ್ಫೂರ್ತಿಯ, ಸರಸಸಂಭಾಷಣೆಯ ಅಗತ್ಯ – ಇವನ್ನೂ ವಿವರಿಸಿದ್ದಾರೆ. ಸಹಸ್ರಾವಧಾನದ ವಿಚಾರವನ್ನೂ ಎತ್ತಿಕೊಂಡು ಚರ್ಚಿಸಿದ್ದಾರೆ.

ಹೀಗೆ ವಿಚಾರ ಮಾಡುವಾಗ ತಮ್ಮ ಅವಧಾನದ ವಿವರಗಳನ್ನೇ, ಅನುಭವಗಳನ್ನೇ ನಿದರ್ಶನವಾಗಿ ಕೊಟ್ಟಿರುವುದು ನಿರೂಪಣೆಯ ಮೌಲ್ಯವನ್ನು ಹೆಚ್ಚಿಸುತ್ತದೆ. ಅವರು ತಾವೇ ಅಷ್ಟಾವಧಾನಗಳನ್ನೂ ದಶಾವಧಾನ–ಷೋಡಶಾವಧಾನಗಳನ್ನೂ ನಾಡಿನ ಹಲವಾರೆಡೆ ಮಾಡಿದ್ದಾರಷ್ಟೆ? ನಾಡಿನ ಏಕೈಕ ಶತಾವಧಾನಿಯೂ ಅವರೇ. ಅವರ ವೈಶಿಷ್ಟ್ಯಗಳೆಂದರೆ ಆಶ್ವಾಶುಧಾರೆ, ಪ್ರೌಢಪದ್ಯರಚನೆ ಮತ್ತು ಬಹುಶಾಸ್ತ್ರವ್ಯವಹಾರ–ಪರಾಮರ್ಶೆ. ಸಂಸ್ಕೃತ, ತೆಲುಗು, ಕನ್ನಡಗಳಲ್ಲಿ ಸಮನಾಗಿಯೇ ಅವಧಾನ ಮಾಡಿರುವುದಲ್ಲದೆ, 'ಅಷ್ಟಭಾಷಾಷ್ಟಾವಧಾನಿ'ಯೂ ಆಗಿದ್ದಾರೆ. ಈ ಅನುಭವದ ಸೊಗಡು ಅವರ ಬರಹದಲ್ಲಿ ಮೂಡಿಬಂದಿದೆ; ಬರಹವನ್ನು ಅನನ್ಯವಾಗಿಸಿದೆ.

ಈ ಗ್ರಂಥದಲ್ಲಿ ಬಂದಿರುವ ಒಂದೊಂದು ವಿಚಾರವೂ ನಮಗೆ ಹೊಸತೇ. ಕನ್ನಡದಲ್ಲಿ ಅವಧಾನಕಲೆಗೆ ಒಂದು ಸಾವಿರ ವರ್ಷಗಳಷ್ಟು ಪ್ರಾಚೀನತೆಯಿದ್ದಿತೆಂಬುದು, ಅದರ ಬೆಳವಣಿಗೆಯನ್ನು ಹಂತಹಂತವಾಗಿ ನಿರ್ದೇಶಿಸಿರುವುದು, "ಅವಧಾನದ ತೊಟ್ಟಿಲಾಗದಿದ್ದರೂ ಪಟ್ಟದ ಪಲ್ಲಕ್ಕಿ"ಯಾದ ತೆಲುಗುಸೀಮೆಯಲ್ಲಿ 1300ರ ಸುಮಾರಿಗೆ ಪೆದ್ದಯಾಮಾತ್ಯನಿಂದ ಅದು ಪ್ರವೃತ್ತವಾದುದು, ಹದಿನೆಂಟನೆಯ ಶತಮಾನದಲ್ಲಿ ಕನ್ನಡನಾಡಿನಲ್ಲೂ ತೆಲುಗುಸೀಮೆಯಲ್ಲೂ ಅದರ ಜೀರ್ಣೋದ್ಧಾರವಾದುದು, ಹತ್ತೊಂಬತ್ತನೆಯ ಶತಮಾನದ ಕೊನೆಗೆ ಅದು ಎರಡೂ ಕಡೆ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡುದು – ಮೊದಲಾದ ವಿವರಗಳು ಬಲು ಸ್ವಾರಸ್ಯವಾದವು. ಕನ್ನಡನಾಡಿನಲ್ಲಿ ಬೆಳ್ಳಾವೆ ನರಹರಿಶಾಸ್ತ್ರಿಗಳು (ಮರಣ 1961) 1921ರಷ್ಟು ಹಿಂದೆಯೇ ಅವಧಾನವನ್ನು ನಡೆಸಿದ್ದರಂತೆ. ಅವರಿಗೆ ಪ್ರೇರಣೆ ಒದಗಿದ್ದು ಮೈಸೂರಿಗೆ 1920ರ ಸುಮಾರಿಗೆ ಬಂದ ತೆಲುಗುಸೀಮೆಯ ಪಿಸುಪಾಟಿ ಚಿದಂಬರಶಾಸ್ತ್ರಿಗಳ ಸಂಸ್ಕೃತಾವಧಾನದಿಂದ.

ಈ ಕಡೆ ಅವಧಾನವನ್ನು ಬಳಕೆಗೆ ತಂದ ಯಶಸ್ಸು ದಿವಂಗತ ಲಂಕಾ ಕೃಷ್ಣಮೂರ್ತಿಗಳಿಗೆ ಸಲ್ಲಬೇಕು. ಕನ್ನಡಾವಧಾನವನ್ನು ಜೋಸ್ಯಂ ಸದಾನಂದಶಾಸ್ತ್ರಿಗಳಿಂದ ಮಾಡಿಸಿದವರು ಅವರೇ (1982ರಲ್ಲಿ) – ಎಂಬುದು ನಮ್ಮಲ್ಲಿ ಬಹುಜನರಿಗೆ ತಿಳಿಯದು. ಜೋಸ್ಯಂ ಅವರು ಹೊರನಾಡು ಕನ್ನಡಿಗರು ಎಂಬುದೂ ನಮಗೆ ತಿಳಿದಿರಲಿಲ್ಲ! ಇವರ ಅವಧಾನವನ್ನು ಗಣೇಶಾವಧಾನಿಗಳೂ ನೋಡಿದ್ದರಂತೆ. ಈ ವಿವರಗಳನ್ನೆಲ್ಲ ಈ ಗ್ರಂಥದಲ್ಲಿ ಕಾಣಬಹುದು. ಗ್ರಂಥಕಾರರ ನಿರೂಪಣಾಶೈಲಿಯೂ ಮೋಹಕವಾದುದು; ಲಲಿತವಾದ, ಉಜ್ಜ್ವಲವಾದ ಭಾಷೆ; ಸಮಯೋಚಿತವಾದ ದೃಷ್ಟಾಂತಗಳು; ಸಮರ್ಪಕವಾದ ವಿವರಣೆಗಳು; ತುಂಬ ಉಪಯುಕ್ತವಾದ ಟಿಪ್ಪಣಿಗಳು. ಇನ್ನು ಗ್ರಂಥದ ಸ್ವರೂಪಕ್ಕೆ ಕಳೆಕಟ್ಟುವಂತೆ ಅನುಬಂಧ, ಆಧಾರಸಾಹಿತ್ಯಸೂಚಿ, ಪದ್ಯಗಳ ಅಕಾರಾದಿಸೂಚಿ – ಇತ್ಯಾದಿ ಪರಿಕರಗಳು.

ಗ್ರಂಥದ ಮುಖ್ಯಭಾಗವೆಂದರೆ ಅವಧಾನಿಗೂ ಸಭಾಸದರಿಗೂ ಅವಧಾನ ಕಲೆಯ ಪ್ರಯೋಜನಗಳನ್ನು ತಿಳಿಯಹೇಳುವ ಭಾಗ. ಅವಧಾನದಿಂದ ರಂಜನೆ (ಅಥವಾ ಆನಂದ) ಮೊಟ್ಟಮೊದಲನೆಯ ಲಾಭವಾದರೂ, ಅದರಲ್ಲಿ ಬೋಧಾಂಶವಿಲ್ಲದೆ ಇಲ್ಲ. ವ್ಯುತ್ಪತ್ತಿ–ಸಂಸ್ಕಾರಗಳು ಅಗತ್ಯವಾಗಿ, ಧಾರಾಳವಾಗಿ ಒದಗುತ್ತವೆ. ಕಾವ್ಯಾಸಕ್ತರಿಗೆ ಮಾರ್ಗ ಮತ್ತು ದೇಸೀ ಎರಡೂ ಪ್ರಕಾರಗಳಲ್ಲಿ ಸಲ್ಲಕ್ಷಣಯುಕ್ತ ರಚನಾಪದ್ಧತಿಯ ಅರಿವುಂಟಾಗುತ್ತದೆ. ಅದನ್ನು ಕಾಪಿಟ್ಟುಕೊಂಡುಬರುವ ಉತ್ಸಾಹವೂ ಒದಗಿಬರುತ್ತದೆ. ಸಮಸ್ಯೆಯನ್ನು ಪರಿಹಾರಮಾಡುವ ಬಗೆಯೂ ತಿಳಿದಂತಾಗುತ್ತದೆ.

ಭಾಷೆಯಲ್ಲಿ ಮಾತ್ರವಲ್ಲದೆ ಬದುಕಿನಲ್ಲಿಯೂ ಸಮಸ್ಯೆಗಳು ಎದ್ದುಕೊಂಡಾಗ ಅವನ್ನು ತೀರಿಸಿಕೊಳ್ಳುವ ಹದನ ಧ್ವನಿಯಂತೆ ಕಂಡುಕೊಳ್ಳುವ ಸಾಧ್ಯತೆಯಿದೆ. ಹಾಗೆಯೇ ಏನಾದರೊಂದು ಬಿಕ್ಕಟ್ಟಿನ ಪರಿಸ್ಥಿತಿ ಎದುರಾದರೆ ಅದನ್ನು ನಿರ್ವಹಿಸುವ ಧೈರ್ಯ, ರೀತಿ, ಉಪಾಯಗಳು ಮನದಟ್ಟಾಗುವುದೂ ಸಾಧ್ಯ. ಅವಧಾನಿಯು ಸಭೆಯಲ್ಲಿ ತನ್ನನ್ನು ಪರೀಕ್ಷೆಗೆ ಒಡ್ಡುವ ಹಲವು ವಿವರಗಳಿಗೆ ತಾಳ್ಮೆ ಕಳೆದುಕೊಳ್ಳದೆ ಸೂಕ್ತವಾದ ಸಮಾಧಾನಗಳನ್ನು ಕೊಡುವುದನ್ನು ನೋಡಿದಾಗ ಯಾರಿಗಾದರೂ ಮಾರ್ಗದರ್ಶನವಾದೀತಲ್ಲವೆ? ಸಮುದಾಯ ಜೀವನದಲ್ಲೂ ಕುಟುಂಬನಿರ್ವಹಣೆಯಲ್ಲೂ ಇದೇ ಬಗೆಯ ಸನ್ನಿವೇಶಗಳು ಬರುವುದಿಲ್ಲವೆ? ನಮ್ಮ ಸ್ಥೈರ್ಯ, ಧೈರ್ಯ, ಚಾತುರ್ಯ, ಔಚಿತ್ಯಜ್ಞಾನ – ಇವೆಲ್ಲ ಕುದುರಬೇಡವೆ? ಲೋಕಜೀವನದಲ್ಲಿ ವಿವೇಕ ಬರುವುದು ಇನ್ನು ಹೇಗೆ? 'ಬಲ್ಲವರಿಂದ ಕಲ್ತು' ಅಲ್ಲವೆ?

ಈ ಗ್ರಂಥದಲ್ಲಿ ಇನ್ನೂ ಒಂದು ಮುಖ್ಯವಾದ ವಿಚಾರವಿದೆ – ಅವಧಾನದಲ್ಲಿ ಎರಡು ಕ್ರಿಯೆಗಳು ನಡೆಯುತ್ತವೆ ಎಂಬುದು: ಅಂತರಂಗದಲ್ಲಿ ನಡೆಯುವ ಕೆಲಸ, ಮತ್ತು ಬಹಿರಂಗವಾಗಿ ನಡೆಯುವ ಕೆಲಸ. ಮೊದಲನೆಯದು ಅವಧಾನಿಗೆ ಮಾತ್ರ ತಿಳಿಯುವುದು, ಎರಡನೆಯದನ್ನು ನೆರೆದವರೆಲ್ಲ ಕಾಣಬಹುದು. ಇವೆರಡರಲ್ಲಿ ಮೊದಲನೆಯದೇ ಪ್ರಧಾನವಾದದ್ದು. ಧಾರಣ–ಪೂರಣಗಳು ನಡೆಯುವುದು ದಿಟವಾಗಿ ಅಂತರಂಗದಲ್ಲೇ. ಸಾರಸ್ವತಸಮಾಧಿಯೆಂಬುದು ಅಲ್ಲಿಯದೇ. ಅವಧಾನವನ್ನು ಬರಿಯ ಪ್ರದರ್ಶನ ಎನ್ನವುದು ಸರಿಯಲ್ಲ; ಮೊದಲೇ ಸಿದ್ಧಪಡಿಸಿಕೊಂಡದ್ದು ಹೊರಗೆ ಬರುತ್ತದೆ ಎನ್ನುವುದೂ ತಪ್ಪು. ಅವಧಾನದ ವಿಶಿಷ್ಟಗುಣವೇ ಆಗಿಂದಾಗಲೇ ಬುಗ್ಗೆಯಂತೆ ಚಿಮ್ಮಿರುವುದು. ನೂರಕ್ಕೆ ನೂರುಪಾಲು ಸೃಜನಾತ್ಮಕವಾಗಿರುವಾಗಲೇ ಅವಧಾನದ ಸ್ವಾರಸ್ಯ. ಕೃತಿಸಮಾಧಿ–ಸ್ಮೃತಿಸಮಾಧಿಗಳಲ್ಲಿ ಪ್ರತಿಭೆ ತನ್ಮಯವಾಗಿರುವುದು ಅವಧಾನದ ತಾತ್ಪರ್ಯ.

ಇಂಥ ಸೊಗಸಾದ, ಅಚ್ಚುಕಟ್ಟಾದ, ಸಮಗ್ರಸುಂದರವಾದ, ವಿಚಾರಪರಿಪೂರ್ಣವಾದ ಗ್ರಂಥಕ್ಕೆ 'ಡಿ.ಲಿಟ್' ಪ್ರಶಸ್ತಿಯನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕೊಟ್ಟಿರುವುದು ಗ್ರಂಥದ ಮೌಲ್ಯವನ್ನೇನೂ ಹೆಚ್ಚಿಸುವುದಿಲ್ಲ; ವಿಶ್ವವಿದ್ಯಾಲಯದ ಮರ್ಯಾದೆಯನ್ನೇ ಹೆಚ್ಚಿಸುತ್ತದೆ. ಅದರ ವಿವೇಕವನ್ನು ಸೂಚಿಸುತ್ತದೆ. ಪುತ್ತೂರಿನ ಕರ್ನಾಟಕ ಸಂಘದವರು ಇದನ್ನು ಪ್ರಕಟಿಸಲೊಪ್ಪಿ, ಕನ್ನಡದ ಜನತೆಗೆ ಮಹೋಪಕಾರ ಮಾಡಿದ್ದಾರೆ. ಈ ಪ್ರಕಟಣೆಗೆ ಉದಾರವಾಗಿ ಆರ್ಥಿಕ ನೆರವನ್ನು ನೀಡಿರುವ ಡಾ॥ ಬಡೆಕ್ಕಿಲ ಶಿವರಾಮಭಟ್ಟರ ಕುಟುಂಬದವರಿಗೂ ಇತರ ಸಜ್ಜನರಿಗೂ ಧನ್ಯವಾದ ಸಲ್ಲಬೇಕು.

ಬರಿಯ ಸ್ತುತಿಪಾಠವೇ ಆಯಿತಲ್ಲ, ವಿಮರ್ಶೆಯೆಂದರೆ ಇಷ್ಟೇನೆ? – ಎಂದು ಯಾರಾದರೂ ಕೇಳಿದರೆ, ನನ್ನ ಸಮಾಧಾನವಿಷ್ಟೆ: ಇದನ್ನು ವಿಮರ್ಶೆಯೆಂದವರು ಯಾರು? ನಾನು ತುಂಬ ಮೆಚ್ಚಿಕೊಂಡ ಒಂದು ಪುಸ್ತಕದ ಪರಿಚಯವನ್ನು ಮಾಡಿಕೊಡುವುದಷ್ಟೆ ನನ್ನ ಉದ್ದೇಶ. ವಿಮರ್ಶೆ ಮಾಡಲು ನಾನೇನು ಅವಧಾನಿಯೆ? ಪೃಚ್ಛಕನೆ? ಅವಧಾನಗಳನ್ನೆಲ್ಲ ತಳಮೇಲಾಗಿ ನೋಡಿದವನೆ? ವಿಷಯದಲ್ಲಿ ಆಚೆಯ ದಡವನ್ನು ಮುಟ್ಟಿದವನೆ? ವಿಮರ್ಶೆ ಮಾಡುವ ಅಧಿಕಾರವಿಲ್ಲದವರು ಮಾಡುವ ವಿಮರ್ಶೆಗೆ ಬೆಲೆಯಿದೆಯೆ? ಆದರೆ ಇಂಥದೊಂದು ಪುಸ್ತಕವನ್ನು ಆಸಕ್ತರಿಗೆ ಪರಿಚಯ ಮಾಡಿಕೊಡುವ ಅಗತ್ಯವಿದೆ. ಅವಧಾನಕಲೆ ಭಾರತೀಯ ಸಂಸ್ಕೃತಿಯ ವಿಶಿಷ್ಟ ಕೊಡುಗೆ. ಇದರಲ್ಲಿ ಸಾಹಿತ್ಯ, ಸಂಗೀತ, ಕಾವ್ಯ, ನರ್ತನ, ಅಭಿನಯ, ಅಲಂಕಾರ, ವ್ಯಾಕರಣ, ಛಂದಸ್ಸು, ವೇದಾಂತ – ಎಲ್ಲವೂ ಕೂಡಿಕೊಳ್ಳುತ್ತವೆ. ಕಾರಣಾಂತರದಿಂದ ಇದು ನಮ್ಮ ಗಮನದಿಂದ ಹಿಂದೆ ಸರಿದಿರುವ ಕಲಾಪ್ರಕಾರವಾಗಿದೆ. ಮತ್ತೆ ಅದರ ಸ್ಥಾನಮಾನಗಳನ್ನು ಗಳಿಸಿಕೊಡಲು ಇದೊಂದು ಉದ್ಗ್ರಂಥ ತುಂಬ ನೆರವಾಗುತ್ತದೆ. ಇದು ಆಗಬೇಕಾಗಿರುವ ಕೆಲಸವಷ್ಟೆ? ಕನ್ನಡದಲ್ಲಂತೂ ಈ ಕಲಾಪ್ರಕಾರವನ್ನು ಕುರಿತಂತೆ ಬರಹಗಳೇ ಇರಲಿಲ್ಲ. ಈ ಕೊರತೆಯನ್ನು ನೀಗಿಸಿ ಶತಾವಧಾನಿ ಗಣೇಶರು ಕೃತಾರ್ಥರಾಗಿದ್ದಾರೆ. (ಉತ್ಥಾನ, ನವೆಂಬರ್ 1998).

Shree Ganesh as an Avadhani

- **Shree Sudheer Krishnaswamy Kesari**

Expert on Literature - Fine Arts and software entrepreneur

Shatavadhani R Ganesh is like a polished diamond with many talents as its coruscating faces. Here, I will write about him as an Avadhani.

There have been many illustrations of Avadhanis in India from times immemorial. In all languages, and in all corners of India, have flourished many greats. I have heard about some, read about others and have seen in action many of the present generation. One thing can be said without hesitation, Ganesh is an all-time great as an Avadhani. He may be, arguably, the greatest. Certainly, he is unique.

To be considered great, like in sports and other fields and art, we have to look at numbers, quality, class, consistency and impact.

Numbers is an easy one. Verifiable, not subjective and easy to comprehend. In this, Ganesh is closing in on 1000 Avadhanas. No mean feat, this suggesting a Tendulkar-like longevity in terms of career-length and scores. Enough said.

The impact he has had on the field of Avadhana, especially in Karnataka is too well-known to be reiterated. Let me just point at the accomplishment by recalling that he has been instrumental in reviving the dying art in Kannada by giving it CPR and rejuvenating it by his breath as if by mouth-to-mouth resuscitation. He has made it popular along the length and breadth of Karnataka and to many, Avadhana has been introduced into their lives by him. Today in Karnataka, Avadhana means Ganesh, which is a bit sad, since we want (and Ganesh himself has said this often) more and more Avadhanis. Ganesh himself has encouraged a few to perform Avadhanas. He has shared his methods and tricks with them freely and has waxed them to perform. Yet, in a way, we cannot fully judge Ganesh's Avadhana skills for lack of comparison. It is a sad case of "नखाना पाण्डित्य कस्मिन् प्रकटयतु मृगपति:". This also applies to the paucity of appreciative audience who can fully comprehend the beauty, spontaneity, and the class of his finished product. Anyway, he has to live and perform in the environment into which he is born and lives. So, let us see him within that.

Now let me write about what qualities I admire about Ganesh, the Avadhani (I have had the privilege and abundant pleasure of sharing few Avadhana platforms with him and seen him at close range). The first is "dhairyaM"! He himself has said that the three

essential qualities that an Avadhani should have are dhArA, dhAraNa and dhairya. I might add (tongue in cheek) that on the days when the dhAra is not particularly smooth and there is a feeling that अद्य धारा निराधारा, it is the dhairya that takes things forward and converts the statement to अद्य धारा सदाधारा. Ganesh personifies confidence in my eyes. I have seen him take huge risks and plunge recklessly head-first into a seeming abyss confident that he will come up with some gem. He not only survives but prevails. This I have seen time and again. Why I find this fascinating particularly is because his thoughts and ideas are intuitively structured. It is not so difficult to be structured in thought and presentation when you have a prepared item. Many people excel at this. But to do this on the fly is amazing. I have seen Ganesh do it on stage in Avadhanas. The first line of the solution has to be given immediately and Ganesh sometimes shoots off his mouth, so to speak, only for us to find at the end that it all fits in logically and comprehensively – न सामर्थ्यमपोहित क्वचित्. I see a magician pulling out yet another rabbit out of his overflowingly feathered cap – if I may be allowed to mix metaphors.

The second aspect I admire about his Avadhanas is that each of his AvadhAnas is stamped with his personality. To know Ganesh the Avadhani is, to a large extent, to know the man. He does not hide behind the curtains of political correctness, hypocrisy and safety of support to popular causes and ideas. He calls it as he sees it. People are always sure of his stance. It is abundantly clear both in his Avadhana poetry, his vyAkhyAna, and in his answers to aprastutaprasaMgin. But in all this, his honesty stands out as does his catholicity of ideas. He is traditional but never conservative. As open and modern as anyone else, he sometimes shocks and surprises people on both sides of the cultural divide. He represents himself always and is never a stooge for anyone or any party or agenda. Very refreshingly independent and original.

Thirdly, I want to talk about his inclination. It is in a word, classical. Fiercely wedded to classicism, he blends beautifully novelty with tradition and classic form and methods. If you want to see "ಹಳೆ ಬೇರು, ಹೊಸ ಚಿಗುರು", you don't have to look further than Ganesh. Classic form, traditional garb, novel and modern political ideas, while retaining the classical structure, he searches for new ways for expressing ideas and emotions. He refuses to let go of the foundations of the classical poetic forms – grammar, Chandas, alaMkAra and conventions like dvitIyAkSharaprAsa but constantly creates new rUpakas, phrases, upamAs and imagery. He is equally enthusiastic about creating poetry about time-tested topics which easily lend themselves to classical alaMkAra and rasa (like moonlit night, the spring season, romance, salutation to gods, etc) and also not so traditional topics like, let us say, a ceramic wash-basin, a godrej almirah, or machining of the parts by a lathe, etc. He quotes often a Telugu poet and says that anything can be the subject of poetry - a puppy or a piece of soap, etc. To compose poetry about such things too, one has to be a poet at heart

and Ganesh is certainly that. The sense of sound and rhythm and his sense for alliteration often suggest the next word for him. While this is a huge advantage in producing dhArA, it is only possible for a poet who feels that he has a lot of space remaining for him to express his idea clearly and fully. To me, an avid cricket fan, he often reminds me of a cricketer who has plenty of time to play each ball and also a batsman who knows that he can pace his innings to finish his match within time.

Now I want to talk about some of his skills, talents and accomplishments that make him a unique Avadhani and make his Avadhanas special and why Avadhana-rasikas find his performances a veritable treat. The first obvious plus-point for him is his facility with many languages. He can speak many fluently and compose poetry in them. He is well-read and is familiar with literature in all of the languages, so much so that he can quote from the well-known and the not-so-well-known at the drop of a hat. His knowledge about Indian classical music and Indian film music is another tremendous asset. He is well-versed in music to the extent that he has composed many kRutis himself. It is a hallmark of his Avadhanas that in the kAvyavAcana aspect, when he has to identify the padya and comment on it, he immediately composes his reply in the same Chandas as that of the padya in question and in the same raga in which the pRucChaka sang it. He does a reasonably competent job in rendering his reply in that raga. Many Avadhanis have a very limited repertoire of ragas and stick to mOhana and to a couple of other familiar ragas but I have heard Ganesh respond in all the ragas the pRucChakas have thrown at him.

Next, his deep interest, knowledge and love for Indian culture and its many aspects make him unique. His knowledge of history, philosophy, poetics, sculpture, iconography, AgamashAstras, dharmashAstras, nATyashAstras – to name a few – add a totally different dimension to his Avadhana. When he easily and seamlessly brings all these aspects into his replies naturally without trying to show off or include it consciously, the sheer enormity of breadth and depth of his interest and knowledge about Indian culture is at once exhilarating and awe-inspiring. These lift his Avadhanas many a time from the mundane to the sublime, from dry to divine. He has an engineering degree and so he is very comfortable with science and technology – a fact that is very evident in many of his solution to samasyA. The holistic way in which he brings everything together without conflict is surely a unique aspect of his Avadhanas.

The last aspect of what makes his performances special is the level of difficulty, variety and complexity he invites in the format and questions. He does not limit the pRucChhakas to use a few well-known metres – in fact, some have asked him to compose in metres they have invented (sometimes by mistake). He poses no restriction on which kAvyas the kAvyavAcana pRucChhaka chooses his padya from. Sometimes, people have chosen from

such obscure poets and works that they were unable to verify the facts that Ganesh immediately furnished.

He is probably the first and certainly one of the very few to make citrakAvya a standard fare at his Avadhanas. It is so difficult to create one even with all paraphernalia and ample time without disturbance even at home that to do it on the Avadhana stage beggars belief. He can provide the answer in many languages like Kannada, Sanskrit, Telugu, Tamil, Hindi – to name a few and often leaves the choice to the pRucChhaka. He does all these inspite of knowing that that may lead to an Avadhana where many people may not be able to fully comprehend or enjoy the performance. His commitment to providing a high-class performance and his confidence that his explanations and vyAkhyAna can make it reach the audience are praise-worthy. One can only wonder what levels his performance would have reached with more erudite pRucChhakas and more knowledgeable rasikas as audience. But perhaps, such is the fate of an art like Avadhana and we must count ourselves as lucky that we have seen Ganesh's performances. But for him, it would have been difficult to even imagine that something like this could be done. He evokes in his audience often a feeling that I can only say "Still they gazed and still they wondered that one small head could carry all that he knew".

There are many more special aspects that I will only mention – his extraordinary memory, poise and equanimity in handling all situations, a smiling face which makes it all look easy, a sense of humor that does not sting anyone, his deep understanding of the format of Avadhana and entertaining the audience, etc.

It has been a privilege watching him perform and even now, knowing what he can do, am stuck with awe and wonder many times in Avadhanas and I look at other pRucChhakas and we shake our heads in puzzlement at how he does it and nod our heads in appreciation and bow our heads with respect.

I have written this article to draw the attention of the audience to the aspects that they might otherwise miss out. If those who read this notice things better and appreciate the subtelities more in his next performance, my purpose would have been served.

I have had the great fortune of having been counted among his friends and so it is difficult for me to look at him only as an Avadhani. To me he is certainly much much more than that. But to retain focus in this article, I have done that.

I can conclude that, as an Avadhani, Ganesh has excelled at all aspects of the art – सर्वं श्रेष्ठवधानिराजितिलकेनाकारि लोकाधिकम् ।।

ಅಲಂಕಾರಶಾಸ್ತ್ರಕ್ಕೆ ಗಣೇಶರ ಕೊಡುಗೆ

– ಡಾ॥ ಮಹೇಶ ಅಡಕೋಳಿ
ಅಲಂಕಾರಶಾಸ್ತ್ರ ವಿದ್ವಾಂಸರು
ಪ್ರಿನ್ಸಿಪಾಲರು, ಡಾ॥ ಎ.ವಿ. ಬಾಳಿಗ ಕಲೆ ಮತ್ತು ವಿಜ್ಞಾನ ಕಾಲೇಜು, ಕುಮುಟ.

ಅಧ್ಯಯನ, ಚಿಂತನ, ಲೇಖನ, ಅವಧಾನ, ಪ್ರವಚನ, ಅಧ್ಯಾಪನ ಮುಂತಾಗಿ ನಕಾರಗಳಿಂದಲೇ ಸಕಲ ಸಕಾರಗಳನ್ನು ಸಾಧಿಸಿದ ಅವಧಾನೀ ಶ್ರೀ ಗಣೇಶರು ಒಂದೆಡೆ 'ಭವನಿಮಜ್ಜನಚಾತುರೀ'ಯನ್ನೂ ಇನ್ನೊಂದೆಡೆ 'ಲಘಿಮಾಕೌಶಲ' (ಇವೆರಡೂ ಪದಗಳು ಪುತಿನ ಅವರವು)ವನ್ನೂ ಸಾಧಿಸಿಕೊಂಡವರು. ಅವರ ಆಸಕ್ತಿಯ ಕ್ಷೇತ್ರಗಳು ಹಲವು. (ನೋಡಿ: ಕಲಾಕೌತುಕಕ್ಕೆ ಡಾ॥ ಎಸ್. ಎಲ್. ಭೈರಪ್ಪನವರ ಮುನ್ನುಡಿ). ಆದರೆ ಎಲ್ಲವುಗಳ ಪ್ರಭವಸ್ಥಾನ ನಾನಂದುಕೊಂಡಂತೆ (ಈ ಲೇಖನವೆಲ್ಲ ನಾನಂದುಕೊಂಡಂತೆಯೇ!) ರಸಧ್ವನಿಸಿದ್ಧಾಂತ ಹಾಗೂ ಅದ್ವೈತದರ್ಶನಗಳು ಮೇಳೈಸಿದ ಅಂತಃಕರಣ. ಭೈರಪ್ಪನವರೆಂದಂತೆ ಗಣೇಶರದು ರಸಪೂರ್ಣವಿದ್ವತ್ತು. ಆದರೆ ಅವರದು ವಿದ್ವತ್ಪೂರ್ಣರಸಿಕತೆ ಎಂದರೇ ಸಮಂಜಸವಾದೀತೇನೋ.

ಸರಿ. ಬದುಕಿನ ನಿಲುವನ್ನು ಉದಾತ್ತವೂ ಸೂಕ್ಷ್ಮವೂ ಆಗಿಸುವಂಥ ಸುಮಾರು ಎರಡು ಸಾವಿರ ವರ್ಷಗಳುದ್ದಕ್ಕೂ ಬೆಳಕನ್ನು ಸಂಚಯಿಸಿಕೊಂಡ ಅಲಂಕಾರದರ್ಶನಕ್ಕೆ ಉತ್ತರಕಾಲೀನ ವ್ಯಕ್ತಿಯೊಬ್ಬರ ಕೊಡುಗೆ ಎಂಥದಾಗಿರಲು ಸಾಧ್ಯ? ಆ ದರ್ಶನದ ಸಿದ್ಧಾಂತಗಳ ಮೂಲಕ ಕಲೆಯನ್ನೂ ಜಗತ್ತನ್ನೂ ಪರಿಭಾವಿಸುವಂಥ ವಿಶಿಷ್ಟ ಒಳನೋಟವೊಂದು ಖಚಿತವಾಗಿ ವ್ಯಕ್ತಿಯಲ್ಲಿ ರೂಪುಗೊಳ್ಳಬಲ್ಲದು. ಹಾಗೆ ರೂಪಿತವಾದ ಒಳನೋಟದ ಮೂಲಕ ಆ ದರ್ಶನದ ಸಿದ್ಧಾಂತಗಳನ್ನು ತಮ್ಮದೇ ಆಯಾಮದಲ್ಲಿ ವಿಶ್ಲೇಷಿಸುತ್ತ ಗಣೇಶರಂಥವರು ತಮ್ಮ ಸಂಪರ್ಕಕ್ಕೆ ಬಂದ ಸುತ್ತಲಿನ ಆಸಕ್ತರ ಅಭಿರುಚಿಗೆ ಸಾಣೆ ಹಿಡಿದು ಹದಗೊಳಿಸುವಂಥ ಕೈಂಕರ್ಯವನ್ನು ಕೈಗೊಳ್ಳಬಹುದು. ಗಣೇಶರಲ್ಲಿ ಕಲಾಭಿಜ್ಞತೆಯನ್ನು ಕಂಡು ಇತರರೂ ಕಾವ್ಯದರ್ಶನದ ಅಧ್ಯಯನಕ್ಕೆ ಮನಮಾಡಿಯಾರು. ಆಗ/ಹೀಗೆ ಇನ್ನೊಂದಿಷ್ಟು ಸಹೃದಯರು ಸಿದ್ಧರಾದರೆ ಅದಕ್ಕಿಂತ ದೊಡ್ಡ ಕೊಡುಗೆ ಈ ದರ್ಶನಕ್ಕೆ ಮತ್ತೇನಿದ್ದೀತು? ಹೀಗಾಗಿ ಅಲಂಕಾರದರ್ಶನಕ್ಕೆ ಗಣೇಶರ ಕೊಡುಗೆ ಎಂಬ ಶೀರ್ಷಿಕೆಯನ್ನು ತತ್ಪೂರ್ವದಲ್ಲಿ ಗಣೇಶರಿಗೆ ಈ ದರ್ಶನದ ಕೊಡುಗೆ ಏನಿದ್ದೀತು ಎಂದು ಬದಲಾಯಿಸಿ ನೋಡುವುದು ನನ್ನ ಅಹಂಕಾರದರ್ಶನವಾಗಲಿಕ್ಕಿಲ್ಲವೆಂದುಕೊಂಡಿದ್ದೇನೆ.

ರಸಧ್ವನಿ ಸಿದ್ಧಾಂತವನ್ನು ಕೇವಲ ಸಂಸ್ಕೃತಸಾಹಿತ್ಯಕೃತಿಗಳಿಗೆ ಮಾತ್ರವಲ್ಲದೆ ಕನ್ನಡದ ಬೇಂದ್ರೆ, ಡಿವಿಜಿ, ನರಸಿಂಹಸ್ವಾಮಿ, ಗೌರೀಶ ಕಾಯ್ಕಿಣಿ ಇವರ ಕೃತಿಗಳಿಗೆ ಅನ್ವಯಿಸಿದ ಪ್ರಾಯೋಗಿಕ ಮೌಲ್ಯಮಾಪನ ಗಣೇಶರ ಅನೇಕ ಬಿಡಿ ಬರಹಗಳಲ್ಲಿ ಕಾಣಸಿಗುತ್ತದೆ. ಭಾರತೀಯ ಕಾವ್ಯಮೀಮಾಂಸೆಯ ಮಹೋನ್ನತ ಸಿದ್ಧಾಂತವಾದ ರಸಧ್ವನಿಯನ್ನು ಸಾಹಿತ್ಯಕೃತಿಗಳಿಗೆ ಅನ್ವಯಿಸುವುದು ಸಾಮಾನ್ಯ. ಆದರೆ ಅದನ್ನು ಸಂಗೀತ, ನೃತ್ಯ, ಸಿನೆಮಾ, ಯಕ್ಷಗಾನ ಮುಂತಾಗಿ ಸಾಹಿತ್ಯೇತರವೆನಿಸುವ ಕಲೆಗಳಿಗೂ ಅನ್ವಯಿಸಿ ತಡಕಾಡಿದ ಶ್ರೇಯಸ್ಸು ಕನ್ನಡದ ಮಟ್ಟಿಗೆ ಬಹುಶಃ ಗಣೇಶರಿಗೆ ಸಲ್ಲುತ್ತದೆ.

ಕಾವ್ಯದಲ್ಲಿ ರಸಧ್ವನಿಗೆ ಪ್ರಥಮ ಪ್ರಾಶಸ್ತ್ಯ ಸಲ್ಲುವುದಾದರೂ ಅಲಂಕಾರಗಳಿಗಿರುವ ಮಹತ್ತ್ವ ಅವಗಣನೀಯವಲ್ಲವಷ್ಟೇ ಅಲ್ಲ, ಜೊತೆಗೆ ಅವಗಣಿಸಲ್ಪಡಬಾರದು ಎಂಬುದು ಕೂಡ ಅವಧಾನಿಗಳ ಆಗ್ರಹ. ಅವರ 'ಸ್ವಭಾವೋಕ್ತಿ– ಒಂದು

ಸಮಸ್ಯೆ' ಎಂಬ ಅಲಂಕಾರದ ಕುರಿತ ಪರುಷಕರ್ಕಶವೂ ದುರವಗಾಹ್ಯವೂ ಆದ ದೀರ್ಘ ಚರ್ಚೆಯ ಬಗ್ಗೆ ಒಂದು ಚಿಕ್ಕ ಜಿಜ್ಞಾಸೆ. ಲೋಕಧರ್ಮಿಯ ಯಥಾವತ್ ಚಿತ್ರಣ ಕಾವ್ಯವಾಗುವುದಿಲ್ಲ ಎಂಬುದು ವಿದಿತವೇ. ಹಾಗಿದ್ದರೆ ಕಾವ್ಯದ ವಿನಿಗಮಕ ಅಂಶ ಅದರ ವಿಶಿಷ್ಟ ಭಾಷೆಯಿಂದ ಎಂದಾಗಬೇಕು. ಆಗ ಯಥಾವತ್ ಚಿತ್ರಣದಲ್ಲಿ ಪ್ರಯುಕ್ತವಾದ ಭಾಷೆಯಿಂದ ಸಂಕೇತಿತವಾಗುವ ವಸ್ತು ಹಾಗೂ ಅದೇ ವಸ್ತುವನ್ನೇ ಆಲಂಕಾರಿಕ ಭಾಷೆಯಲ್ಲಿ ಪ್ರಕಟಿಸಿದಾಗ ಈ ಭಾಷೆಯಿಂದ ಸಂಕೇತಿತವಾಗುವ ವಸ್ತು– ಇವೆರಡರ ನಡುವೆ ಭಿನ್ನತೆ ಉಂಟಾಗುವುದೇ? ಅಲ್ಲವೆಂದಾದರೆ ಭಾಷೆಯ ಶಕ್ತಿಯ ಬಗೆಗೇ ಸಂದೇಹ. ಹೌದು ಎಂದಾದರೆ ವಸ್ತುಭಿನ್ನತೆಯನ್ನೂ ಅಂಗೀಕರಿಸಬೇಕಾಗುತ್ತದೆ. 'ಗತೋಽಸ್ತಮರ್ಕಃ' ಎಂದು ನಗ್ನವಾಗಿ ಹೇಳಿದಾಗ ವಾಚ್ಯವಾಗುವ ಅರ್ಥ ಹಾಗೂ 'ಪರಿಪತತಿ ಪಯೋನಿಧೌ ಪತಂಗಃ' ಎಂದು "ಸಂಸ್ಕೃತ" ಭಾಷೆಯಲ್ಲಿ ಹೇಳಿದಾಗ ಹೊಳೆಯುವ ಅರ್ಥಕ್ಕೂ ವ್ಯತ್ಯಾಸವಿದೆಯೆ? ಯಾವುದೇ ಪ್ರಕರಣ ಬಲವಿಲ್ಲದೆ (ಎಂದರೆ ವ್ಯಂಜನೆಯ ಮಹಿಮೆಯಿಲ್ಲದೆ) ಇವೆರಡೂ ಉಕ್ತಿಗಳು ಸಹೃದಯನಲ್ಲಿ ಉಂಟುಮಾಡುವ ಪರಿಣಾಮಗಳಲ್ಲಿ ವ್ಯತ್ಯಾಸವುಂಟಾಗುವುದೇ? ಆಗುವುದೆಂದಾದರೆ ಏಕೆ? ಇಲ್ಲಿ ಕೆಲಸ ಮಾಡುವುದು ಬರಿಯ ಭಾಷಾಸೌಷ್ಠವವೋ? ಅಥವಾ ಭಾಷಾಭಿವ್ಯಕ್ತ ವಸ್ತುಭಿನ್ನತೆಯೋ?

ಭಾರತೀಯಕಾವ್ಯಮೀಮಾಂಸೆಯ ಒಳನೋಟದ ದರ್ಶನವಿಲ್ಲದೆ ಅದನ್ನು ಮನಸ್ವೀ ತಿರುಚಿ ಕೀಳುಗಳೆಯುವ ವಿಮರ್ಶಕರನ್ನು ತರಾಟೆಗೆ ತೆಗೆದುಕೊಂಡು ರಸಧ್ವನಿ ಸಿದ್ಧಾಂತವನ್ನು ಎತ್ತಿಹಿಡಿಯುವ ಗಣೇಶರು ರಸಧ್ವನಿಯ ಪಾರಮ್ಯವನ್ನು ಆಗ್ರಹಿಸುವ ಆಲಂಕಾರಿಕರ ಜೊತೆ ಅಲಂಕಾರಪಾರಮ್ಯವನ್ನು ಮಂಡಿಸುತ್ತಾರೆ. ಇದು ದ್ವೈಧೀಭಾವವಲ್ಲ. ಬದಲಾಗಿ ಸ್ಥೂಲದಿಂದ ಸೂಕ್ಷ್ಮಕ್ಕೆ ಚಲಿಸುವ ಚಾಲಿಸುವ ಮನಸ್ಸು. ಅದ್ವೈತದರ್ಶನದ ಭದ್ರ ಬುನಾದಿಯ ಮೇಲೆ ಅಲಂಕಾರದರ್ಶನವನ್ನು ವಿಶ್ಲೇಷಿಸುವ ಗಣೇಶರ ಸಾರಸ್ವತಸಂಚಾರ ಅಭಿನಂದನೀಯ.

(ಈ ಲೇಖನ ಆಧಾರಗಳ ಕೊರತೆಯಿಂದ ಬಳಲುತ್ತಿದೆ. ಆದರೆ ಆಧಾರಗಳು ಉದ್ಧೃತವಾಗಿಲ್ಲ ಎಂಬುದು ಇಲ್ಲಿಯ ಅಭಿಪ್ರಾಯಗಳು ನಿರಾಧಾರ ಎಂಬುದಕ್ಕೆ ಸಕಾರಣವಲ್ಲ.)

ಯಕ್ಷ-ಗಣೇಶ

- ಶ್ರೀ ದಿವಾಕರ ಹೆಗಡೆ
ಆಕಾಶವಾಣಿ ಕಲಾವಿದರು, ಧಾರವಾಡ
ಪ್ರಸಿದ್ಧ ಯಕ್ಷಗಾನ-ಸಾಹಿತ್ಯ ಚಿಂತಕರು

ಕರ್ನಾಟಕದ ಪ್ರಾತಿನಿಧಿಕ ರಂಗಕಲೆ ಎಂದೆನಿಸಿಕೊಂಡ ಯಕ್ಷಗಾನಕ್ಕೆ ಸಾವಿರ ಸಾಧ್ಯತೆಗಳಿದ್ದರೂ, ವೇಷಭೂಷಣಗಳ ವೈಭವ, ಕುಣಿತವೈವಿಧ್ಯ, ಶಬ್ದಾಭಿನಯಗಳಾಚೆ ಇನ್ನೇನು ಎಂಬ ಜಿಜ್ಞಾಸೆಯಲ್ಲಿದ್ದಾಗ, ಸಾತ್ತ್ವಿಕಾಭಿನಯದ ಭಂಡಾರದ ಬೀಗವನ್ನು ತೆರೆದುತೋರಿದ್ದು ಶ್ರೀ ಮಂಟಪ ಪ್ರಭಾಕರ ಉಪಾಧ್ಯರ ಏಕವ್ಯಕ್ತಿ ಯಕ್ಷಗಾನ. ಈ ಏಕವ್ಯಕ್ತಿ ಯಕ್ಷಗಾನದ ಪರಿಕಲ್ಪನೆ, ಸಾಹಿತ್ಯ, ಸಂಯೋಜನೆ, ಮಾರ್ಗದರ್ಶನ ಡಾ॥ ಆರ್. ಗಣೇಶ್ ಅವರದು. ಕಾವ್ಯಲೋಕದ ನಿತ್ಯವಿಹಾರಿ, ನಿರಂತರ ರಸಾವಿಷ್ಕಾರದ ಭಾಷಾಕೋವಿದರಾದ ಗಣೇಶರು ಯಕ್ಷಪಾತ್ಯವನ್ನು ರಚಿಸಿದಾಗ ಯಕ್ಷಮಟ್ಟುಗಳ ವ್ಯಾಪ್ತಿ ವಿಸ್ತಾರವಾಯಿತು. ಸುಗಮವಾದ ಸುಭಗವಾದ ಅನೇಕ ಹೊಸ ಬಂಧಗಳು ಯಕ್ಷನೃತ್ಯಕ್ಕೆ ದುಡಿದವು. ಲೋಕಧರ್ಮಿಯನ್ನು ನಾಟ್ಯಧರ್ಮಿಯಾಗಿಸುವ ಕ್ರಮವನ್ನು ತೋರಿಸಿದ ಸಾಲುಗಳು ಅವು. 'ಭಾಮಿನಿ' ಪ್ರಯೋಗ ಮಹತ್ವದ ಹೊಸ ಹೆಜ್ಜೆ. ಕಥೆಯೇ ಇಲ್ಲದೆ ಭಾವಾಭಿವ್ಯಕ್ತಿಯ ಸಂದರ್ಭವನ್ನು ಸೃಷ್ಟಿಸಬಹುದೆಂಬ ಸಾಧ್ಯತೆಯನ್ನು ತೋರಿದ ಪ್ರಯೋಗ ಅದು. ಅದೊಂದು ಭಾಮಿನಿಯ ಭಾವವಿಲಾಸವನ್ನು ಗಮನಿಸಿದರೆ ಯಕ್ಷಗಾನದ ಎಲ್ಲ ಸ್ತ್ರೀಪಾತ್ರಗಳನ್ನು ಭಾವನಿಷ್ಠವಾಗಿ ವಿಸ್ತರಿಸುವ ಬಗೆ ಗೋಚರಿಸುತ್ತದೆ. ಬಿಡಿ-ಬಿಡಿಯಾದ ಶಬ್ದಾಭಿನಯ ಅಥವಾ ವಾಕ್ಯದ ನೇರ ಅರ್ಥದ ಸಾಮಾನ್ಯಾಭಿನಯದಲ್ಲಿ ಮುಗಿದುಹೋಗುವ ಸಂದರ್ಭವನ್ನು ಸಂಚಾರೀಭಾವಗಳ ಬಳಕೆಯಿಂದ ವಿಸ್ತಾರವಾಗಿ, ಕಲಾತ್ಮಕವಾಗಿ ಕಟ್ಟಿಕೊಡುವ ಮಾದರಿ ಅಲ್ಲಿದೆ. ಲೋಕಧರ್ಮಿಯು ನಾಟ್ಯಧರ್ಮಿಯಾಗುವುದಕ್ಕೆ ಬೇಕಾದ ಪಾತ್ಯ-ಪದಮೈತ್ರಿಯೊಂದಿಗೆ ತೋರುವ ಗತಿವಿಲಾಸ ಗಮನೀಯ. ಮುಂದೆ ಬಂದ 'ಜಾನಕೀಜೀವನ', 'ವೇಣುವಿಸರ್ಜನ' ಮುಂತಾದವೆಲ್ಲ ಯಕ್ಷಗಾನದ ಕೈಶಿಕೀವೃತ್ತಿಯನ್ನು ಸಮೃದ್ಧಗೊಳಿಸಿದವು.

ಈ ಸಂಬಂಧದಲ್ಲಿ ಗಣೇಶರ ಚಿಂತನದ ಹರಹು, ಅಧ್ಯಯನದ ಆಳ ಹರಳುಗಟ್ಟಿರುವುದು ಯಕ್ಷರಾತ್ರಿ ಪುಸ್ತಕದಲ್ಲಿ. ಇಂದು ಯಕ್ಷಗಾನ ಹೊಸತನಕ್ಕಾಗಿ ಅವಲಂಬಿಸುತ್ತಿರುವುದು ಆಕರ್ಷಣೆಯ ಸಂಗತಿಗಳನ್ನು, ಆಪ್ತಸಂದರ್ಭಗಳನ್ನಲ್ಲ. ಹಾಸ್ಯಗಾರರಿಂದಲೇ ಎಲ್ಲ ಪಾತ್ರ ಮಾಡಿಸುವ, ಸ್ತ್ರೀಪಾತ್ರದವರಿಂದ ಪುರುಷಪಾತ್ರ ಮಾಡಿಸುವ, ನಾಲ್ಕಾರು ಪ್ರಸಂಗಗಳ ಆಯ್ದ ಸಂದರ್ಭಗಳನ್ನು ಒಂದೇ ಪ್ರದರ್ಶನದಲ್ಲಿ ಅಭಿನಯಿಸುವ ಪ್ರಯೋಗಗಳು ನಡೆಯುತ್ತಿವೆ. ಇವುಗಳನ್ನೆಲ್ಲ ನಿರ್ದೇಶಿಸುವವರು ಕಲಾಭಿಜ್ಞರಲ್ಲ, ಗಲ್ಲಾಪೆಟ್ಟಿಗೆಯಲ್ಲಿ ದೃಷ್ಟಿನೆಟ್ಟ ಮಧ್ಯವರ್ತಿಗಳು. ಹಾಗೆ ನೋಡಿದರೆ ಸಮಾಜದ ಸಾಂಸ್ಕೃತಿಕ ಸಂಪತ್ತಾದ ಯಕ್ಷರಂಗಭೂಮಿಯನ್ನು ಕಲೆಯ ನೆಲೆಯಲ್ಲಿ ನಿಂತು ಸಂಸ್ಕೃತಿನಿಷ್ಠವಾಗಿ ನಿರ್ದೇಶಿಸುವ ವ್ಯವಸ್ಥೆಯೊಂದು ನಮ್ಮಲ್ಲಿಲ್ಲ. ಯಕ್ಷಗಾನಕಲಿಕೆಯ ಕೇಂದ್ರಗಳು ಯಕ್ಷಸಂವಾದದ ವೇದಿಕೆಗಳಲ್ಲ. ಕಲಾವಿದನ ವಿವೇಕವೇ ಎಲ್ಲದಕ್ಕೂ ಪ್ರಮಾಣ ಎನ್ನುವಂತಾಗಿದೆ. ಇಂಥ ಸಂದರ್ಭದಲ್ಲಿ ಬಂದ ಯಕ್ಷರಾತ್ರಿ ಪುಸ್ತಕ ಯಕ್ಷರಂಗಭೂಮಿಯ ಎದುರಿನ ಅನೇಕ ಪ್ರಶ್ನೆಗಳನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸಿ ಉತ್ತರಗಳತ್ತ ದಿಕ್ಕುತೋರುತ್ತದೆ. ವರ್ತಮಾನದ ಮಾರುಕಟ್ಟೆಯೋ ಪ್ರಚಲಿತ ಸಿದ್ಧಾಂತನಿಷ್ಠೆಯೋ ಗುರಿಯಲ್ಲ. ರಸೋತ್ಕರ್ಷದಿಂದ ಸಾಧಿತವಾಗುವ ಮಾನವವಿಕಾಸದ ಸಾಧ್ಯತೆ, ಅದಕ್ಕೊದಗುವ ಯಕ್ಷಗಾನದ ಪರಿಧಿ-ಪರಿಕರಗಳು ಇಲ್ಲಿ ಮುಖ್ಯವಾಗಿವೆ.

ಯಕ್ಷಗಾನವು ಶಾಸ್ತ್ರೀಯವೋ ಜಾನಪದವೋ ಎಂಬ ಪ್ರಶ್ನೆ ಕೇವಲ ರಂಗಭೂಮಿಯ ಚರ್ಚೆಯಾಗಿರದೆ, ಸಾಮಾಜಿಕ-ರಾಜಕೀಯ ಆಯಾಮಗಳನ್ನು ಪಡೆದುಕೊಂಡಿದೆ. ಅದು ಹೇಗಿದೆ ಎನ್ನುವುದಕ್ಕಿಂತ, ಹೇಗಿರಬೇಕು ಎಂಬ ವಾದಿ-ಪ್ರತಿವಾದಿಗಳ ನಿಲವೇ ಮುಖ್ಯವಾಗಿರುವ ಸಂದರ್ಭದಲ್ಲಿ, ಗಣೇಶರ ವಿಶ್ಲೇಷಣೆ ವಿಚಾರಣೀಯವಾಗಿದೆ.

ಮಾರ್ಗ–ದೇಶೀ ವರ್ಗೀಕರಣವು ಪಾಶ್ಚಾತ್ಯಪ್ರಭಾವದ ಪರಿಕಲ್ಪನೆಗಳಿಂದ ಪುಷ್ಟಗೊಂಡಾಗ ಆದ ಅಪವ್ಯಾಖ್ಯೆಯನ್ನು ವಿವರಿಸಿ, 'ಮಾರ್ಗ' ಎಂಬುದೆಲ್ಲ ಶಾಸ್ತ್ರೀಯ, 'ದೇಶೀ' ಮಾತ್ರ ಅಶಾಸ್ತ್ರೀಯ ಎಂಬ ನಿಲವೂ ಸರಿಯಲ್ಲ. ಏಕೆಂದರೆ ನಮ್ಮ ದೇಶದಲ್ಲಿ ಸರಿಸುಮಾರು ಹದಿನೇಳನೆ ಶತಾಬ್ದದವರೆಗೆ (ಕೆಲವು ಕಲಾಕ್ಷೇತ್ರಗಳಲ್ಲಿ ಹದಿನೆಂಟನೆಯ ಶತಾಬ್ದುವರೆಗೆ) ಮಾರ್ಗ ಮತ್ತು ದೇಶೀ ಪ್ರಕಾರಗಳನ್ನೆಲ್ಲ ಗ್ರಂಥರೂಪದಲ್ಲಿ ನಿಯಮಬದ್ಧವಾಗಿಸಿರುವುದು ವಿದ್ವಾಂಸರಿಗೆಲ್ಲ ಸುವೇದ್ಯ ಎಂದು ಅದಕ್ಕೆ ಉದಾಹರಣೆ ನೀಡುತ್ತಾರೆ. ವಾಮಪಂಥದ ಪ್ರೀತ್ಯಾಗ್ರಹಗಳ ಕಾರಣ ದೇಶಿಯನ್ನು 'ಅಶಾಸ್ತ್ರೀಯ' ಮತ್ತು ಶಾಸ್ತ್ರದ ವಿರುದ್ಧ ಬಂಡೆದ್ದ 'ದಲಿತಾಭಿವ್ಯಕ್ತಿ'ಯೆಂದೋ 'ಅಧೀನಸಂಸ್ಕೃತಿ'ಯ ಆಕ್ರೋಶವೆಂದೋ ನಿರೂಪಿಸುವ ಒಂದು ನಿಟ್ಟಿನ ಅತಿರೇಕವೂ; ದೇಶಿಯಲ್ಲಿರುವುದೆಲ್ಲ ಮಾರ್ಗವೇ ಹೌದು, ಮತ್ತು ಈ ಕಾರಣದಿಂದಲೇ ಅದು ಸಮಗ್ರರಾಷ್ಟ್ರವ್ಯಾಪಿಯಾದ ಮಾಧ್ಯಮವೆಂದೋ ಒಕ್ಕಣಿಸುವ ಮತ್ತೊಂದು ನಿಟ್ಟಿನ ಅತಿರೇಕವೂ ತೋರಿಕೊಳ್ಳುತ್ತದೆ ಎಂಬ ವಾಸ್ತವವನ್ನು ಎತ್ತಿ ಹೇಳುತ್ತಾರೆ. ಮುಂದುವರೆದು, "ಮಾರ್ಗವು ಪ್ರಾದೇಶಿಕವಾಗಿ ಅಭಿವ್ಯಕ್ತಿಗೊಂಡಾಗ (ಪ್ರಾದೇಶಿಕ ರುಚಿವೈಚಿತ್ರ್ಯಾನುಸಾರವಾಗಿ ಭಾವನೆಗೊಂಡಾಗ) ದೇಶಿಯಾಗಿ ಮೆಯ್ದಳೆಯುವುದೆಂದೂ, ದೇಶಿಯು ಪ್ರಾಂತಾತೀತವಾಗಿ ಅಭಿವ್ಯಕ್ತಿಗೊಂಡಾಗ (ಸಮಗ್ರವಾದ ಸಂವೇದನೆಗಾಗಿ ಪ್ರಾಂತೀಯ ವೈಶಿಷ್ಟ್ಯಗಳಿಗಿಂತ ಮೂಲಭೂತಮಾನವಭಾವಶೋಧನೆಯನ್ನೇ ಆಶ್ರಯಿಸಿ ಪರಿಭಾವಿತವಾದಾಗ) ಮಾರ್ಗವಾಗಿ ಮೂರ್ತೀಭವಿಸುವುದೆಂದೂ ಹೇಳಬಹುದು. ನಾಟ್ಯಶಾಸ್ತ್ರವು ಮಾರ್ಗದ ಕಕ್ಷೆಗೆ ಬರುವ ವೃತ್ತಿಗಳು ದೇಶಿಯ ಕಕ್ಷೆಗೆ ಬರುವ ಪ್ರವೃತ್ತಿಗಳೊಡನೆ ತಾಳುವ ಅನುಲೋಮ–ವಿಲೋಮ ಪದ್ಧತಿಯ ಜನ್ಯ–ಜನಕಭಾವವನ್ನು ಧ್ವನಿಸುವುದಿಲ್ಲಿ ಉಲ್ಲೇಖ್ಯ" ಎಂದು ಹೇಳುತ್ತಾರೆ. ಈ ರೀತಿಯ ಸಮಗ್ರದೃಷ್ಟಿಯ ಮಾತು ಕಲಾಸಾಧಕರಿಗೆ, ಕಲಾರಸಿಕರಿಗೆ ಪಂಥಪ್ರಭಾವದಿಂದಾಚೆಯ ಕಲಾರಾಧನೆಗೆ ಬೇಕಾದ ಮಾನಸಿಕತೆಯನ್ನೂ, ವಿಶ್ವಾಸವನ್ನೂ ತುಂಬಿಕೊಡುತ್ತದೆ. ಇನ್ನೊಂದು ಕಡೆ "ಶಾಸ್ತ್ರವು ಕಲೆಯನ್ನು ಕಲಿಸುವ ಏಕೈಕ ಅನಿವಾರ್ಯ ಮಾರ್ಗ" ಎಂಬುದನ್ನೂ ಸೂಚಿಸುತ್ತಾರೆ.

ದಕ್ಷಿಣಭಾರತದ ಎಲ್ಲ ಭಾಷೆ–ಪ್ರದೇಶಗಳಲ್ಲಿ ಪ್ರಚಲಿತವಿರುವ ಯಕ್ಷಗಾನ ಎನ್ನುವ ರಂಗಪ್ರಕಾರದ ಎಲ್ಲ ಆಯಾಮಗಳನ್ನೂ ಸಾಧಾರವಾಗಿ ವಿವರಿಸುವ ಗಣೇಶರು, ಕನ್ನಡದ ಬಡಗುತಿಟ್ಟಿನ ಸೂಕ್ಷ್ಮ ಅಭಿವ್ಯಕ್ತಿ–ಸಾಧ್ಯತೆಗಳನ್ನು ಎಳೆ–ಎಳೆಯಾಗಿ ಚಿತ್ರಿಸುತ್ತಾರೆ. ಯಕ್ಷಗಾನದ ಸುಧಾರಣೆ ಪ್ರಯೋಗದ ಸಾಧ್ಯತೆಗಳನ್ನು ಬಿಚ್ಚಿಟ್ಟ ಅವರ ಚಿಂತನ, ಆಹಾರ್ಯ–ಆಂಗಿಕ–ವಾಚಿಕ–ಸಾತ್ತ್ವಿಕ ಈ ನಾಲ್ಕೂ ವಿಭಾಗಗಳನ್ನು ಒಳಗೊಂಡಿರುವುದರಿಂದ ಸಮಗ್ರವಾಗಿದೆ. ಪೂರ್ವಸೂರಿಗಳೆಲ್ಲರ ಪ್ರಯತ್ನಗಳನ್ನೂ ನೆನೆಯುತ್ತ, ಸಹೋದರಕಲೆಗಳೊಂದಿಗೆ ಹೋಲಿಸುತ್ತ, ಅವರು ನೀಡುವ ನಿರ್ದೇಶನಗಳು, ನಿರಂತರ ಹೊಸತನಕ್ಕೆ ಮಾರ್ಗದರ್ಶಕ ಸೂತ್ರಗಳಂತಿವೆ. ಯಕ್ಷಗಾನದ ಆಕೃತಿ–ಆಶಯಗಳ ನಡುವಣ ಸಂಬಂಧವನ್ನು ಹೇಳಿದ ರೀತಿಯಲ್ಲಿಯೇ ಅದರ ಅನನ್ಯತೆ ನಮಗೆ ಅರ್ಥವಾಗುತ್ತದೆ. ಸಂಸ್ಕೃತಿನಿಷ್ಠವಾದ ಕಲೆಯೊಂದರ ಔಚಿತ್ಯಕ್ಕೆ ಪರಮಪ್ರಮಾಣ ಅಧ್ಯಾತ್ಮವೇ ಎಂಬ ವಿಶ್ಲೇಷಣೆ ಬಹು ಮಾರ್ಮಿಕವಾದದ್ದು. ಆಕೃತಿ ಲೋಕೋತ್ತರವಾದಾಗ ಆಶಯ ಲೌಕಿಕವಾದರೆ ಅನೌಚಿತ್ಯವಾಗುತ್ತದೆ ಎನ್ನುವ ಮಾತು ಹೊಸಪ್ರಸಂಗ ರಚಿಸುವವರಿಗೆ ನೀಡಿದ ಮಹದುಪದೇಶವಾಗಿದೆ.

ಬಹುಶ್ರುತವಿದ್ವಾಂಸರಾದ ಗಣೇಶರು ಯಕ್ಷಗಾನದತ್ತ ಆಕರ್ಷಿತರಾದದ್ದು ನಾಡಿನ ಭಾಗ್ಯ. ಯಕ್ಷಗಾನದ ಕಲಾಸಾಧಕರು, ರಸಿಕರು, ವಿಮರ್ಶಕರು ತಪ್ಪದೇ ಓದಬೇಕಾದ ಹೊತ್ತಗೆ ಯಕ್ಷರಾತ್ರಿ. ಆ ಪುಸ್ತಕದಲ್ಲಿ ವ್ಯಕ್ತವಾದ ಸಂಗತಿಗಳು ವಿಸ್ತಾರದ ಬಿಡಿಲೇಖನಗಳೂ ಆಗಿವೆ. ಅವರು ಏಕವ್ಯಕ್ತಿಯಕ್ಷಗಾನಕ್ಕಾಗಿ ರಚಿಸಿದ ಹಾಡುಗಬ್ಬಗಳು ರಸಗವಳಗಳಾಗಿವೆ. 'ಪಾರಿಜಾತ' ಕಥೆಯನ್ನು ಪ್ರಸಂಗವಾಗಿ ನೀಡಿದ್ದಾರೆ. ಅಲ್ಲೆಲ್ಲ ಹೊಸತನ ರಸಾರ್ದ್ರತೆಗಳು ಇದ್ದೇ ಇವೆ. ಮುದ್ದಣನ ತರುವಾಯ ಮಹಾಕವಿಗಳಾರೂ ಯಕ್ಷಗಾನದತ್ತ ಲಕ್ಷ್ಯವಹಿಸಿರಲಿಲ್ಲ. ಆ ಕೊರತೆಯನ್ನು ತುಂಬುತ್ತ ಯಕ್ಷಗಾನವು ಕಾವ್ಯಶಾಸ್ತ್ರವಿನೋದ ಎಂಬುದಕ್ಕೆ ಪ್ರಮಾಣವನ್ನು ಒದಗಿಸಿದ್ದಾರೆ. ಅವರ ಈ ಉಪಕಾರವನ್ನು ಸ್ಮರಿಸುತ್ತಲೇ ಪ್ರಗಲ್ಭಪಾಂಡಿತ್ಯದ ಭಾಷೆಯ 'ಯಕ್ಷರಾತ್ರಿ' ಕೃತಿಯ ವಿಷಯವನ್ನು ಸರಳ ಕನ್ನಡದಲ್ಲಿ ನೀಡುವ ಪ್ರಯತ್ನವಾದಲ್ಲಿ ಪಾಮರರೆಲ್ಲರೂ ಕೃತಜ್ಞರಾಗಿರುತ್ತಾರೆಂಬುದನ್ನು ವಿನಯದಿಂದ ನಿವೇದಿಸಿಕೊಳ್ಳುತ್ತೇನೆ.

ನಾ ಕಂಡ ಆರ್. ಗಣೇಶ್

– ಶ್ರೀ ಬಿ. ಆರ್. ಪ್ರಭಾಕರ್
ನಿವೃತ್ತ ಮುಖ್ಯ ಲೆಕ್ಕಪತ್ರ ನಿರ್ದೇಶಕರು

1987 ನೆಯ ಇಸವಿ ಫೆಬ್ರವರಿ ತಿಂಗಳ ಒಂದು ಸಂಜೆ ಭಾರತೀಯ ವಿದ್ಯಾಭವನದಲ್ಲಿ ಏರ್ಪಾಡಾಗಿದ್ದ ವಿದ್ವಾನ್ ಶ್ರೀ ಎನ್. ರಂಗನಾಥಶರ್ಮರ ಉಪನ್ಯಾಸವನ್ನು ಕೇಳಲು ನಾನು ಹೋಗಿದ್ದೆ. ಕಾರ್ಯಕ್ರಮ ಮುಗಿದ ನಂತರ ಆ ವಿದ್ವನ್ಮಣಿಯ ಹತ್ತಿರ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಆಗಷ್ಟೆ ಒಂದುವಾರದ ಹಿಂದೆ ತಾ॥ 08/02/1987 ರಂದು ನಡೆದ ಅಷ್ಟಾವಧಾನದಲ್ಲಿ, ಪೃಚ್ಛಕರಾಗಿ ಅವರು ನೀಡಿದ್ದ ಸಮಸ್ಯೆ 'ಪಿತನಂ ಮಾತೆಯಮುಂ ವಿಘಾತಿಪರಿನಾಂ ಸಂನ್ಯಾಸಿ ಸಂತೋಷಿಯೈ' ಎಂಬುದು ಬಹಳ ಚೆನ್ನಾಗಿತ್ತು ಹಾಗೂ ಅವರ ಪರಿಹಾರವಂತೂ ಬಹಳ ಅದ್ಭುತವಾಗಿತ್ತು ಎಂದು ಹೇಳಿದೆ.

ಆಗ ಅವರನ್ನು ಸುತ್ತುವರಿದು ನಿಂತು ಅವರ ಮಾತುಗಳನ್ನು ಆಲಿಸುತ್ತಿದ್ದ ಗುಂಪಿನಿಂದ ಸುಮಾರು 23–24 ವರ್ಷದ ಒಬ್ಬ ಯುವಕ "ನೀವು ಅಷ್ಟಾವಧಾನವನ್ನು ಮಾಡುತ್ತೀರಾ?" ಎಂದು ನನ್ನನ್ನು ಪ್ರಶ್ನಿಸಿದರು. ನಾನು ಅಂತಹ ವಿದ್ವಾಂಸನಂತೆ ಕಾಣುತ್ತೇನಾ? ಎಂದು ಬಹಳಷ್ಟು ತಬ್ಬಿಬ್ಬಾದೆ. ಏಕೆಂದರೆ ಆ ವೇಳೆಗೆ ನಾನು ತೆಲುಗಿನಲ್ಲಿ ಅನೇಕ ಅವಧಾನಗಳನ್ನು ನೋಡಿದ್ದೆ. ಹಾಗೂ ಧರ್ಮ–ಕರ್ಮ ಸಂಯೋಗದಿಂದ ದಿನಾಂಕ 08.02.1987ರಂದು ನೆಡೆದ ಶ್ರೀ ಸದಾನಂದಶಾಸ್ತ್ರಿಗಳ (ಮೂಲತಃ ತೆಲಗು ಅವಧಾನಿಗಳು) ಪ್ರಥಮ ಕನ್ನಡ ಅವಧಾನವನ್ನು 'ಯವನಿಕಾ' ಸಭಾಗೃಹದಲ್ಲಿ, ಕರ್ನಾಟಕಸರ್ಕಾರದ ವತಿಯಿಂದ ಪ್ರಾಯೋಜಿಸುವಲ್ಲಿ (ಶ್ರೀ ಎಚ್. ಎನ್ ಸುರೇಶರವರ ಸಂಪೂರ್ಣ ಬೆಂಬಲದಿಂದ) ನಾನು ಸಫಲನಾಗಿದ್ದೆ. ನನಗೆ ತಿಳಿದಂತೆ ಕನ್ನಡ–ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆದ ಈ ಮೊಟ್ಟಮೊದಲ 'ಕನ್ನಡ ಅವಧಾನ' ಒಂದು ದೊಡ್ಡ ಪ್ರಮಾಣದಲ್ಲಿ ಸಾಕಷ್ಟು ಜನೋತ್ಸಾಹವನ್ನೂ ಕುತೂಹಲವನ್ನೂ ಸೃಷ್ಟಿಸಿತ್ತು.

ಈ ಹಿನ್ನಲೆಯಲ್ಲಿ ನಾನು ಆ ಯುವಕರಿಗೆ, "ಇಲ್ಲ ನನಗೆ ಅಷ್ಟೆಲ್ಲಾ ಸಾಮರ್ಥ್ಯವಿಲ್ಲ. ಆದರೆ ಅದರ ಬಗೆಗೆ ತಿಳುವಳಿಕೆ ಹಾಗೂ ಆಸಕ್ತಿಗಳಿವೆ" ಎಂದು ಉತ್ತರಿಸಿದೆ. ಅದಕ್ಕೆ ಆ ತರುಣ, "ನನಗೂ ಅವಧಾನವೆಂದರೆ ಬಹಳ ಆಸಕ್ತಿ, ತಿಳಿದಿದ್ದರೆ ಬರುತ್ತಿದ್ದೆ. ನಾನು ಕೂಡಾ ಅವಧಾನ ಮಾಡಬಲ್ಲೆ" ಎಂದರು. ನನಗೆ ಆ ತಕ್ಷಣಕ್ಕೆ ಈ ಅಪರಿಚಿತ ತರುಣ ಹೇಳಿದ್ದು tall claim ಇರಬಹುದೇನೋ ಎನಿಸಿತು. ಏಕೆಂದರೆ ಶ್ರೀ ಶಾಸ್ತ್ರಿಗಳು ಹಾಗೂ ಎಂಟು ಪೃಚ್ಛಕರನ್ನು ಈ ಅವಧಾನಕ್ಕೆ ಒಪ್ಪಿಸಿ, ಕಾರ್ಯಕ್ರಮವನ್ನು ಅಯೋಜಿಸಲು ನಾನು ಪಟ್ಟಿದ್ದ ಪಾಡು ಅಷ್ಟಿಷ್ಟಲ್ಲ. ಆ ನಂತರ ನಾವು ಸುಮಾರು ಒಂದೂವರೆ ಗಂಟೆಯ ಕಾಲ ಲೋಕಾಭಿರಾಮವಾಗಿ ಅನೇಕ ವಿಷಯಗಳ ಬಗೆಗೆ – ಮುಖ್ಯವಾಗಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ – ಚರ್ಚಿಸಿದೆವು. ಅಂದು ಭವನದ ಆವರಣವನ್ನು ಬಿಡುವ ಹೊತ್ತಿಗೆ ರಾತ್ರಿ 9 ಗಂಟೆಯಾಗಿತ್ತು ಎಂದು ನನ್ನ ನೆನಪು; ಅಲ್ಲಿನ ಕಾವಲುಗಾರ ಗೇಟನ್ನು ಮುಚ್ಚಬೇಕೆಂದು ನಮ್ಮನ್ನು ಎಚ್ಚರಿಸಿದಾಗ.

ಆ ಸಂಭಾಷಣೆಯಿಂದಾಗಿ ಈ ತರುಣ ಅವಧಾನವನ್ನು ನಡೆಸಬಲ್ಲರು ಎಂಬುದು ನನಗೆ ಮನದಟ್ಟಾಯಿತು. ಅಂದು ಆರ್. ಗಣೇಶ್ ಎಂದು ತಮ್ಮನ್ನು ತಾವು ಪರಿಚಯಿಸಿಕೊಂಡ ಆ ತರುಣನೇ ಇಂದು ನಮ್ಮೊಂದಿಗಿರುವ 'ವಿದ್ವಲ್ಲೋಕದ ವಿಸ್ಮಯ', 'ಅವಿಳಂಬ ಸರಸ್ವತೀ' ಶತಾವಧಾನಿ ಡಾ॥ ಆರ್. ಗಣೇಶರು.

ಇದಾದ ಮಾರನೆಯ ದಿನವೇ ನಾನು ವಿದ್ವಾನ್ ಶ್ರೀ ಟಿ. ಎನ್. ಪದ್ಮನಾಭನ್‌ರವರನ್ನು (ಡಾ॥ ಡಿ.ವಿ.ಜಿ.ಯವರ ಶಿಷ್ಯರೂ, ಅವರ ಅತ್ಯಂತ ನಿಕಟವರ್ತಿಗಳೂ ಆಗಿದ್ದ ವಿದ್ವಾಂಸರು) ಭೇಟಿಮಾಡಿ ಇದನ್ನೆಲ್ಲ ಹೇಳಿದೆ. ಅಂದು ಅವರೊಂದಿಗೆ ಶ್ರೀ ಎಚ್. ಕೆ. ರಂಗನಾಥ ಮತ್ತು ಶ್ರೀ ಕೃಷ್ಣಮೂರ್ತಿಗಳು (ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ಯರ ಮೊಮ್ಮಗ) ಇದ್ದರೆಂದು ನೆನಪು. "ನಾನು ಆ ಹುಡುಗನನ್ನು ಭವನದಲ್ಲಿ ಅನೇಕಬಾರಿ ನೋಡಿದ್ದೇನೆ. ಅಷ್ಟೊಂದು ವೈದುಷ್ಯ ಇರುವುದು ತಿಳಿಯದು," ಎಂದರು. ಈ ಹೊತ್ತಿಗಾಗಲೇ ಪತ್ರಿಕೆಗಳ ಕೃಪೆಯಿಂದಾಗಿ ಅಷ್ಟಾವಧಾನದ ಬಗೆಗೆ ಜನರಲ್ಲಿ ಅಪರಿಮಿತವಾದ ಆಸಕ್ತಿ-ಉತ್ಸಾಹಗಳೇ ಅಲ್ಲದೆ, 'ಇದು ನಿಜಕ್ಕೂ ಸಾಧ್ಯವೇ?' ಎಂಬ ಅನುಮಾನಸಹಿತವಾದ ಕುತೂಹಲಗಳು ಉಂಟಾಗಿದ್ದವು. ಹಾಗಾಗಿ Public Demand ನಿಂದ ಅದೇ ಶ್ರೀ ಸದಾನಂದಶಾಸ್ತ್ರಿಗಳಿಂದ ಇನ್ನೊಂದು ಅವಧಾನವನ್ನು ಮುಂದಿನ ಒಂದೆರಡು ತಿಂಗಳಿನಲ್ಲೇ ಜಯನಗರದ ಶ್ರೀ ಪಟ್ಟಾಭಿರಾಮಸ್ವಾಮಿ ದೇವಸ್ಥಾನದಲ್ಲಿ ಏರ್ಪಡಿಸಲಾಯಿತು. ಅಷ್ಟುಹೊತ್ತಿಗೆ ಪರಿಚಿತರಾಗಿದ್ದ ಶ್ರೀ ಆರ್. ಗಣೇಶರನ್ನೂ ಸಹಪೃಚ್ಛಕರಾಗಿ ಆಹ್ವಾನಿಸಿದ್ದೆವು. ಅಂದು ಅವರಿತ್ತ ಸಮಸ್ಯೆ 'ನೀಡಂ ನೀಡಿದ ಮಾಡಮಾಡದ ಗಡಾ ನಾಡೋಡಿ ತಾನೋಡದೆ' ಎಂದು. ಆ ದಿವಸ ಶ್ರೀ ಸದಾನಂದಶಾಸ್ತ್ರಿಗಳ ಜೊತೆಯಲ್ಲೇ ಗಣೇಶರೂ ಸಹ ಇಡೀ ಅಷ್ಟಾವಧಾನಪ್ರಕ್ರಿಯೆಯ ನಿಷೇಧಾಕ್ಷರೀ, ಸಮಸ್ಯೆ, ದತ್ತಪದೀ, ಪುರಾಣಪಠಣ, ಘಂಟಾಗಣನವೇ ಮುಂತಾದ ಎಲ್ಲಾ ವಿಭಾಗಗಳನ್ನು ತಾವೂ ಸಹ ಪೂರೈಸಿದರು. ಅಂದೇ ನಮಗೆ ಮೊದಲ ಬಾರಿಗೆ ಶ್ರೀ ಆರ್. ಗಣೇಶರ ಕವಿತಾರಚನಾ ಕೌಶಲ, ವ್ಯುತ್ಪತ್ತಿ, ಪೂರಣ-ಧಾರಣಸಾಮರ್ಥ್ಯಗಳ ನೇರ ಪರಿಚಯ ಆದದ್ದು.

ಜಯನಗರದ ಅವಧಾನಕ್ಕೆ ಪುರಾಣಪಠಣ ವಿಭಾಗಕ್ಕೆ ಪೃಚ್ಛಕರಾಗಿ ಬಂದಿದ್ದ ಶ್ರೀ ಪದ್ಮನಾಭನ್‌ರವರ ಪುತ್ರಿ ಶ್ರೀಮತಿ ಸರೋಜಾ ಕೃಷ್ಣಮೂರ್ತಿಯವರು, ಶ್ರೀ ಆರ್. ಗಣೇಶರ ಸದ್ಯಃಸ್ಫೂರ್ತಿ, ಕವಿತ್ವನೈಪುಣ್ಯ, ವೈದುಷ್ಯಗಳಿಂದ ಪ್ರಭಾವಿತರಾಗಿ ಅವರ ಪ್ರಥಮ ಕನ್ನಡ ಅಷ್ಟಾವಧಾನವನ್ನು ಕೋಲಾರದಲ್ಲಿ ಏರ್ಪಡಿಸಿದರು. ಅಲ್ಲಿಯವರೆಗೂ ಕೇವಲ ಅಷ್ಟಾವಧಾನದ ಆಯೋಜನೆಯಲ್ಲಿ ಮಾತ್ರ ಸಕ್ರಿಯನಾಗಿದ್ದ ನನ್ನನ್ನು, ಶ್ರೀ ಪದ್ಮನಾಭನ್ನರು ಹಾಗೂ ಶ್ರೀ ಆರ್. ಗಣೇಶರು ಬಲವಂತವಾಗಿ ಪೃಚ್ಛಕನಾಗಿ ಕೂರಿಸಿಬಿಟ್ಟರು. ಈಜುಸ್ಪರ್ಧೆಯನ್ನು ನೋಡಲು ಬಂದವನನ್ನು ನೀರಿಗೆ ನೂಕಿದಂತಾಯಿತು ನನ್ನ ಪರಿಸ್ಥಿತಿ. ಆ ಇಬ್ಬರು ವಿದ್ವನ್ಮಣಿಗಳ ಸಹಕಾರ, ಸಹಯೋಗ ಹಾಗೂ ಉತ್ತೇಜನಗಳಿಂದಾಗಿಯೇ ನನಗೆ ಶ್ರೀ ಆರ್. ಗಣೇಶರಂತಹ ದಿಗ್ಗಜದ ಜೊತೆಯಲ್ಲಿ ವೇದಿಕೆಯ ಮೇಲೆ ಕೂರುವ ಧೈರ್ಯ ಬಂದದ್ದು.

ಏತನ್ಮಧ್ಯೆ, ಶ್ರೀ ಆರ್. ಗಣೇಶ್‌ರವರು ಶ್ರೀಯುತ ಲಂಕಾ ಕೃಷ್ಣಮೂರ್ತಿಗಳನ್ನು ಭೇಟಿಯಾಗಬೇಕೆಂದು ಬಯಸಿದರು. ಈ ಮಹಾವಿದ್ವಾಂಸರು ಕರ್ನಾಟಕ ಹೈಕೋರ್ಟಿನಲ್ಲಿ ರಿಜಿಸ್ಟ್ರಾರ್ ಹುದ್ದೆಯಲ್ಲಿದ್ದು ನಿವೃತ್ತರಾಗಿದ್ದವರು. ಸಂಸ್ಕೃತ, ತೆಲುಗು, ಕನ್ನಡಭಾಷೆಗಳಲ್ಲಿ ನಿಸ್ಸೀಮ ಪಂಡಿತರಾಗಿದ್ದ ಈ ಸಂಗೀತ-ಸಾಹಿತ್ಯ ಕೋವಿದರು, ಸ್ವತಃ ಕವಿಗಳು ಹಾಗೂ ಅವಧಾನ ನೈಪುಣ್ಯವನ್ನು ಪಡೆದಿದ್ದರಲ್ಲದೆ, ತೆಲಗಿನಲ್ಲಿ ಅನೇಕ ಅವಧಾನಿಗಳನ್ನು ತಯಾರುಮಾಡಿದ್ದವರು. ನನ್ನ ಪೂರ್ವಕೃತ ಪುಣ್ಯವಿಶೇಷದಿಂದಾಗಿ ನನಗೆ ಇವರ ಪರಿಚಯವಿತ್ತು. ಹಾಗಾಗಿ ಒಂದು ಸಂಜೆ (1987 ರಲ್ಲಿ) ಶ್ರೀ ಆರ್. ಗಣೇಶ್‌ರವರನ್ನು ಶ್ರೀಯುತ ಲಂಕಾ ಕೃಷ್ಣಮೂರ್ತಿಗಳ ("'ಶ್ರೀಯುತ' ಏಕೆಂದರೆ ಎಲ್ಲಾ ಸಮಾರಂಭಗಳಲ್ಲೂ ನನ್ನನ್ನು ಜನ 'ಶ್ರೀಲಂಕಾ' ಕೃಷ್ಣಮೂರ್ತಿಯನ್ನಾಗಿ ಮಾಡುತ್ತಾರೆ," ಎಂದು ಯಾವಾಗಲೂ 'ಲಂಕಾ'ರವರು ಪೇಚಾಡುತ್ತಿದ್ದರು) ನಿವಾಸಕ್ಕೆ ಕರೆದುಕೊಂಡುಹೋಗಿ ಪರಿಚಯಿಸುವ ಸುಯೋಗ ನನಗೆ ಲಭಿಸಿತು. ಎರಡು ಗಂಟೆಗಳಿಗಿಂತಲೂ ಹೆಚ್ಚು ಕಾಲ ಈ ಇಬ್ಬರು ವಿದ್ವನ್ಮಣಿಗಳ ನಡುವೆ ನಡೆದ ವೈದುಷ್ಯಪೂರ್ಣವಾದ ಸಂವಾದವನ್ನು ಸವಿದದ್ದು ನನ್ನ ಜೀವನದ ಅತ್ಯಂತ ಸಾರ್ಥಕವಾದ ಸಂದರ್ಭಗಳಲ್ಲೊಂದು ಎಂಬುದು ಇಂದಿಗೂ ನನ್ನ ಭಾವನೆ. 'ಲಂಕಾ'ರವರನ್ನು ಅಂದಿನಿಂದಲೇ ಶ್ರೀ. ಗಣೇಶರು ಗುರುಸ್ಥಾನದಲ್ಲಿ ಪ್ರತಿಷ್ಠಿಸಿಬಿಟ್ಟರು. ಆ ನಂತರದಲ್ಲಿ ನಡೆದ ಎಲ್ಲಾ ಅಷ್ಟಾವಧಾನಗಳಲ್ಲೂ ಶ್ರೀಯುತ ಲಂಕಾ ಅವರು ಪೃಚ್ಛಕರಾಗಿರುತ್ತಿದ್ದರು. ಆ ವರೇಣ್ಯರು ಸಾಧಾರಣವಾಗಿ 'ನಿಷೇಧಾಕ್ಷರೀ' ವಿಭಾಗವನ್ನು ನಿರ್ವಹಿಸುತ್ತಿದ್ದರು. ಇಂದಿಗೂ ಗಣೇಶರು ಅವರನ್ನು ಎಲ್ಲಾ ಅವಧಾನಗಳಲ್ಲೂ ಆದಿಯಲ್ಲೇ ಸ್ಮರಿಸುತ್ತಾರೆ.

ಒಮ್ಮೆ ಚಿಂತಾಮಣಿಯಲ್ಲಿ ಅವಧಾನಕ್ಕೆಂದು ನಾವೆಲ್ಲರೂ ನನ್ನ ಕಾರಿನಲ್ಲಿ ಹೋಗುತ್ತಿದ್ದಾಗ, ಶ್ರೀಯುತ ಲಂಕಾ ಅವರು ಶಿವಾನಂದಲಹರಿಯ 'ಅಂಕೋಲಂ ನಿಜ ಬೀಜ ಸಂತತಿಃ' ಎಂಬ ಶ್ಲೋಕದ ಅದ್ವೈತಪೂರ್ಣವಾದ ಅರ್ಥಸಂಪತ್ತು-ಶಿಲ್ಪಸೌಂದರ್ಯಗಳನ್ನು ವಿವರಿಸಿದ ವೈಖರಿಯನ್ನೂ, ತೈತ್ತರೀಯೋಪನಿಷತ್ತಿನಲ್ಲಿ ಬರುವ 'ಭಿಯಾ ದೇಯಂ' ಎಂಬ ವಾಕ್ಯದ ವ್ಯಾಖ್ಯಾನದ ಸಂದರ್ಭದಲ್ಲಿ ಲಂಕಾರವರು ಅವರ ಬಾಲ್ಯದಲ್ಲಿ ನಡೆದ ಒಂದು ಘಟನೆಯ ವಿವರಣೆ ನೀಡಿದ್ದನ್ನೂ, ಅವಧಾನಿ ಗಣೇಶರು ಅನೇಕ ಬಾರಿ ನೆನಪಿಸಿಕೊಳ್ಳುತ್ತಾರೆ. ಕವಿವರೇಣ್ಯರೂ, ಸಾಹಿತ್ಯಕೋವಿದರೂ ಆದ 'ಲಂಕಾ' ರವರ ಗರಡಿಯಲ್ಲಿ ಗಣೇಶರು ಅನೇಕ 'ಪಟ್ಟು'ಗಳನ್ನು ಕಲಿತವರು. ಇಂದು ಗಣೇಶರ ಅವಧಾನಗಳಲ್ಲಿ ಪಂಡಿತ-ಪಾಮರರಂಜನಿಯಾಗಿ ವಿಖ್ಯಾತವಾಗಿರುವ 'ಸಂಖ್ಯಾಬಂಧ' ಈ ಗರಡಿಯ ಸಾಮಿನಿಂದ ಸಿದ್ಧವಾದದ್ದು.

ನಂತರದ ದಿನ-ವರ್ಷಗಳಲ್ಲಿ ಅವಧಾನಕಲೆಯ ಪುನರುಜ್ಜೀವನವನ್ನು ಮಾಡಿ ಅದಕ್ಕೆ ಸಲ್ಲಬೇಕಾದ ಆದರಣೀಯ ಸ್ಥಾನವನ್ನು ಗಳಸಿಕೊಡುವುದರಲ್ಲಿ ಶ್ರೀ ಗಣೇಶರ ಯೋಗದಾನ ಅಪ್ರತಿಮವಾದದ್ದು. ಈ ಕಲೆಯ ಬಗೆಗೆ ಸಂಶೋಧನೆಯನ್ನೂ ಮಾಡಿ 'ಡಾಕ್ಟರೇಟ್' ಪದವಿಯನ್ನು ಪಡೆದುಕೊಂಡು ಶತಾವಧಾನವನ್ನೂ ನಡೆಸಿರುವ ಶ್ರೀ ಗಣೇಶರು ನಿಜಕ್ಕೂ ಪುಂಭಾವಸರಸ್ವತಿಗಳು. ಪದ್ಮಭೂಷಣ ಡಾ॥ ಡಿ.ವಿ.ಜಿಯವರು ನಡೆದ ದಾರಿಯಲ್ಲೇ ಸಾಗುತ್ತಿರುವ ಗಣೇಶರು ಏನನ್ನೂ ಬಯಸದಿದ್ದರೂ, ಬಿರಿದು-ಬಾವಲಿಗಳೂ, ಖ್ಯಾತಿಯೂ, ಅವರನ್ನರಸಿಬಂದಿರುವುದು ಎಲ್ಲರೂ ಬಲ್ಲ ಸಂಗತಿ.

ಇವರ ಅವಧಾನನಿರ್ವಹಣಾಕ್ರಮ ಬಹಳ ವಿಭಿನ್ನವಾದ ರೀತಿಯಿಂದ ಹಾಗೂ ವೈಶಿಷ್ಟ್ಯಗಳಿಂದ ಕೂಡಿದುದು. ಸಾಧಾರಣವಾಗಿ ನಾನು ನೋಡಿದಂತೆ ಅವಧಾನಗಳಲ್ಲಿ 'ರಸೋಲ್ಲಾಸ'ಕ್ಕಿಂತ 'ಲೆಕ್ಕಾಚಾರ''ದ ಹಾವಳಿ ಜಾಸ್ತಿ. ಎಲ್ಲಾ ವಿಭಾಗಗಳಿಗೂ 'ಸಂತೆ ಹೊತ್ತಿಗೆ ಮೂರು ಮೊಳ ನೇಯುವುದು' ಎಂಬಂತೆ ಉತ್ತರಗಳು ಸಿದ್ಧವಾಗುತ್ತವೆ. ಗಣೇಶರ ಅವಧಾನಗಳಲ್ಲಿ ಹಾಗಲ್ಲ. ಅತ್ಯಂತ ರಸಸ್ಯಂದಿಯಾಗಿ, ಪಂಡಿತ-ಪಾಮರರಂಜನಿಯಾಗಿ ಇಂದಿನ ಪದ್ಧತಿಯಾದ Buy One & Take Two Free ಎಂಬಂತೆ, ಆ ಪ್ರಸಂಗಕ್ಕೆ ಸಂವಾದಿಯಾದ ಅನೇಕ ವಿಷಯಗಳ ಮಹಾಪೂರವೇ ಹರಿದುಬರುತ್ತದೆ. ಅವಧಾನಿಗಳಿಗೆಲ್ಲಾ ಅಗ್ರಮಾನ್ಯರೂ, ಅಗ್ರಪೂಜ್ಯರೂ ಆದ ಶ್ರೀ ತಿರುಪತಿ ಕವೀಂದ್ರರು, "ಅವಧಾನಗಳಲ್ಲಿ ಚಿತ್ರಕಾವ್ಯರಚನೆಗೆ ಬೇಕಾದ ವ್ಯವಧಾನ, ಅನುಕೂಲಪರಿಸ್ಥಿತಿಗಳ ಅಭಾವದಿಂದಾಗಿ ಚಿತ್ರಕಾವ್ಯನಿರ್ವಹಣೆ ಬೇಕಿಲ್ಲ" ಎಂದು ಹೇಳಿದ್ದಾರೆ. ನಮ್ಮ ಗಣೇಶರ ಅವಧಾನದಲ್ಲಿ 'ಚಿತ್ರಕಾವ್ಯ' ಒಂದು ಅವಿಭಾಜ್ಯ ಅಂಗವಾಗಿದೆ. ಇದು ನಮ್ಮ ನೆಚ್ಚಿನ ಅವಧಾನಿಗಳ ಪೂರಣ-ಧಾರಣ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ. ಇನ್ನೊಂದು ವಿಶೇಷವೇನೆಂದರೆ, 'ಪುರಾಣಪಠಣ'ವಿಭಾಗದ ಪೃಚ್ಛಕರಿಗೆ ಡಾ॥ ಗಣೇಶರು ಉತ್ತರಿಸುವ ವಿಧಾನ ಅಭೂತಪೂರ್ವವಾದದ್ದು. ಸಾಧಾರಣವಾಗಿ ಬೇರೆ ಅವಧಾನಗಳಲ್ಲಿ 'ಇಂಥಾ ಗ್ರಂಥ, ಇದು ಸಂದರ್ಭ' ಎಂದಷ್ಟೇ ಉತ್ತರ ಪ್ರಸ್ತುತವಾಗುತ್ತದೆ. ಆದರೆ ನಮ್ಮ ಗಣೇಶರು, ಪೃಚ್ಛಕರು ಗ್ರಂಥದ ಭಾಗವನ್ನು ಗಾನಮಾಡಿದ ರಾಗದಲ್ಲೇ, ಗಾನಮಾಡಿದ ಪದ್ಯಗಳು ರಚಿತವಾಗಿರುವ ಛಂದಸ್ಸಿನಲ್ಲೇ ತಮ್ಮ ಉತ್ತರವನ್ನು ನೀಡುತ್ತಾರೆ. ಹಿಂದಿನ ಕೆಲವು ವರ್ಷಗಳಲ್ಲಿ ಸಾಕಷ್ಟು ಅವಧಾನಗಳಲ್ಲಿ ಶಾಸ್ತ್ರವಿಷಯಗಳನ್ನು, ನಮ್ಮ ಸಂಪ್ರದಾಯ ಆಚಾರಗಳ ಹಿನ್ನಲೆಯನ್ನು ಜನಸಾಮಾನ್ಯರಿಗೆ ತಿಳಿಯಪಡಿಸಲು ಒಂದು ವಿಭಾಗವನ್ನು ಸೃಷ್ಟಿಸಿ ಅದನ್ನು ಬಹಳ ಶ್ಲಾಘನೀಯವಾಗಿ ನಡೆಸಿಕೊಟ್ಟಿದ್ದಾರೆ.

ಶ್ರೀ ಗಣೇಶರಿಗೆ ಅವಧಾನ ನಡೆಸುವುದು ಪಾಂಡಿತ್ಯಪ್ರದರ್ಶನವೋ, ಜನಾದರಣೆಗೆ ದಾರಿಯೋ, ವಾಕ್ಚಾತುರ್ಯ-ಕವಿತ್ವಗಳ ಮೇಲಿರುವ ಪ್ರಭುತ್ವವನ್ನು ತಿಳಿಸುವ ಸಾಧನವೋ ಅಲ್ಲ. ಅವರಿಗೆ ಅದು ಸರಸ್ವತಿಯ ಆರಾಧನೆ. ಶ್ರೀ ತ್ಯಾಗರಾಜಾದಿ ವಾಗ್ಗೇಯಕಾರರ ಕಲಾತಪಸ್ಸಿನಂತೆ ತಮ್ಮ ಮನಸ್ಸಿನ ತೃಪ್ತಿಗಾಗಿ ನಡೆಸುವ 'ಪರಮಪೂಜೆ'. ನಾನು ಪೃಚ್ಛಕನಾಗಿ ಭಾಗವಹಿಸಿದ ಎರಡು ಸಂದರ್ಭಗಳಿಂದ ಇದು ಸ್ವತಸ್ಸಿದ್ಧವಾಗುತ್ತದೆ.

1989 ರಲ್ಲಿ (ಆಗ ಗಣೇಶರು ಇನ್ನೂ ಪ್ರಖ್ಯಾತರಾಗಿರಲಿಲ್ಲ) ದೊಮ್ಮಲೂರಿನ ಕಾರ್ಪೋರೇಷನ್ ಉದ್ಯಾನದಲ್ಲಿ ನಡೆದ ಒಂದು 'ಅಷ್ಟ'ವಧಾನದಲ್ಲಿ ಪಾಲ್ಗೊಂಡವರು ಒಟ್ಟು 11 ಮಂದಿ. ಗಣೇಶರು ಕಿಂಚಿತ್ತೂ ಬೇಸರಿಸದೆ,

ನಿರುತ್ಸಾಹಿಗಳಾಗದೆ ಪೂರಣ–ಧಾರಣಗಳನ್ನು ಸಾಂಗವಾಗಿ ಪೂರೈಸಿದರು. ಇನ್ನೊಮ್ಮೆ 2008ರಲ್ಲಿ, ಆ ಹೊತ್ತಿಗೆ ಖ್ಯಾತಿಯ ಮೇರುಶಿಖರದಲ್ಲಿದ್ದ ಶ್ರೀ ಗಣೇಶರ ಅವಧಾನವನ್ನು ಕೋಣನಕುಂಟೆಯಲ್ಲಿ 200ಕ್ಕೂ ಹೆಚ್ಚು ಮನೆಗಳಿದ್ದ Gated Communityಯ ಸದಸ್ಯರಿಗಾಗಿ ಒಬ್ಬ ಸಾಹಿತ್ಯಾಭಿಮಾನಿಗಳು ಆಯೋಜಿಸಿದ್ದರು. ದೊಡ್ಡ ಶಾಮಿಯಾನದಲ್ಲಿ ನೂರಾರು ಶ್ರೋತೃಗಳು ಸೇರಿದ್ದರು. ಅವಧಾನ ನಡೆಯುತ್ತಿದ್ದಾಗ ಮಳೆ ಪ್ರಾರಂಭವಾಯಿತು. ಮಳೆ ಹೆಚ್ಚಾದರೂ ಲೆಕ್ಕಿಸದೆ ಅರ್ಧದಷ್ಟು ಜನ ಅವಧಾನದಲ್ಲಿ ಮಗ್ನವಾಗಿದ್ದರು. ವಾಯು–ವರುಣರು ಕೋಪಗೊಂಡು ಇಡೀ ಶಾಮಿಯಾನವನ್ನು ಕೆಡವಿಬಿಟ್ಟರು. ವಿದ್ಯುದ್ದೀಪಗಳು ನಂದಿದವು. ನಾವೆಲ್ಲಾ ಅಲ್ಲೇ ಇದ್ದ ಆಯೋಜಕರ ಮನೆಗೆ ಹೋದೆವು. ಹಲವಾರು ಶ್ರೋತೃಗಳೂ ಬಂದರು. ಶ್ರೀ ಗಣೇಶರು ಅಲ್ಲಿ ಸೇರಿದ್ದವರ ಸಮಕ್ಷದಲ್ಲಿ, ನಮ್ಮ ನೆನೆದ ಬಟ್ಟೆಗಳು ಒಣಗುವಷ್ಟರಲ್ಲಿ ಸಾಂಗವಾಗಿ ಅವಧಾನ ಮುಗಿಸಿದರು.

ಇಲ್ಲಿ ತಿಳಿಯುತ್ತದೆ ಗಣೇಶರಿಗೂ ಅವಧಾನಕ್ಕೂ ಇರುವ ಅವಿನಾಭಾವ ಸಂಬಂಧ. ಯಜ್ಞದೀಕ್ಷಿತರಂತೆ, ಎಲ್ಲಾ ವಿಘ್ನಗಳನ್ನೂ ಎದುರಿಸಿ ಸಮರ್ಪಣಭಾವದಿಂದ ಗಣೇಶರು ವ್ರತಸ್ಥರಂತೆ ನಡೆಸುವ ಸಾರಸ್ವತಯಜ್ಞವೇ ಅವಧಾನ. ಇದೇರೀತಿಯ ಭಾವನೆಯನ್ನೇ ಶ್ರೋತೃಗಳಲ್ಲೂ ಮೂಡಿಸಿ, ಅವರೂ ಸಮಗ್ರವಾಗಿ ಭಾಗವಹಿಸಿ ಆಸ್ವಾದಿಸಿ ಈ ಸಾಹಿತ್ಯಸತ್ರವನ್ನು ಸಾರ್ಥಕವಾಗಿ ಆನಂದಿಸುವಂತೆ ಮಾಡಬಲ್ಲ 'ಯಜಮಾನ'ರೇ ನಮ್ಮ ನೆಚ್ಚಿನ ಪುಂಭಾವಸರಸ್ವತಿಗಳಾದ ಗಣೇಶರು. ಇಂತಹ ಮಹನೀಯರ ಒಡನಾಟವನ್ನು ಪಡೆದ ನಾವೇ ಧನ್ಯರು. ನಾವು ಇವರಿಗೆ ನೀಡುವುದು ಇಷ್ಟೆ – 'ಪುನಶ್ಚ ಭೂಯೋಽಪಿ ನಮೋ ನಮಸ್ತೆ'.

ಅವಧಾನಕಲೆ – ಒಂದು ವಿವೇಚನೆ

– ಶ್ರೀ ಮತ್ತಕೂರು ರಾಜಣ್ಣ ಚಂದ್ರಮೌಳಿ
ಮಾನವಸಂಪನ್ಮೂಲ ತಜ್ಞರು

ಪ್ರವೇಶಿಕೆ :

"ಅವಧಾನ" ಸಾರಸ್ವತಲೋಕದ ಒಂದು ವಿನೋದ ರಸಕ್ರೀಡೆ. ಅರವತ್ತನಾಲಕ್ಕು ಕಲೆಗಳಲ್ಲಿ ಅವಧಾನವೂ ಒಂದು ವಿದ್ಯೆ. ಕವಿಯ ಆಶುಕವಿತ್ವ, ಗುರುತ್ವ, ಸಾಹಿತ್ಯಪಟುತ್ವ, ನೆನಪೆಂಬ ಧಾರಣಾಶಕ್ತಿಗಳ ಪಾಂಡಿತ್ಯಪ್ರಕರ್ಷೋನ್ನತ್ವಗಳ ಪರೀಕ್ಷೆ. ಹಿಂದೆ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಬೇರೆ ಸ್ವರೂಪದಿಂದ ವಿಪುಲವಾಗಿದ್ದ ಈ ಪ್ರಕ್ರಿಯೆ ಇಂದು ಹೆಚ್ಚಾಗಿ ಆಂಧ್ರದಲ್ಲಿ ಪ್ರಚಲಿತ. ಕ್ಲಿಷ್ಟ ಸಾಹಿತ್ಯಸಮಸ್ಯೆಗಳನ್ನು ಅವಲೀಲೆಯಿಂದ ಪರಿಷ್ಕರಿಸಿ, ಚಮತ್ಕಾರಯುಕ್ತಪೂರಣಗಳನ್ನು ನೀಡಿ, ಅಸಂಬದ್ಧವಾದ ಅಸಂದರ್ಭವಾದ ಪ್ರಶ್ನೆಗಳನ್ನು ಸಮರ್ಥವಾಗಿ ಎದುರಿಸಿ, ಆಶುವಾಗಿ ಪದ್ಯಗಳನ್ನು ಹೇಳುತ್ತಾ ಸಕಲಸಭಾಸದರನ್ನು ರಂಜಿಸುವ ಅದ್ಭುತಪ್ರತಿಭಾವಿಲಾಸದ ಕುತೂಹಲಕಾರಕ ರಂಜನೆ. ಇವೆಲ್ಲವನ್ನೂ ಏಕಕಾಲದಲ್ಲಿ ಸೃಷ್ಟಿಸುವ ಕವಿಬ್ರಹ್ಮನೇ ಅವಧಾನಿ.

ಅಷ್ಟ, ದ್ವಿಗುಣೀಕೃತಾಷ್ಟ, ತ್ರಿಗುಣೀಕೃತಾಷ್ಟ, ಶತ, ದ್ವಿಶತ, ಸಹಸ್ರ, ದ್ವಿಸಹಸ್ರಾಧಿಕಾವಧಾನಗಳು ಅವಧಾನಿಗಳ ಸಾಮರ್ಥ್ಯಸೂಚಕಗಳು. ಆದರೆ ಜನರಂಜನೆ, ವಿಶೇಷಾದರಣೆ ಅಷ್ಟಾವಧಾನಕ್ಕೆ. ಸಮಸ್ಯಾಪೂರಣ, ದತ್ತಪದೀ, ವರ್ಣನೆ, ನಿಷಿದ್ಧಾಕ್ಷರೀ, ಅಪ್ರಸ್ತುತಪ್ರಸಂಗ, ವಿವರ್ಗಾಕ್ಷರೀ, ನಿರ್ದಿಷ್ಟಾಕ್ಷರೀ, ಘಂಟಾಗಣನ, ಪುಷ್ಪಗಣನ, ಪುರಾಣಪಠನ/ಕಾವ್ಯವಾಚನ, ಇಚ್ಚಾಂಕಶ್ಲೋಕ, ಛಂದೋಭಾಷಣ, ಕೇಳಿದ ಆಂಗ್ಲದಿನಾಂಕಕ್ಕೆ ಪಂಚಾಂಗರೀತ್ಯಾ ವಾರಪ್ರಕಟನೆ ಇಂಥ ವಿವಿಧಾಂಗಗಳಲ್ಲಿ ಎಂಟು ಅಂಶಗಳನ್ನು ಆಂಧ್ರಭಾಷಾವಧಾನಿಗಳು ಆರಿಸಿಕೊಳ್ಳುತ್ತಾರೆ. ಈ ಅಂಗಗಳಿಗಿಂತಲೂ ಹೆಚ್ಚು ರಂಜಕವಾದ ಮತ್ತು ಕಠಿನವಾದ ಚಿತ್ರಕವಿತ್ವ ಮತ್ತು ಸಂಖ್ಯಾಬಂಧ ಎಂಬ ನೂತನಾಂಶಗಳನ್ನು ಸೇರ್ಪಡಿಸಿಕೊಂಡು ಕನ್ನಡದಲ್ಲಿ ಒಂದು ಹೊಸ ರೀತಿಯ ಅವಧಾನಕ್ರಮವನ್ನು ಹುಟ್ಟುಹಾಕಿದ ಚಾರಿತ್ರಿಕ ದಾಖಲೆ ಶತಾವಧಾನಿ ಗಣೇಶರದ್ದು. ಇಂದು ಅವರ ಅಷ್ಟವಧಾನಗಳಲ್ಲಿ ಕಂಡುಬರುವ ಎಂಟು ಅಂಗಗಳು ಇವು: 1. ನಿಷಿದ್ಧಾಕ್ಷರಿ 2. ಸಮಸ್ಯೆ 3. ದತ್ತಪದಿ 4.ಚಿತ್ರಕವಿತ್ವ 5. ಆಶುಕವಿತ್ವ 6.ಕಾವ್ಯವಾಚನ 7. ಸಂಖ್ಯಾಬಂಧ/ಘಂಟಾಗಣನ ಮತ್ತು 8. ಅಪ್ರಸ್ತುತಪ್ರಸಂಗ. ಅವಧಾನದ ಈ ಎಂಟು ಅಂಗಗಳ ಬಗ್ಗೆ ಆಯಾ ಸಂದರ್ಭಗಳಲ್ಲಿ ಅವರೇ ಹೇಳಿರುವುದರಿಂದ, ಅವಧಾನಕಲೆಯ ಬಗೆಗಿನ ಅವರ ಗ್ರಂಥದಲ್ಲಿ ವಿಷಯ–ವಿಶೇಷ–ವಿಸ್ತೃತ್ವ ಉಪಲಬ್ಧವಿರುವುದರಿಂದ ಪ್ರಸ್ತುತಲೇಖನದ ಓದುಗರಿಗೆ ಅವನ್ನು ವಿವರಿಸುವ ಅಗತ್ಯವಿಲ್ಲ. ಈ ಹಿನ್ನೆಲೆಯಲ್ಲಿ ಅವಧಾನವನ್ನು ಆನಂದಿಸುವವರಿಗೆ, ಸಾಹಿತ್ಯಾಸಕ್ತರಿಗೆ ಮತ್ತು ಅವಧಾನಿಗಳಾಗಬೇಕೆಂಬ ಉತ್ಸಾಹವಿರಬಹುದಾದ ಯುವಮೇಧಾವಿಗಳಿಗೆ ಅವಧಾನವಿದ್ಯೆಯ ಅಂತರಂಗ–ತಂತ್ರಕಲಾವಿಧಾನಗಳ ಒಂದು ವಿಹಂಗಮನೋಟ ಮಾತ್ರ ಇಲ್ಲಿದೆ.

ಅವಧಾನ ಒಂದು ಯೋಗ

ಅವಧಾನ attention, devotion, intentness ಅಥವಾ ಮನಸ್ಸಿನ ಏಕಾಗ್ರತೆ ಎನ್ನಬಹುದಾದ, ಅತ್ತಿತ್ತ ಚಲಿಸದ, ಚಿತ್ತಕೇಂದ್ರೀಕೃತವಾಗುವ ಒಂದು ಮನೋಯೋಗ. ಪ್ರಾರಂಭದಿಂದ ಪೃಚ್ಛಕರು ಕೇಳುವ ಪ್ರಶ್ನೆಗಳನ್ನು ನೆನಪಿನಲ್ಲಿಟ್ಟು,

ಪ್ರತಿಯೊಬ್ಬರಿಗೂ ಸಮಾಧಾನವನ್ನು ಆವೃತ್ತಿಗೊಂದು ಪದ್ಯಪಾದದಂತೆ, ವರಸೆಯಾಗಿ ಹೇಳುತ್ತಾ ಚತುರಾವೃತ್ತಿಗಳಲ್ಲಿ ಸಮರ್ಥವಾಗಿ ಪೂರಣಮಾಡುವುದೇ ಅವಧಾನಿಯ ಸಾಧನೆ.

ದಂಡಿ, ವಾಮನ, ರುದ್ರಟ, ರಾಜಶೇಖರಾದಿ ಆಲಂಕಾರಿಕರು ಅವಧಾನವನ್ನು ಚಿತ್ತೈಕಾಗ್ರತೆ, ಮನಸ್ಸಮಾಧಿ ಎಂದು ವರ್ಣಿಸಿದ್ದರೂ ಇದೊಂದು ಚಮತ್ಕಾರಯುತವಾದ ಪಾಂಡಿತ್ಯ, ಸಾಹಿತ್ಯಕ್ರೀಡೆ ಅಥವಾ ಕಾವ್ಯಕ್ರಿಯಾರೂಪದಲ್ಲಿ ಎಲ್ಲ ಭಾಷೆಗಳಲ್ಲೂ ಕಂಡುಬರುವ ವಿಕಾಸಸೃಷ್ಟಿ. ಮೇಧಸ್ಸನ್ನು ಏಕಾಗ್ರತೆ ಮತ್ತು ನಿರೋಧಕ್ರಮಗಳಿಂದ ವಶಮಾಡಿಕೊಂಡು ನೆನಪಿನ ಬಲವನ್ನು ಹೆಚ್ಚಿಸಿಕೊಳ್ಳುತ್ತಾ, ಸದ್ಯಃಸ್ಫೂರ್ತಿಯಿಂದ ಸಾಗುವ ಅಪೂರ್ವಸಾಧನೆ ಅವಧಾನಿಯದು. ಸಾಧನೆ ಮಾಡಿದರೆ ಎಂಥಾ ಕ್ಲಿಷ್ಟವಾದ ಕಾರ್ಯವನ್ನಾದರೂ ಮಾಡಬಹುದೆಂಬ ಜೀವಂತನಿದರ್ಶನ ಇಲ್ಲಿರುತ್ತದೆ. ಮನಸ್ಸನ್ನು ಸ್ವಾಧೀನದಲ್ಲಿರಿಸಿಕೊಳ್ಳುವ ಚಿತ್ತವೃತ್ತಿನಿರೋಧವೆಂಬ ಯೋಗಸೂತ್ರದ ಅನುಷ್ಠಾನ ಇಲ್ಲಿ ಕಾಣುತ್ತದೆ. ಅಚಂಚಲಂ ಮಹಾಬಾಹೋ ಮನೋದುರ್ನಿಗ್ರಹಂ ಚಲಂ ಎಂಬ ಪ್ರಶ್ನೆಗೆ ಉತ್ತರವನ್ನು ಅವಧಾನಿ ಅಭ್ಯಾಸದಿಂದ ಅದನ್ನು ಹಿಡಿಯಲು ಸಾಧ್ಯ ಎಂದು ಇಲ್ಲಿ ಪ್ರತ್ಯಕ್ಷವಾಗಿ ತೋರಿಸಿಕೊಡುತ್ತಾನೆ. ಇದರಿಂದ ಸಾಮಾನ್ಯರಿಗೆ ಉಪಯೋಗವೇನು? ಸಾಧನೆ ಮಾಡಿದರೆ, ಇಷ್ಟವಿದ್ದರೆ, ಮನೋನಿಗ್ರಹದಿಂದ ಕ್ಲಿಷ್ಟವಾದ ಸಮಸ್ಯೆಗಳನ್ನೂ ಬಿಡಿಸಬಹುದು; ಕಷ್ಟಕಾರ್ಯಗಳನ್ನೂ ಮಾಡಬಹುದು ಎಂಬ ವ್ಯಕ್ತಿವಿಕಾಸಮಾರ್ಗದರ್ಶನವೇ ಲಾಭ. ವಿದ್ಯಾರ್ಥಿಗಳಿಗೆ ಅಧಿಕಲಾಭ.

ಅವಧಾನವಿದ್ಯೆಯ ವೈಶಿಷ್ಟ್ಯ :

ಅವಧಾನವಿದ್ಯೆಯ ವಿಶಿಷ್ಟತೆಯನ್ನು ಕುರಿತು ಶ್ರೀತಿರುಪತಿ ವೇಂಕಟೇಶ್ವರಕವಿಗಳ ಮಾತು ಗಮನಾರ್ಹ. ಓದಿಕೊಂಡವರು ಲಕ್ಷಮಂದಿ ಇದ್ದರೆ ಅವರಲ್ಲಿ ಒಬ್ಬ ಪಂಡಿತನಿರುತ್ತಾನೆ. ಅಂಥಹ ಸಾವಿರಪಂಡಿತರಲ್ಲಿ ಒಬ್ಬ ಕವೀಶ್ವರ. ಆ ರೀತಿಯ ನೂರು ಮಂದಿ ಕವೀಶ್ವರರಲ್ಲಿ ಒಬ್ಬ ಅವಧಾನಿ ನಮಗೆ ಲಭ್ಯ. ನನ್ನಯ ಭಟ್ಟಾರಕನ ವಚನದಂತೆ 'ಮೃದುಮಧುರಚಿತ್ರವಿಸ್ತರನವರಸಭಾವಭಾಸುರಕವಿತಾವಿಶಾರದರೇ ಮಹಾಕವಿಗಳು'. ಮಹಾಕವಿ ಶಬ್ದಜಾಲಕ್ಕಾಗಿ ತಡಕಾಡದೆ, ಪದ್ಯವನ್ನು ಆಶುವಾಗಿ ಹೇಳತೊಡಗಿದರೆ ಶಬ್ದಾರ್ಥಗಳು ಹಿಂಬಾಲಿಸುತ್ತಾ ಓಡಿಬರುತ್ತವೆ ಎನ್ನುತ್ತದೆ ಕಾವ್ಯಮೀಮಾಂಸೆ. ಪೂರ್ವದಲ್ಲಿದ್ದ ಏಳೆಂಟು ಭಾಷೆಗಳ ಅವಧಾನ ಸ್ವರೂಪ ಬದಲಾಗುತ್ತಿದ್ದು, ಇಂದು ಒಂದು ಭಾಷೆಯಲ್ಲಿ ಅಷ್ಟಾಂಶ, ಶತಾಂಶ ಮತ್ತು ಸಹಸ್ರಾಂಶಗಳ ಪರೀಕ್ಷೆಗೆ ಅವಧಾನ ವಿದ್ಯೆ ಸಂದಿದೆ. ಒಂದು ಕಾಲದಲ್ಲಿ ಅವಧಾನಿಯೆಂದರೆ ಸಂಸ್ಕೃತ, ತೆಲುಗು, ಕನ್ನಡ, ಮಹಾರಾಷ್ಟ್ರೀ, ಶೌರಸೇನಿ, ಮಾಗಧಿ, ಪ್ರಾಚ್ಯ, ಅವಂತ್ಯಾದಿ ಭಾಷೆಗಳಲ್ಲಿ ಕವಿತ್ವ ಮಾಡುವ ಅಷ್ಟಭಾಷಾಕವಿ.

ಅವಧಾನಪ್ರಭೇಧಗಳು :

ಅವಧಾನಿಯನ್ನು ಪ್ರಶ್ನಿಸುವ ಪೃಚ್ಛಕರ ಸಂಖ್ಯೆಯ ಆಧಾರದಿಂದ ಅಷ್ಟಾವಧಾನ, ಶತಾವಧಾನ ಅಥವಾ ಸಹಸ್ರಾವಧಾನಗಳ ನಿರ್ಣಯ. ಸಾವಿರದ ನೂರ ಹದಿನಾರು ಪೃಚ್ಛಕರನ್ನು ನಿಭಾಹಿಸಿದವ ಮಹಾಸಹಸ್ರಾವಧಾನಿ. ಆಂಧ್ರದ ಗರಿಕಿಪಾಟಿ ನರಸಿಂಹರಾಯರು ಅಂಥ ಮಹಾಸಹಸ್ರಾವಧಾನಿ. ಐದುಸಾವಿರ ಪದ್ಯಗಳನ್ನು ರಚಿಸಿ, ಧರಿಸಿ, ಹೇಳುವ ಪಂಚಸಹಸ್ರಾವಧಾನಿಗಳು ಶ್ರೀ ಮೆಡಸಾನಿ ಮೋಹನ್. ಇದಕ್ಕೆಲ್ಲಾ ಪ್ರಥಮ ಸೋಪಾನ ಅಷ್ಟಾವಧಾನಿಯ ಪಟ್ಟ. ಶತಾವಧಾನಿಯಾಗುವ ಮುನ್ನ ಅಷ್ಟಾವಧಾನದಲ್ಲಿ ನಿಷ್ಣಾತನಾಗಬೇಕು. ಅಷ್ಟ–ಶತ–ಸಹಸ್ರಾವಧಾನಗಳಲ್ಲದೆ, ಸಾಹಿತ್ಯೇತರವಾದ ಶತಕಲಶಾವಧಾನ, ಶಬ್ದಾವಧಾನ, ರಾಮಾಯಣ, ಭವವದ್ಗೀತಾವಧಾನಗಳೂ ಉಂಟು. ಇವಲ್ಲದೆ ವೇದಸಂಬಂಧಿಯಾದ ಅವಧಾನಗಳು: ಸ್ವರಾವಧಾನ, ಅಕ್ಷರಾವಧಾನ. ಸಾಂಕೇತಿಕ ಅವಧಾನಗಳು: ನೇತ್ರಾವಧಾನ, ಅಂಗುಷ್ಠಾವಧಾನ ಮೊದಲಾದುವು. ಶಾಸ್ತ್ರಸಂಬಂಧಿತ ಅವಧಾನಗಳು: ಗಣಿತಾವಧಾನ, ಜ್ಯೋತಿಷ್ಯಾವಧಾನ, ವೈದ್ಯಾವಧಾನ,

ಅಕ್ಷರಗಣಿತಾವಧಾನ. ಕಲಾ ಸಂಬಂಧಿತ ಅವಧಾನಗಳು : ಚಿತ್ರಕಳಾವಧಾನ, ನಾಟ್ಯಾವಧಾನ, ಸಂಗೀತಾಷ್ಟಾವಧಾನ, ಚತುರಂಗಾವಧಾನ, ಧ್ವನ್ಯಾವಧಾನ. ಆದರೆ ಸಾಹಿತ್ಯಾವಧಾನಗಳದ್ದೇ ಪ್ರಚಾರಬಾಹುಳ್ಯ.

ಕನ್ನಡದಲ್ಲಿ ಅವಧಾನಕಲೆ :

ಅವಧಾನಪ್ರಕ್ರಿಯೆಗೆ ಜೀವವನ್ನು ತುಂಬಿ ಪ್ರಸಿದ್ಧಮಾಡಿ ಪ್ರಜಾದರಣೆಗೆ ಖ್ಯಾತರಾದವರು 'ಜಂ ಟಕವುಲು' (ಅವಳಿಕವಿಗಳು) ಎಂದು ಹೆಸರಾಂದ ದಿವಾಕರ್ಲ ತಿರುಪತಿ ಶಾಸ್ತ್ರಿ (1871–1919) ಮತ್ತು ಚೆಳ್ಳಪಿಳ್ಳ ವೇಂಕಟ ಶಾಸ್ತ್ರಿ (1870–1950). ಮುಂದೆ, ಪಿಸುಪಾಟಿ ಚಿದಂಬರ ಶಾಸ್ತ್ರಿ 1930–40ರ ಕಾಲದ ಪ್ರಖ್ಯಾತರು. ಅವರಶಿಷ್ಯರೇ ಕನ್ನಡದ ಪ್ರಥಮ ಅವಧಾನಿ ಬೆಳ್ಳಾವೆ ನರಹರಶಾಸ್ತ್ರಿಗಳು. ಆಧುನಿಕರಲ್ಲಿ ಶ್ರೀಯುತರಾದ ಗರಿಕಿಪಾಟಿ ನರಸಿಂಹರಾವು, ಮೆಡಸಾನಿ ಮೋಹನ್, ಮಾಡುಗುಲ ನಾಗಫಣಿಶರ್ಮ, ಕಡಿಮೆಳ್ಳ ವರಪ್ರಸಾದ್, ಅಷ್ಟಕಲ ನರಸಿಂಹರಾಯ ಶರ್ಮ, ರಾಳ್ಳಬಂಡಿ ಕವಿತಾಪ್ರಸಾದ್ ಮತ್ತು ನಮ್ಮವರೇ ಆದ ರಾ.ಗಣೇಶ್ ಪ್ರಮುಖರು.

ಇಂದು ನಾವು ಕಾಣುತ್ತಿರುವ ಅವಧಾನಸ್ವರೂಪ, ಕಾಲಾಂತರದಲ್ಲಿ ರೂಪುಗೊಂಡದ್ದು. ಕನ್ನಡದಲ್ಲಿ ಮೊದಲಿಗೆ ಅವಧಾನವನ್ನು ಕುರಿತು ಬರೆದದ್ದು ಕರ್ಣಾಟಕಾವಧಾನಿ ಬೆಳ್ಳಾವೆ ನರಹರಿಶಾಸ್ತ್ರಿಗಳು. ಆನಂತರದಲ್ಲಿ ಅದೇಕೋ ಅವಧಾನಪ್ರಗತಿ ನಿಧಾನಗತಿಯನ್ನು ಹಿಡಿಯಿತು. ಈಚಿನ ಕಾಲದಲ್ಲಿ ಜೆ.ಸದಾನಂದಶಾಸ್ತ್ರಿಗಳು, ರಾ.ಗಣೇಶ್ ಅವಧಾನಿಗಳಾಗಲು ಮಾರ್ಗದರ್ಶಕರಾದವರು ಕರ್ಣಾಟಕದಲ್ಲಿ ನೆಲಸಿದ್ದ ಆಂಧ್ರಮೂಲದ ಕೀ॥ಶೇ॥ ಲಂಕಾಕೃಷ್ಣಮೂರ್ತಿಗಳು. ಇಂದು ಕನ್ನಡದಲ್ಲಿ ಅಷ್ಟಾವಧಾನ, ಶತಾವಧಾನಗಳೆಂದರೆ ಡಾ॥ ರಾ.ಗಣೇಶರೊಬ್ಬರೇ ಎಂಬುದು ಹರ್ಷದಾಯಕವಾದರೆ, ಬೆರಳೆಣಿಕೆಯ, ಎರಡನೆಯ ವ್ಯಕ್ತಿಯಿಲ್ಲದೆ ಅನಾಮಿಕಸ್ಥಿತಿಯಲ್ಲಿ ಹೆಬ್ಬೆರಳು ಕಿರುಬೆರಳನ್ನು ತಾಕಿ ನಿಂತುಹೋಗಿರುವುದು ಶೋಚನೀಯವೇ.

ತೆಲುಗಿನಲ್ಲಿ ಶ್ರೀ ಸಿ.ವಿ.ಸುಬ್ಬನ್ನ, ಕನ್ನಡದಲ್ಲಿ ಶ್ರೀ ಗಣೇಶ್ ಈ 'ಅವಧಾನವಿದ್ಯೆ'ಯ ವಿಷಯದಲ್ಲಿಯೇ ಡಾಕ್ಟೋರಲ್ ಥೀಸಿಸ್‌ಗಳನ್ನು ಮಂಡಿಸಿದ ಶತಾವಧಾನಿಗಳೆನಿಸಿದ್ದಾರೆ. ಇವರಡೂ ಡಾಕ್ಟರೇಟ್‌ಪದವಿಗಳು ಕರ್ಣಾಟಕದ ಎರಡು ವಿಶ್ವವಿದ್ಯಾಲಯ ಪ್ರದಾನಗಳೆಂಬುದು ವಿಶೇಷ. ಅವಧಾನವಿದ್ಯೆಯ ಬಗ್ಗೆ ಆಳವಾದ, ದೀರ್ಘವಾದ ವಿಷಯ, ವಿವೇಚನೆ, ವಿಧಾನ, ಹಿನ್ನೆಲೆ ಮತ್ತು ಚಾರಿತ್ರಿಕಾಂಶಗಳು ಆ ಗ್ರಂಥಗಳಲ್ಲಿ ವಿಪುಲವಾಗಿವೆ.

ಅವಧಾನಿಯ ಸಾಮರ್ಥ್ಯ–ಮೂಲದ್ರವ್ಯ :

ರಾಜಶೇಖರ ವೇಂಕಟೇಶಕವಿ ಹೇಳುವಂತೆ ಅವಧಾನಿಗೆ ಧಾರಾ, ಧಾರಣಾ, ಧೈರ್ಯಗಳೆಂಬ ಧಕಾರತ್ರಯ ಅಗತ್ಯ. ಕವಿಯ ಮನಕ್ಕೆ ವಿಷಯ ಗೋಚರಿಸಿ, ರಸವತ್ತಾದ ಪದಜಾಲಗಳು ಅವ್ಯಾಹತವಾಗಿ ಛಂದೋಬದ್ಧವಾಗಿ ಹೊರಬರುವುದೇ ಧಾರಾ. ಪೃಚ್ಛಕ ಕೇಳಿದ ಪ್ರಶ್ನೆಗಳನ್ನು, ಅವನ ಕ್ರಮವನ್ನು, ತಾನು ಹೇಳಿದ ಪದ್ಯಗಳನ್ನು, ವೃತ್ತ–ಪ್ರಾಸ–ಪದ–ವೈವಿಧ್ಯಗಳನ್ನು ಬುದ್ಧಿಯಲ್ಲಿ ಧರಿಸುವ ಶಕ್ತಿಯೇ ಧಾರಣ. ಮುಖ್ಯವಾದ ಮೂರನೆಯ ಅಂಶವಾದ ಧೈರ್ಯವೇ ಮೂಲದ್ರವ್ಯ. ಅದು ತಾಯೂಡಿಸಿದ ಹಾಲಿನ ಚೈತನ್ಯದಂತೆ.

ಕಾವ್ಯಮೀಮಾಂಸಕಾರ ರಾಜಶೇಖರನ ಸೂಕ್ತಿಯಂತೆ, ಸ್ವಾಸ್ಥ್ಯ, ಪ್ರತಿಭೆ, ಅಭ್ಯಾಸ, ಭಕ್ತಿ (ಸಮರ್ಪಣಾಭಾವ), ವಿದ್ವತ್ಕಥಾ, ಬಹುಶ್ರುತತ್ವ, ಸ್ಮೃತಿದಾರ್ಢ್ಯ, ಅನಿರ್ವೇದ ಎಂಬುದಾಗಿ ಕವಿತೆಗೆ ಎಂಟುಮಂದಿ ತಾಯಂದಿರು. ಸ್ವಾಸ್ಥ್ಯ– ಆರೋಗ್ಯ, ಚುರುಕಾದ ವ್ಯಕ್ತಿತ್ವ, ಪ್ರತಿಭೆ – ನವನವೋನ್ಮೇಷಶಾಲಿಯಾದ ಪ್ರಜ್ಞೆ, ಅಭ್ಯಾಸ – ನಿರಂತರ ಕಾವ್ಯಾಭ್ಯಾಸ, ಪ್ರಶ್ನೋತ್ತರ ಭೇದನ, ಧಾರಣಮಾತೃಕಾದಿ ಕ್ರಿಯಾಭ್ಯಾಸ, ವಿದ್ಯೋಪವಿದ್ಯಾನಿರಂತರ ಪರೀಶೀಲನಾಫಲ ಪ್ರತಿಭಾಹೇತುವಾಗುತ್ತದೆ, ಭಕ್ತಿ: ಸರಸ್ವತೀರೂಪದ ಗುರುಭಕ್ತಿ, ವ್ಯಾಕರಣ ಛಂದೋಲಂಕಾರಾದಿ ಉಪವಿದ್ಯಾತಂತ್ರವಿಜ್ಞತೆ

ಮತ್ತು ಶ್ರದ್ಧೆ. ವಿದ್ವತ್ಕಥಾ – ಪಕ್ಷ ಪ್ರತಿಪಕ್ಷ, ವಿದಗ್ಧವಾದ ಗೋಷ್ಠಿಗಳಿಂದ ಸುಭದ್ರವಾಗುವ ವಿಚಾರ, ಬಹುಶ್ರುತತ್ವ: ಸುಜನರ, ಕವಿಗಳ ಸನ್ನಿಧಿಯಿಂದ ದೇಶ–ವಿದೇಶ–ವಾರ್ತಾ–ಯಾತ್ರಾದಿಗಳಿಂದ ಉಂಟಾಗುವ ಜ್ಞಾನ, ಸ್ಮೃತಿದಾರ್ಢ್ಯ: ಮರೆವೆಯಿಲ್ಲದ ಅನುಭೂತಿವಿಷಯನಿತ್ಯೋಪಸ್ಥಿತಿ, ಅನಿರ್ವೇದ – ತನ್ನನ್ನು ತಾನೇ ಕಡಿಮೆ ಮಾಡಿಕೊಳ್ಳದ ಆತ್ಮಸ್ಥೈರ್ಯ ಮತ್ತು ಧೈರ್ಯ. ಇವೆಲ್ಲಾ ಸೇರಿದ ಪರಿಪಾಕವೇ ಅವಧಾನಿಯ ಮೂಲಶಕ್ತಿ.

ಚತುರ್ವಿಧಾ ಕವಿತ್ವಪ್ರತಿಭೆ :

ಕವಿಯಾದವನು ಪರಿಕರಗಳೊಡನೆ ತನಗೆ ಅನಿರ್ಬಂಧಿತವಾಗಿ ಸ್ವಸ್ಥಸ್ಥಿತಿಯಲ್ಲಿ ಕಾವ್ಯ ರಚಿಸುತ್ತಾನೆ. ಅವಧಾನಿಗೆ ಪತ್ರ, ಲೇಖನಿ, ಲ್ಯಾಪ್–ಟಾಪ್, ಸೆಲ್–ಫೋನ್ ಅಥವಾ ಕ್ಯಾಲ್ಕ್ಯುಲೇಟರ್ ಇಂಥಾ ಯಾವುದೇ ಪರಿಕರಗಳಿಲ್ಲ. ಕುಳಿತಲ್ಲೇ ಪದ್ಯವನ್ನು ಆಶುವಾಗಿ ರಚಿಸುವ ಶಕ್ತಿಯಿರಬೇಕು. ಈ ಪದ್ಯರಚನಾಶಕ್ತಿ ನಾಲ್ಕು ವಿಭಿನ್ನರೀತಿಯಲ್ಲಿ ಮೂಡಿಬರಬೇಕಾಗುತ್ತದೆ.

ಅವಧಾನಿ ಚತುರ್ವಿಧಕವಿತ್ವಪ್ರತಿಭಾನ್ವಿತ. 1. ಛಂದೋಬದ್ಧವಾಗಿ ಯಾವುದೇ ವಿಷಯದ ಬಗ್ಗೆ ತತ್ಕಾಲೋಚಿತವಾಗಿ ತ್ವರಿತಚತುರಗತಿಯಿಂದ ಪದ್ಯರಚನೆ ಮಾಡುವ ಆಶುಕವಿತ್ವ; 2.ಲೌಕಿಕಾಧ್ಯಾತ್ಮಿಕ ವಿವಿಧ ಶಾಸ್ತ್ರಕಲಾಪ್ರಭೇಧವಿಜ್ಞತೆಯಿಂದ ಭಾರವಾಗದೆ ಪ್ರೇಕ್ಷಕವಿವಿದಾಧಿಕಾರಸ್ಥಾನಬೇಧವನ್ನರಿತ ಮೃದು ಮಧುರ ವಚನ ರಚನಾಭರಿತ ಮಧುರಕವಿತ್ವ; 3. ಚಮತ್ಕಾರಯುಕ್ತ ಚಿತ್ರ ವಿಚಿತ್ರ ಬಂಧಯುಕ್ತ ನಾನಾರ್ಥ, ಅನ್ಯಾರ್ಥ, ದ್ವಂದ್ವಾರ್ಥ, ಪದ್ಯಪಾದ ಭ್ರಮಕಗಳ, ವಿಚಿತ್ರಬಂಧಗಳ ಚಿತ್ರಕವಿತ್ವ ಮತ್ತು 4. ದತ್ತವಸ್ತುವಿಸ್ತಾರವರ್ಣನಾಲಂಕಾರ ಕಾವ್ಯಲಕ್ಷಣಭರಿತ ಪ್ರಬಂಧ ಶೈಲಿಯ ವಿಸ್ತರಕವಿತ್ವ, ಈ ಚತುರ್ವಿಧಕವಿತಾಧುರೀಣನಾಗುವುದೇ ಅವಧಾನಿಗೆ ಪ್ರಥಮ ಹಂತದ ಅರ್ಹತೆ.

ಆಶುಕವಿತ್ವವೇ ಅಸ್ತಿಭಾರ :

ಅವಧಾನದಲ್ಲಿ ಪದ್ಯನಿರ್ಮಾಣಕ್ರಿಯೆ ಒಂದೊಂದೇ ಆ ವರ್ತದಲ್ಲಿ ಸಾಗುತ್ತಾ, ಆಬಿಡತೆಗಳಲ್ಲಿ ಅವಧಾನಿಗೆ ಯೋಚಿಸಲು ಸ್ವಲ್ಪ ವ್ಯವಧಾನವಿದ್ದಂತೆ ತೋರಿದರೂ ಗಮನಭಂಜನೆಯೇ ಆತನಿಗೆ ಕಷ್ಟವಾಗುವ; ಉಳಿದವರಿಗೆ ಇಷ್ಟವಾಗುವ ಘಟ್ಟಗಳು. ನಿಷೇಧಾಕ್ಷರೀ, ಸಮಸ್ಯೆ ಮತ್ತು ದತ್ತಪದಿಗಳು ಅಪ್ರಸ್ತುತಪ್ರಸಂಗವನ್ನು ನಿಭಾಯಿಸುತ್ತಾ ಮಾಡುವ ಸವ್ಯಸಾಚಿತ್ವ, ಆದರೆ ಆಶುಪದ್ಯರಚನೆ ಹಾಗಲ್ಲ. ಪೂರ್ಣವಾಗಿ ಒಂದೇ ಸಂದರ್ಭದಲ್ಲಿ ರಚಿಸಿ ಒಪ್ಪಿಸುವಂಥಾದ್ದು.

ಆಶುಕವಿತ್ವಕ್ಕೆ, ಆಶುಕವಿಗಳಿಗೆ ಹೆಚ್ಚಿನ ಮನ್ನಣೆಯಿದ್ದು, ಆ ಪ್ರಕ್ರಿಯೆಯೇ ಅವಧಾನದ ಮೂಲಸ್ವರೂಪವೆನ್ನಬಹುದು. ಸಂಸ್ಕೃತಭಾಷೆ ಆಶುಪದ್ಯಗಳ ಗಣಿಯಾದರೆ, ತೆಲುಗುಭಾಷೆ ಚಾಟುಪದ್ಯಗಳ ನಿಧಿ. ಅಲ್ಲೇ ಅವಧಾನಪ್ರಕ್ರಿಯೆಗೆ ಹುಲುಸುಬೆಳೆ. ಕನ್ನಡಸಾಹಿತ್ಯದಲ್ಲಿ ಕಂತಿ–ಹಂಪರ ಸಮಸ್ಯಾಪೂರಣ ಚಮತ್ಕಾರೋಕ್ತಿಗಳು ಸೂಚಿಸುವುದು ಈ ಧಾಟಿಯನ್ನೇ.

ಧಾರಣಾಶಕ್ತಿಯ ಪ್ರೇರಣಕಾರಣಗಳು :

ಮೇಧಾಶಕ್ತಿ, ಧಾರಣಾಶಕ್ತಿ, ಏಕಸಂಧಾಗ್ರಹಣಶಕ್ತಿ ಅವಧಾನಿಯ ಶಕ್ತಿತ್ರಯಗಳು. ಧೀರ್ಧಾರಣಾವತೀಮೇಧಾ – ಎನ್ನುತ್ತದೆ ಅಮರಕೋಶ. ತಾನು ಕಂಡ, ಕೇಳಿದ, ಓದಿದ, ತಿಳಿದ ಎಲ್ಲಾ ವಿಷಯಗಳೂ ಒಂದು ವಿಚಾರಕ್ಕೆ ಸಂಗತವಾಗಿ, ಬೇಕೆಂದಾಗ ಗಣಕಯಂತ್ರದಲ್ಲಿನ ಗುಂಡಿಯೊತ್ತಿದೊಡನೆ ಅಗತ್ಯವಾದ ಕಡತಗಳು ಬಿಚ್ಚಿಕೊಳ್ಳುವಂತೆ, ತಕ್ಷಣ ನೆನಪಿಗೆ ಬರುವ ಜ್ಞಾನವಶವರ್ತಿನಿಯೇ ಮೇಧಾಶಕ್ತಿ.

ಧಾರಣೆಗೆ ಸಹಾಯಕವಾಗುವ ಅಂಶ ಅಪ್ರಯತ್ನಪೂರ್ವಕವಾಗಿ ತಕ್ಷಣ ಹೊಳೆದ ಶಬ್ದಗಳನ್ನು ಪ್ರಯತ್ನಪೂರ್ವಕವಾಗಿ ಸಂಸ್ಕರಿಸಿ ಮನಸ್ಸಿನಲ್ಲಿ ನಿಲ್ಲಿಸಿಕೊಳ್ಳುವ ಉಪಾಯ. ನಾವು ಎಂದೋ ಓದಿದ ಪುಸ್ತಕದಲ್ಲಿನ ವಿಷಯ ನೆನೆಪಿಗೆ ಬಂದಾಗ ಆ ಭಾಗವಿರುವ ಪುಸ್ತಕದ ಪುಟದ ಚಿತ್ರ ಮನಸ್ಸಿನಲ್ಲಿ ಮೂಡುತ್ತದೆ. ಹಾಗೆಯೇ ಪೃಚ್ಛಕನ ಮುಖ

ನೋಡಿದೊಡನೆ, ಅವನ ವಿಭಾಗ, ಕೇಳಿದ ಪ್ರಶ್ನೆ, ತತ್ಸಂಬಂಧಿತ ವಿಷಯಗಳು ನೆನಪಿಗೆ ಬರುವಂತೆ ಮಾಡುವ ಮುಖಮಾತೃಕೋಪಾಯ ಸಹಾಯಕ.

ರಚಿಸಿದ್ದನ್ನು ನೆನಪಿನಲ್ಲಿಟ್ಟು ಕೊನೆಯಲ್ಲಿ ಒಪ್ಪಿಸುವ ಧಾರಣಾಶಕ್ತಿಗೆ ಐದು ಅಂಗಗಳು. ವಸ್ತು, ಕೋಶ, ದ್ರವ್ಯ, ಲಕ್ಷಣ ಮತ್ತು ಹೇತು. ಕವಿತೆಯ ವಸ್ತು (ಉದಾಹರಣೆಗೆ ಪುರಾಣೇತಿಹಾಸಗಳು), ಕೋಶ (ವ್ಯಕ್ತಿಯ ಹೆಸರು ಶಬ್ದಜ್ಞಾನ), ದ್ರವ್ಯ (ಅರ್ಜುನನಿಗೆ ಪಾಶುಪತಾಸ್ತ್ರವೊದಗಿದ ಸಂದರ್ಭ), ಲಕ್ಷಣ (ಆ ವಿಷಯವನ್ನು ಹೇಳಲು ಬಳಸುವ ವೃತ್ತಕಂದಗಳ ಛಂದಸ್ಸಿನ ನಿಯಮಗಳ ಜ್ಞಾನ) ಮತ್ತು ಹೇತು (ಪೃಚ್ಛಕ ಕೇಳಿದ ಪ್ರಶ್ನೆಯ ಮೂಲ). ಮನಸ್ಸಿನ ಒಂದು ಲಕ್ಷಣವ್ಯವಧಿಯಿಂದಾಗುವ ಧಾರಣಸ್ಥಿರತೆ. ಬಗೆಹರಿಸಲು ಕ್ಲಿಷ್ಟವಾದ ಅಂಶವನ್ನು ಒಂದು ಕ್ಷಣ ಬಿಟ್ಟು ಮತ್ತೆ ಆಲೋಚಿಸಿದರೆ ಸರಿಯಾದ ಸಮಾಧಾನ ದೊರೆಯುವುದೇ ಅದರ ಪ್ರಾಕೃತಿಕ ಲಕ್ಷಣ.

ಅವಧಾನವಿದ್ಯೆ ಪೂರ್ವಜನ್ಮಸಂಸ್ಕಾರವೋ, ವಂಶಪಾರಂಪರಾಪ್ರಾಪ್ತಿಯೋ, ಗುರುಮುಖೇನ ಕಲಿತರೆ ಬರುವ ವಿದ್ಯೆಯೋ ಎಂದು ಹುಬ್ಬೇರಿಸಿ ಬೆರಗಾದರೆ ಬುದ್ಧಿ ಆವಿಯಾಗುವುದಷ್ಟೆ. ಅವಧಾನವಿದ್ಯೆ ಗುರುಮುಖದಿಂದ ಲಭ್ಯವಾಗುವುದಲ್ಲ, ವಂಶಪಾರಂಪರಾಪ್ರಾಪ್ಯವೂ ಅಲ್ಲ. ಗಣೇಶರು ಹೇಳುವಂತೆ ಅದೊಂದು 'ಇಷ್ಟವಿದ್ದು ಕಷ್ಟಪಟ್ಟರೆ ಲಭ್ಯವಾಗುವ ವಿದ್ಯೆ'. ಅಭ್ಯಾಸದಿಂದ ಕ್ರಮವಾಗಿ ಸಭಾಕಂಪ ತಗ್ಗಿ, ಮನಃಸ್ವಾಸ್ಥ್ಯವೇರ್ಪಟ್ಟು, ನೆಮ್ಮದಿಯಾಗಿ ಅವಧಾನಕಾರ್ಯ ನಿರ್ವಹಿಸಿಬಹುದು ಎನ್ನುತ್ತಾರೆ ಸಿ.ವಿ.ಸುಬ್ಬನ್ನ. ಆಸಕ್ತಿಯಿದ್ದರೆ ವಿಷಯಗಳು ನೆನಪಿನಲ್ಲಿ ಉಳಿಯುತ್ತವೆ. ವಿದ್ಯಾರ್ಥಿಗಳಿಗೆ ಪಾಠ್ಯವಿಷಯಗಳು ನೆನಪಿರದೆ ಕ್ರಿಕೆಟ್, ಸಿನಿಮಾ ಮತ್ತು ಇತರ ವಿಷಯಗಳು ಖಚಿತವಾಗಿ ನೆನೆಪಿನಲ್ಲುಳಿಯಲು ಇದೇ ಕಾರಣ.

ಶತಾವಧಾನ :

ನೂರು ಮಂದಿ ಪೃಚ್ಛಕರು ನೂರು ವಿಷಯಗಳನ್ನು ಕುರಿತ ಪದ್ಯಗಳನ್ನು ಕೇಳಿದಾಗ, ಮೊದಲು ಒಂದೊಂದೇ ಪಾದವನ್ನು ಆಯಾ ಪೃಚ್ಛಕರಿಗೆ ಹೇಳುತ್ತಾ, ಮತ್ತೆ ಮೊದಲಿಗೆ ಬಂದು ಎರಡನೆಯ ಪಾದವನ್ನು ಮಾತ್ರ ಪೂರ್ತಿ ಮಾಡಿ, ಮತ್ತೆ ಬಂದು ಮೂರನೆಯ ಪಾದವನ್ನೂ ನಂತರ ನಾಲ್ಕನೆಯ ಪಾದವನ್ನೂ ಪೂರ್ತಿ ಮಾಡಿ, ಒಂದೊಂದೇ ಪದ್ಯವನ್ನು ಒಪ್ಪಿಸುವುದು. ಪೃಚ್ಛಕರೂ, ವರ್ಣ್ಯಗಳ ಪೂರ್ವಾಪರಗಳೂ ಸಂಖ್ಯೆ ಮೊದಲಾದವು ಪದ್ಯಶರೀರವೆಂಬುವ ಹಸುಗಳನ್ನು ಕಟ್ಟುವ ಗೂಟವಾಗಬೇಕು. ವ್ಯಕ್ತಿಯನ್ನು ಮರೆತರೆ ಅಣುಚಿವಾವರ್ಣ್ಯಗಳ ಪೂರ್ವಾಪರಗಳನ್ನು ಮರೆತರೆ ನೆನಪಿನ ಕುದುರೆ ಅರಣ್ಯಪ್ರವೇಶ ಮಾಡಿ ಕಳೆದುಹೋಗಬಹುದು ಎನ್ನುತ್ತಾನೆ ಭಟ್ಟುಮೂರ್ತಿಯೆಂಬ ಕವಿ. ಆಗ ಏಕಾಗ್ರತೆಯೇ ಶರಣ್ಯ. ಆಶುವಾಗಿ ಹೇಳಿದ ಪದ್ಯಗಳಲ್ಲಿ ಕಾವ್ಯಾಂಶ ಸ್ವಲ್ಪ ಕಡಿಮೆಯಾದರೂ ಸಭಾರಂಜನೆಗೇ ಅಲ್ಲಿ ಅಗ್ರತಾಂಬೂಲ.

ಶತಾವಧಾನ ವಿಕಾಸ :

ಶತಾವಧಾನ, ಆಂಧ್ರದಲ್ಲಿ ರೂಪುಗೊಂಡ ವಿಲಕ್ಷಣ ವಿದ್ಯಾವಿಧಾನ. ಅಲ್ಲಿನ ಪ್ರತಾಪರುದ್ರನ ಕಾಲದ (1295–1323) ಕೊಲಚೆಲ್ಮ ಮಲ್ಲಿನಾಥ ಶತಾವಧಾನ ಪ್ರಕ್ರಿಯೆಯ ಮೂಲಪುರುಷನೆಂದು ಹೇಳುತ್ತಾರೆ. ಶತಲೇಖಿನೀಪದ್ಯಸಂಧಾನಧೌರೇಯ ಭಟ್ಟುಮೂರ್ತಿ, ಶತಲೇಖಿನ್ಯವಧಾನಪದ್ಯರಚನಾಸಂಧಾಸುರತ್ರಾಣ ಎಂಬ ಬಿರುದಿನ ಚರಿಕೊಂಡ ಧರ್ಮನ್ನ, ಶತಘಂಟಾವಧಾನಪ್ರಸಿದ್ಧಸಾಹಿತ್ಯಸಾರಸ್ವತಾಶುಕವಿತಾಷ್ಟಭಾಷಾವಿಶೇಷ ಮರಿಂಗಂಟಿ ಸಿಂಗರಾಚಾರ್ಯ ಮುಂತಾದ ಶತಾವಧಾನಿಗಳ ಕಾಲಮಾನ ಸುಮಾರು 1500–1580. ಮಧುರವಾಣಿ, ರಾಮಭದ್ರಾಂಬ (1600–1630), ಪಸುಪುಲೇಟಿ ಗಂಗಮ್ಮ, ಕೃಷ್ಣಾಜಮ್ಮ (1633–1678) ಶತಾವಧಾನದಲ್ಲಿ ಪ್ರಖ್ಯಾತರಾದ ಸಾಹಿತ್ಯಶಾರದೆಯರು. ಆಗಿನ ಶತಾವಧಾನವಿದ್ಯೆ ನೂರುಪದ್ಯಗಳನ್ನು ಹೇಳುವುದಾಗಿತ್ತು. ಈ ರೀತಿಯಲ್ಲಿ ಒಂದು ಸಂಸ್ಕೃತ ಅವಧಾನ ಮಾಡಿದ ದಾಕ್ಷಿಣಾತ್ಯ ತಾತಾಚಾರ್ಯ ಎಂಬುವರನ್ನು, ನೂರುಪದ್ಯಗಳನ್ನು ಹೇಳಿದಾಕ್ಷಣಕ್ಕೆ

ಅದು ಶತಾವಧಾನವಾಗುವುದಿಲ್ಲ ಎಂದು ತಿರುಪತಿ ವೇಂಕಟೇಶ್ವರಕವಿಗಳು ಪ್ರಶ್ನಿಸಿ ಅದು ಅಷ್ಟಾವಧಾನದ ವಿಸ್ತರಣ ಮಾತ್ರ ಎಂದು, ಶತಾವಧಾನಲಕ್ಷಣವನ್ನು ಅವರೇ ಸ್ಥಾಪಿಸಿಕೊಂಡರು.

ಶತಾವಧಾನವಿಧಾನ :

ಶತಾವಧಾನಸಭೆಯಲ್ಲಿ ನೂರ್ವರು ಪೃಚ್ಛಕರು ಉಪಸ್ಥಿತರಾಗಿದ್ದು, ಒಬ್ಬರ ನಂತರ ಒಬ್ಬರು ತಮ್ಮ ಪ್ರಶ್ನೆಗಳನ್ನು ಕೇಳುವರು. ಅಲ್ಲಿ ವರ್ಣನೆ, ಸಮಸ್ಯೆ ಮತ್ತು ದತ್ತಪದಿಗಳಿರುತ್ತವೆ. ಎಲ್ಲ ಪ್ರಶ್ನೆಗಳಿಗೂ ಉತ್ತರಪದ್ಯಗಳನ್ನು ಅವಧಾನಿ ಆಶುವಾಗಿ ಹೇಳುತ್ತಾನೆ. ಪದ್ಯಗಳನ್ನು ಒಂದೇ ಕಂತಿನಲ್ಲಿ ಹೇಳದೆ ಕ್ರಮವಾಗಿ ನಾಲ್ಕು ಪಾದಗಳನ್ನು ನಾಲ್ಕು ಆವೃತ್ತಿಗಳಲ್ಲಿ ಹೇಳುತ್ತಾನೆ. ಪೃಚ್ಛಕರ ಮಾತುಗಳೆಲ್ಲಾ ಮೊದಲ ಆವೃತ್ತಿಗೆ ಮುಗಿದು, ಉಳಿದಂತೆಲ್ಲ ಅವಧಾನಿ ಹೇಳುವ ಪದ್ಯದ ಪಾದಗಳನ್ನು ಬರೆದುಕೊಳ್ಳುವುದಷ್ಟೇ ಅವರ ಕೆಲಸ. ಎಲ್ಲವನ್ನೂ ಪೂರ್ತಿಮಾಡಿ ಸಕ್ರಮವಾಗಿ ಒಪ್ಪಿಸುವ ಬಾಧ್ಯತೆ ಶತಾವಧಾನಿಯದು. ಸಂಪೂರ್ಣಶತಾವಧಾನ ಮುಗಿಯಲು ಮೂರುನಾಲ್ಕು ದಿನದ ಕಾಲಾವಧಿ ಬೇಕು. ದಿನಕ್ಕೊಂದು ಚರಣದಂತೆ ನಾಲ್ಕನೆಯ ದಿನಕ್ಕೆ ನೂರು ಪದ್ಯಗಳ ಧಾರಾ, ಧಾರಣ ಮುಗಿಯುತ್ತದೆ. ಕೊನೆಯ ದಿನ ಪದ್ಯಗಳನ್ನು ಒಪ್ಪಿಸುವಿಕೆ, ಸನ್ಮಾನ, ಸಮಾರೋಪ ಮುಂತಾದ ಕಾರ್ಯಕ್ರಮಗಳಿಂದ ಶತಾವಧಾನಕ್ಕೆ ತೆರೆ.

ಶತಾವಧಾನದ ಮೊದಲ ದಿನದಲ್ಲಿ ಅವಧಾನಿ ಒಬ್ಬೊಬ್ಬ ಪೃಚ್ಛಕನಿಗೆ ಅಭಿಮುಖನಾಗಿ, ಪ್ರಶ್ನೆಗಳನ್ನು ಗ್ರಹಿಸಿ, ಅಗತ್ಯವಿದ್ದರೆ ವಿವರಣೆ ಬಯಸಿ, ಅಸಂಗತವಾದರೆ ಸವರಣೆ ಸೂಚಿಸುತ್ತಾನೆ. ಆಂಧ್ರಸುಅವಧಾನಗಳಲ್ಲಿ ಚಿತ್ರಕವಿತ್ವದಂಥ ಕ್ಲಿಷ್ಟವಾದ ಅಂಗವಿಲ್ಲ. ಅದನ್ನು ರೂಢಿಗೆ ತಂದವರು ಶತಾವಧಾನಿ ರಾ.ಗಣೇಶರೇ. ತೆಲುಗಿನ ಶತಾವಧಾನ ಸಂದರ್ಭದಲ್ಲಿ, ಚಿತ್ರಕವಿತೆಗಳಂಥ ಪ್ರಶ್ನೆಗಳಿದ್ದರೆ ಶತಾವಧಾನಿ ಮೊದಲನೆಯ ದಿನವೇ ಅವನ್ನು ತೊಲಗಿಸಿಕೊಳ್ಳುತ್ತಾನೆ. ಶತಾವಧಾನದ ಎರಡನೆಯ ದಿನ ಗಂಡಾಂತರಗಳ ದಿನ. ಅವಧಾನಿಗೆ ಆ ಗಂಡಾಂತರಗಳಿಂದ ಪಾರಾಗಲು ಧಾರಣಾಶಕ್ತಿಯೇ ಏಕೈಕ ಸಾಧನ. ಪೃಚ್ಛಕನ ಮುಖವನ್ನು ನೋಡಿದೊಡನೆ ಆತ ಯಾವ ಪ್ರಶ್ನೆ ಕೇಳಿದ್ದ, ಅದಕ್ಕೆ ತಾನು ಹಿಂದಿನ ದಿನ ನೀಡಿದ ಪದ್ಯದ ಮೊದಲನೆಯ ಪಾದ ಯಾವುದು ಎಂಬುದು ನೆನಪಿಗೆ ಬರಬೇಕು. ನಂತರ ಎರಡನೆಯ ಪಾದವನ್ನು ಹೇಳಬೇಕು. ಇಷ್ಟಾದರೆ ಶತಾವಧಾನಿಗೆ ವಿಜಯ ಸಂದಂತೆಯೇ. ಮೂರನೆಯ ಹಾಗು ನಾಲ್ಕನೆಯ ದಿನದಂದು ಅನಾಯಾಸಕಾಲಕ್ಷೇಪವೇ. ಅವಧಾನಿಗೆ ಪದ್ಯಾಂಶಗಳ ಧಾರಣೆ ಸ್ಥಿರಪಟ್ಟು, ಪದ್ಯಪದಾರ್ಥಗಳು ಸಿದ್ಧವಾಗಿ ಬಡಿಸುವ ಕೆಲಸವೊಂದೇ ಉಳಿದಿರುತ್ತದೆ. ಶತಾವಧಾನವನ್ನು ಮೂರು ದಿನದಲ್ಲೇ ಮುಗಿಸುವವರು ಮೊದಲನೆಯ ಮತ್ತು ಎರಡನೆಯ ದಿನ ಒಂದೊಂದು ಪಾದಗಳನ್ನು ಹೇಳಿ, ಮೂರನೆಯ ದಿನ ಉಳಿದ ಎರಡು ಪಾದಗಳನ್ನು ಹೇಳಿ, ಆಗಲೇ ಪದ್ಯಗಳನ್ನು ಒಪ್ಪಿಸಿ ಮುಗಿಸುವ ಪರಿಪಾಠವಿದೆ. ಆಂಧ್ರದ ವೇಂಕಟ ರಾಮಕೃಷ್ಣಕವಿ "ಅತ್ಯದ್ಭುತಶತಾವಧಾನ" ವೆಂಬ ನೂತನ ಪ್ರಕ್ರಿಯೆಯನ್ನು ಅವಲಂಬಿಸಿ ನಾಲ್ಕುಘಂಟೆಗಳ ಅವಧಿಯಲ್ಲಿ ಪದ್ಯಗಳನ್ನೆಲ್ಲ ಒಂದೇ ಬಾರಿಗೆ ಹೇಳಿದ ದಾಖಲೆಯೂ ಉಂಟು. ತಿರುಪತಿ ವೇಂಕಟೇಶ್ವರ ಕವಿದ್ವಯರು ಅವರ ಮೊದಲ ಶತಾವಧಾನವನ್ನು ಕಾಕಿನಾಡದಲ್ಲಿ ಮಾಡಿ, ಪ್ರಥಮದಿನದಂದು ಪ್ರಥಮಪಾದವನ್ನು ನೂರುಮಂದಿ ಪೃಚ್ಛಕರಿಗೆ ಹೇಳಿ ರಾತ್ರಿ ಮನೆಗೆ ಹೊರಡಲು ಸಿದ್ಧರಾದಾಗ, ಅವರು ಮನೆಗೆ ತೆರಳಿ ಮತ್ತೆ ಪದ್ಯಗಳನ್ನು ನೆನಪಿಸಿಕೊಂಡು ಪೂರ್ತಿಮಾಡಿಕೊಂಡು ಬರುವ ಸಾಧ್ಯತೆ ಇದೆ, ಆದ್ದರಿಂದ ಕೆಲವು ಪದ್ಯಗಳನ್ನು ಮಧ್ಯಮಧ್ಯದಲ್ಲಿ ಹೇಳಿ ಎಂದು ಬಲವಂತ ಮಾಡಿ ಕೂಡಿಸಿದರಂತೆ. "ಅಂತೇಯೇ ಸರಿ ಎನ್ನುತ್ತಾ, ಸಭಾಸದರನ್ನು ರಂಜಿಸಿ, ಹದಿನೈದನೆಯ, ಹತ್ತು, ಇಪ್ಪತ್ತೊಂದು, ಮೂರು, ನೂರು, ಹದಿನಾಲ್ಕು, ತೊಂಬತ್ತು, ಎಂಬತ್ತಾರನೆಯ ಪದ್ಯಗಳನ್ನು ತುದಿಮೊದಲಿಲ್ಲದೆ ಹೇಳಿ ಮನೆಗೆ ಹೋದರಂತೆ" (ಜಾತಕಚರ್ಯ)

ಅವಧಾನದ ಮುಖ್ಯಾಂಗಗಳು :

ನಿಷೇಧಾಕ್ಷರೀ : ಶ್ರೀರಾಮಪಟ್ಟಾಭಿಷೇಕವನ್ನು ಒಂದು ಕಂದಪದ್ಯದಲ್ಲಿ ವರ್ಣಿಸಿ ಎಂದು ನಿಷೇಧಾಕ್ಷರಪೃಚ್ಛಕನು ಕೇಳಿ, ಮೊದಲ ಅಕ್ಷರ 'ರ' ನಿಷೇಧವೆಂದಾಗ. ಅವಧಾನಿ "ಶ್ರೀ" ಎಂದು ಮೊದಲಕ್ಷರವನ್ನು ಹೇಳಿದರೆ, ಪೃಚ್ಛಕ

ರಾಮ ಶಬ್ದ ಬರದಂತೆ ಮತ್ತೆ ರೇಫ ನಿಷೇಧ ಮಾಡುತ್ತಾನೆ. ಶ್ರೀಜ" ಎಂದಾಗ ಶ್ರೀಜನಕಜಾ ಎನ್ನಬಹುದೆಂದು 'ನ'ಕಾರ ನಿಷೇಧವಾಗುತ್ತದೆ. ಆಗ ಅವಧಾನಿ 'ಗ' ಎಂದು ಮೂರನೆಯ ಅಕ್ಷರವನ್ನು ಹೇಳಿದರೆ ಶ್ರೀಜಗನ್ ಅಥವಾ ಶ್ರೀಜಗತ್ ಆಗಬಹುದು. ಇಲ್ಲಿ ದ್ವಿರೂಪಕೋಶಜ್ಞಾನದಿಂದ, ಮರ ಹತ್ತುವವನು ಎರಡು ಕೊಂಬೆಗಳನ್ನು ಹಿಡಿದು, ಒಂದನ್ನು ಬಿಟ್ಟು ಸಾಗುವ ರೀತಿಯ ಸಹಾಯವಾಗುತ್ತದೆ. ನಿಷೇಧ ಹೀಗೆ ಸಾಗುತ್ತ 'ರಾಮ' ಶಬ್ದವೇ ಬರದಂತೆ ತಡೆಯುಂಟಾಗುತ್ತದೆ. ಇನ್ನು ಈ ಪದ್ಯ ಅಚ್ಚಕನ್ನಡದಲ್ಲೇ ಇರಬೇಕೆಂಬ ನಿಯಮವನ್ನು ವಿಧಿಸಿದರೆ, ರಾಮ, ಜನಕಜಾರಮಣ, ಕೌಸಲ್ಯಾನಂದನ ಈ ಪದಗಳು ಬರುವಂತಿಲ್ಲ. ಆಗ ಅವಧಾನಿ ಪಂತಿದೇರನ ಮಗ ಎಂದು ಪದವನ್ನು ಸೃಷ್ಟಿಸಿ (ಹತ್ತು ತೇರಿನವನ, ದಶರಥನ ಮಗ) ಸಾಗಬೇಕಾಗುತ್ತದೆ. ಪ್ರತ್ಯಕ್ಷರನಿಷೇಧ ಯತಿ-ಪ್ರಾಸಗಳಿಗೆ ಇಲ್ಲ. ಇದರಲ್ಲಿ ಒಂದು ಅಕ್ಷರಕ್ಕೆ, ಪದಕ್ಕೆ ಹತ್ತಾರು ಅರ್ಥಗಳಿರುತ್ತವೆ. ನಿಷೇಧಾಕ್ಷರ ಪದ್ಯರಚನಾಭ್ಯಾಸಕ್ಕೆ ಅನುವಾಗುವ ಸಾಮಗ್ರಿ, ಏಕಾಕ್ಷರ ನಿಘಂಟು. ಅದೇ ರೀತಿ ಬಹ್ವರ್ಥಾಕ್ಷರಗಳು ಪದ್ಯರಚನೆಗೆ ಸಹಾಯಕ. ಪದಸಂಧಿ ಅವಧಾನಿಗೆ ಮಂತ್ರದಂಡವಿದ್ದಂತೆ. ಹೀಗೆಯೇ, ಅನ್ಯಾರ್ಥಭ್ರಾಂತಿಕೃತ್ಪದಗಳು ಮತ್ತು ಶಬ್ದಚಮತ್ಕಾರ ನಿಷೇಧಾಕ್ಷರಿಗೆ ಸಹಾಯಕ. ನಿಷೇಧಾಕ್ಷರಪೃಚ್ಛಕನಿಗೆ ಛಂದೋಲಕ್ಷಣ, ಶಬ್ದಜ್ಞಾನವಿದ್ದು, ತಾನು ನಾನಾ ಪುರಾಣ ಕಥಾ ನಿಷ್ಣಾತನಾಗಿರಬೇಕು. ಪ್ರಬಲವಾದ ಪದಸಂಪತ್ತು, ವ್ಯುತ್ಪತ್ತಿ ಮತ್ತು ಪ್ರತಿಭೆಗಳಿರದೆ ಅಕ್ಷರಾಕ್ಷರಕ್ಕೂ ಮಾಡಬೇಕಾದ ನಿಷೇಧಾಕ್ಷರವಿಭಾಗದ ನಿರ್ವಹಣೆ ಅಸಾಧ್ಯ.

ಸಮಸ್ಯೆ :

ಸಮಸ್ಯೆಯ ರಹಸ್ಯಭೇದನದಿಂದ ಅರ್ಥವನ್ನು ಸಾಧಿಸಿ ಅದನ್ನು ಯುಕ್ತವಾದ ಛಂದಸ್ಸಿನಲ್ಲಿ ನಾಲ್ಕು ಕಂತಿನಲ್ಲಿ ಪೂರೈಸುವ ಪ್ರಕ್ರಿಯೆ 'ಸಮಸ್ಯಾಪೂರಣ'. ಇದೊಂದು ಪುರಾತನಸಾಹಿತ್ಯವಿನೋದ. ಅಸಂಗತಾಶ್ಲೀಲಾರ್ಥವಾದ ಸಮಸ್ಯೆಗಳು ಮತ್ತು ದುಷ್ಕರಪ್ರಾಸಸಮಸ್ಯೆಗಳು ಹೀಗೆ ವಿವಿಧ ರೀತಿಗಳುಂಟು. "ವಾಣೀಪುತ್ರನು ಮಾಧವಾತ್ಮಜನವನ್ದ್ವ್ಯುಮಾತುರನ್ನಾನೆಲ್ಕೆ" (ಸರಸ್ವತೀಕುಮಾರನೂ, ವಿಷ್ಣುವಿನಮಗನೂ ವಿನಾಯಕನಲ್ಲವೇ! ಎಂದು ಈ ಸಮಸ್ಯೆಯ ಅರ್ಥ). ಇದನ್ನು ಅರ್ಥ ಬರುವಂತೆ ಅವಧಾನಿ ಬದಲಿಸಬೇಕಿದೆ. ಶರ್ವಾಣೀಪುತ್ರನು ಎಂದರೆ ಮೊದಲ ಪದ ಸರಿಯಾಯಿತು. ಇನ್ನು ಮಾಧವಾತ್ಮಜನವನ್ ಎಂಬುದನ್ನು ಹಿಂದಿನ ಅಕ್ಷರವನ್ನು ಒಡೆದು, ಶರ್ವಾಣೀಪುತ್ರನ್ ಉಮಾಧವಾತ್ಮಜನ್ ಎಂದು ಮಾಡಿದರೆ, ಶಿವನ ಮಗ ವಿನಾಯಕನೆಂಬ ಅರ್ಥ ಸ್ಪಷ್ಟ. ಕೆಲವು ಸಮಸ್ಯೆಗಳು ಹೇಗೆ ಯೋಚಿಸಿದರೂ ಅಸಂಗತವಾಗಿದ್ದು ಅಲ್ಲಿ ಪದಗಳ ಅಕ್ಷರಗಳನ್ನು ಒಡೆದು ಅರ್ಥ ತರುವ ಯತ್ನ ಸಾಗದು. ಉದಾಹರಣೆಗೆ, "ಅನಿರುದ್ಧನು ನವಿಲನೇರಿ ದಾಟಿದ ಕಡಲಂ". ನವಿಲು ಷಣ್ಮುಖನ ವಾಹನ, ಕಡಲನ್ನು ದಾಟಿದ್ದು ಹನುಮ. ಮನ್ಮಥನ ಮಗನಾದ ಅನಿರುದ್ಧ ಎಂದೂ ಕಡಲು ದಾಟಿದ ಪ್ರಸಂಗವಿಲ್ಲ. ಮೂರೂ ಅಸಂಬದ್ಧಗಳೇ. ಇಂಥ ಸಂದರ್ಭಗಳಲ್ಲಿ ಕ್ರಮಾಲಂಕಾರವಿಧಾನದಿಂದ ಮೊದಲ ಮೂರು ಪಾದಗಳಲ್ಲಿ ಪ್ರಶ್ನೆಗಳನ್ನು ಹಾಕಿ ಸಮಸ್ಯೆಯ ಪಾದ ಉತ್ತರವಾಗುವಂತೆ ಮಾಡುವದೇ ದಾರಿ.ಮನ್ಮಥನ ಮಗನಾರು? ಷಣ್ಮುಖ ಯಾವ ವಾಹನದ ಮೇಲೆ ಹತ್ತಿ ಯುದ್ಧ ಮಾಡಿದ? ಹನುಮಂತ ಏನು ಮಾಡಿದ? ಈ ಪ್ರಶ್ನೆಗಳಿಗೆ ಉತ್ತರವೇ ಮೂರನೆಯ ಪಾದವಾಗುತ್ತದೆ.

ಮನಸಿಜನಂದನನಾವನ
ದನಿಯಂ ಷಣ್ಮುಖನದೇನನೇರುತ ಗೆಲ್ದನ್
ಹನುಮಂತನನೇಗೈದನು
ಅನಿರುದ್ಧನು, ನವಿಲನೇರಿ, ದಾಟಿದಕಡಲಂ

ಕೆಲವು ಪೃಚ್ಛಕರು ಅವಧಾನಿಯ ಪಾಂಡಿತ್ಯವನ್ನು ಪರೀಕ್ಷಿಸಲು ದುಷ್ಕರಪ್ರಾಸಗಳನ್ನು ಸಹ ಕೊಡುತ್ತಾರೆ. ಉದಾಹರಣೆಗೆ ವಾಚರ್ಲ ವೆಂಕನ್ನ ಅವಧಾನಿಗೆ ಪೃಚ್ಛಕ ನೀಡಿದ ಸಮಸ್ಯೆ ಇದು :ವಕ್ತ್ರಂಗಳ್ದಶಕಣ್ಣ ದ್ದೈದುಕರಗಳ್ಸಾಹಸ್ರವಯ್ಯರ್ಣಿಸಲ್. ಅವಧಾನಿಯ ಪೂರಣ:

ಈಕ್ತ್ರಾಪ್ರಾಸವು ಕಷ್ಟಮಾಗಿಹುದೆ? ನೀವೆಷ್ಟೆಷ್ಟು ಹಾರಾಡಿದರ್
ವಾಕ್ತ್ರಾಸಂಬದು ಸತ್ಕವೀಂದ್ರಪಥದೊಳ್ತಾನಿಲ್ಲವೈ ಪೇಳುವೆನ್
ದಿಕ್ತ್ರಾರಾತಿಗೆ ಪಾರ್ವತೀಶ್ವರನಿಗಂ ದಿಗ್ಮಪ್ರಭಾರಾಶಿಗಂ
ವಕ್ತ್ರಂಗಳ್ದಶಕಣ್ಣದೈದುಕರಗಳ್ಸಾಹಸ್ರವಯ್ವರ್ಣಿಸಲ್

(ಈ 'ಕ್ತ್ರಾ' ಪ್ರಾಸ ಕಷ್ಟವೆಂದು, ಅವಧಾನಿ ಸೋಲುವನೆಂದು ಹಾರಾಡುವಿರಾ! ಅವಧಾನಿಗೆ ವಾಕ್ತ್ರಾಸವೇ ಇಲ್ಲ. ರಾವಣ ದಶಮುಖ, ಶಿವ ಗಿರಿಜೆಯರಿಗೆ ಐದು ಕಣ್ಣುಗಳು ಮತ್ತು ಸೂರ್ಯನಿಗೆ ಸಹಸ್ರಕರಗಳು).

"ಖರಪಾದವ ಪಿಡಿಯೆ ಮುಕ್ತಿ ದೊರೆವುದು ನಿತ್ಯಂ"ಎಂಬ ವಿನೋದಾಸಂಗತ ಸಮಸ್ಯೆಗೆ ಅವಧಾನಿ ಕೀಲಕಾಕ್ಷರವಾದ "ಶೇ" ಸಂಯೋಜಿಸಿ ಶೇಖರ, ಶಶಿಶೇಖರ ಎಂದು ಮಾಡಿಕೊಂಡು,

ಅರುಣಜಟಾಧರಕುಂಜ
ಸ್ಫುರಚ್ಛಶಿಪ್ರಸವಗುಚ್ಛಸುರಭಿಳಕಕುಭಂ
ತರಭಕ್ತರಕ್ತ ಶಶಿಶೇ
ಖರಪಾದವ ಪಿಡಿಯೆ ಮುಕ್ತಿ ದೊರೆವುದುನಿತ್ಯಂ

ಎಂದು, ಪಾಂಡಿತ್ಯಪೂರ್ಣವಾದ ಪದ್ಯಸೃಷ್ಟಿ ನಡೆದುಹೋಗುತ್ತದೆ. ಹಾಸ್ಯ, ಚಮತ್ಕಾರ, ಅಶ್ಲೀಲ, ಅಸಂಭವಾದಿ ಅರ್ಥಗಳು ಮೇಲ್ನೋಟಕ್ಕೆ ಕಂಡರೂ ಸಮಸ್ಯೆಗಳನ್ನು ವಿಶೇಷಾರ್ಥಗರ್ಭಿತವಾಗಿ, ಸುಸಂಗತವಾಗಿ, ಸಭ್ಯವಾಗಿ ಪೂರಣಮಾಡಿ ರಂಜಿಸುವ ಈ ಅವಧಾನಾಂಗ ಅತ್ಯಾದರಣೀಯವಾಗಿ ಸರ್ವರಂಜಕವಾಗಿದೆ.

ದತ್ತಪದೀ

ಸಲಕ್ಷಣವಾದ ಪದ್ಯಗಳಿಗೆ ನಾಲ್ಕು ಪಾದಗಳು. ಪಾದಕ್ಕೊಂದರಂತೆ ಪೃಚ್ಛಕನು ಕೊಟ್ಟ ನಾಲ್ಕುಪದಗಳು ಯಾವ ಪದ್ಯದಲ್ಲಿ ಸೇರಿರುತ್ತದೋ ಆ ಪದ್ಯವೇ ದತ್ತಪದೀ.

ಡಾ॥ ಚೆರುವು ಸತ್ಯನಾರಾಯಣಶಾಸ್ತ್ರಿಗಳೆಂಬ ಅಪ್ರತಿಮ ಪ್ರತಿಭಾವಂತರು, ಮಹೋಪಾಸಕರು. ಸಂಸ್ಕೃತ ಮತ್ತು ತೆಲುಗು ಎರಡು ಭಾಷೆಗಳಲ್ಲಿ ಶತಾವಧಾನ ಮಾಡಿ ವಿಲೋಮಕ್ರಮದಲ್ಲಿ ಪೂರಣ ಮಾಡುತ್ತಿದ್ದರು. ಅತಿಕ್ಲಿಷ್ಟವಾದ ದತ್ತಪದಿಗಳ ನಿರ್ವಹಣೆಯಲ್ಲಿ ಅವರು ಸಿದ್ಧಹಸ್ತರೇ. ಆಂಧ್ರದ ವಾಗ್ದೇವಿಪೀಠವೆಂದು ಕರೆಸಿಕೊಳ್ಳುವ ಕೊವ್ವೂರಿನಲ್ಲಿ ನಡೆದ ಸಂಸ್ಕೃತ ಶತಾವಧಾನವೊಂದರಲ್ಲಿ ಅವರಿಗೆ ಈ ದತ್ತಪದಗಳನ್ನು ಕೊಟ್ಟು ರಾಮಾಯಣಾರ್ಥದಲ್ಲಿ ಒಂದು ಸಂಸ್ಕೃತಶ್ಲೋಕವನ್ನು ರಚಿಸಲು ಹೇಳಿದರು.

"ರೂಪ್ತೆರಾ" "ಮಸ್ತಾನಾ" "ಪ್ಯಾರ್ಮೆರಾ" "ದೀವಾನಾ".
ಅವರ ಅದ್ಭುತಾಶುಪೂರಣದ ಸೊಗಸಿದು:
ಗುರೂಪ್ತೇರಾಮಬೀಜಾರ್ಣೇ
ಸಮಸ್ತಾನಾಮಯಶ್ವಿತೀ।
ಆಪ್ಯಾರಮೇ ರಾಮಾಂಬೋಧೌ
ನದೀವಾನಾಕೃತಾ ಮತೌ॥

(ಗೂರೂಪ್ತೇ – (ಉಪ್ತ), ರಾಮಬೀಜಾರ್ಣೇ) ಗುರುವಿನಿಂದ ನಾಟಲ್ಪಟ್ಟ ರಾಮನಾಮ–ಬೀಜಾಕ್ಷರ–ಮಂತ್ರೋಪದೇಶವೆಂಬ ಸಮುದ್ರದಲ್ಲಿ ಮುಳುಗಿದರೆ (ಸಮಸ್ತ ಅನಾಮಯ (ಆಮಯ=ರೋಗ) ಶ್ವಿತೀ) ಎಲ್ಲಾ

ರೀತಿಯ ಸುಖ/ಆರೋಗ್ಯ ಪ್ರಾಪ್ತಿಯಾಗುತ್ತದೆ. (ಆಪ್ಯಾರಮೇ ರಾಮಾಂಬೋಧೌ) ಆ ಕಾರಣಕ್ಕಾಗಿ ನಾನು ಆ ರಾಮನೆಂಬ ಸಮುದ್ರದಲ್ಲಿ ರಮಿಸುತ್ತೇನೆ. (ನದೀ ಇವ ಅನಾಕೃತಾ ಮತೌ) ಆಗ ನದಿ ನನ್ನ ಆಕೃತಿಯನ್ನು ಕಳೆದುಕೊಂಡು ಸಾಗರವನ್ನು ಸೇರುವ ರೀತಿಯಲ್ಲಿ ರಾಮಸಾಗರದಲ್ಲಿ ವಿಲೀನನಾಗುತ್ತೇನೆ. ಇದೊಂದು ಅನಿತರಸಾಧ್ಯವಾದ ಅದ್ಭುತವಾದ ದತ್ತಪದಿ.

ಅಭ್ಯಾಸಿಗಳು ಪದ್ಯರಚನೆ ಮಾಡುವ ತಾಲೀಮಿಗಾಗಿ, ಇತ್ತೀಚೆಗೆ ನಮ್ಮ ಪದ್ಯಪಾನ ಬ್ಲಾಗಿನಲ್ಲಿ ಕೊಟ್ಟ ದತ್ತಪದಗಳು ಸರಸರ, ಸಿರಿಸಿರಿ, ಸುರುಸುರು, ಸೆರೆಸೆರೆ. ಈ ಪದಗಳನ್ನು ಬಳಸಿ, ಅರ್ಜುನ ಗಾಂಡೀವವನ್ನು ತ್ಯಜಿಸ ಸಂದರ್ಭವನ್ನು ಚಂಪಕಮಾಲೆಯಲ್ಲಿ ವಿಸ್ತರಿಸಿ ಎಂಬ ಸೂಚನೆಯಿತ್ತು. ಇಲ್ಲಿ ಕೊಟ್ಟ ನಾಲ್ಕುಪದಗಳೂ ಲಘ್ವಕ್ಷರಗಳು. ಚಂಪಕಮಾಲಾವೃತ್ತದಲ್ಲಿ ಈ ಪದಗಳನ್ನು ಬಳಸಬೇಕಾದರೆ, ಅವು ಪಾದಾದಿಯಲ್ಲಿಯೇ ಬರಬೇಕು. ಆ ಛಂದಸ್ಸಿನಲ್ಲ ನಾಲ್ಕು ಲಘುಗಳು ಮತ್ತೆಲ್ಲಿಯೂ ಬರುವುದಿಲ್ಲ. ಅದೇ ತೊಡಕು. ಕೊಟ್ಟಪದಗಳನ್ನು ಅದೇ ಅರ್ಥದಲ್ಲಿ ಬಳಸಿದರೆ ದೋಷಪೂರ್ಣವಾಗುವ ಸಂಭವವೇ ಹೆಚ್ಚು. ಆ ಪದಗಳನ್ನು ಬಳಸಿದ ಪೂರಣ ಈ ದತ್ತಪದೀ.

ಸರಸರಮಾವಿನೋದಿಹರಿಸಾರಥಿಯಾಗಿರೆ ತೇರನತ್ತಹಾ
ಯ್ಸಿರಿ, ಸಿರಿಮಲ್ಲಭೂಪಬಲನೋಳ್ಪೆನನಲ್, ರಥನಿಲ್ಲೆ ಮಧ್ಯದೊಳ್,
ಸೆರೆ ಸೆರೆಸಿಕ್ಕಿದಂತೆ, ನರ ಬಾಂಧವ ಮಿತ್ರ ಜನಾಳಿ ಮೋಹದಿಂ
ಸುರುಸುರುಳಾಗೆ ಬಲ್ಮೆ, ನಡುಗುತ್ತ ಬೆಮರ್ದನು ಬೀಳೆ ಗಾಂಡಿವಂ

(ತೇರನತ್ತಹಾಯ್ಸಿರಿ = ಉಭಯಸೈನದ ಮಧ್ಯಕ್ಕೆ ರಥವನ್ನು ನಡೆಸಿರಿ ಎಂದು ಅರ್ಜುನ ಹೇಳಿದಾಗ,

ಸೆರೆಸೆರೆಸಿಕ್ಕಿದಂತಾಗೆ = ಗಂಟಲಿನ ನರ ಸೇದುಹೋಗಿ, ಸೆರೆ (ಮದ್ಯ) ಸೆರೆಸಿಕ್ಕಿದಂತೆ(ಅಹಂಕಾರದ ಅಮಲಿಳಿವ ಮೊದಲಹಂತ), ಸೆರೆಯೇ ಸೆರೆಸಿಕ್ಕಿದಂತೆ ಎಂದೂ ಅರ್ಥಮಾಡಬಹುದು (ಒಬ್ಬನ ಸತ್ವಪರೀಕ್ಷೆ ಮೊದಲಬಾರಿಗೆ ತನ್ನ ಸಂಕುಚಿತ ವ್ಯಕ್ತಿಶಭಾವಬೀಜಗಳು ಬೆಂದು, ಅಹಂಕಾರದ ಅಮಲು ಇಳಿಯುವ criticality on crossroads ನ ಸತ್ಯದ ಅನುಭವ), ಸುರುಸುರುಳಾಗೆ = ಮುದುಡು, ಕುಂದು, ಬಾಡು)

ಇದು ಮನೆಯಲ್ಲಿ ಕುಳಿತು ಮಾಡಿದ ತೇಪೇದಾರಿ ಕೆಲಸವಾದ್ದರಿಂದ ಸರಿ ಹೋಯಿತು. ಅವಧಾನದಲ್ಲಾದರೆ ದೊಡ್ಡ ತೊಡಕೇ.

ಕೊಟ್ಟ ಪದಗಳನ್ನು ಸುಲಭವಾಗಿ ಮುರಿದು ಹಿಂದೆ ಅಥವಾ ಮುಂದಿನ ಅಕ್ಷರಗಳನ್ನು ಜೋಡಿಸಿ ಅರ್ಥವಂತವಾದ ಪದ್ಯವನ್ನು ರಚಿಸುವ ರೀತಿಯೊಂದಾದರೆ, ಅನ್ಯಭಾಷಾಪದಗಳನ್ನೋ,ಅರ್ಥಹೀನಕ್ಲಿಷ್ಟಪದಗಳನ್ನೋ ಕೊಟ್ಟು ಸಮಾಕಾಲೀನ ವಿಷಯಗಳನ್ನು ವರ್ಣಿಸಲು ಹೇಳುವ ಪದ್ಧತಿಯು ಸ್ವಲ್ಪ ಕಷ್ಟ ಸಾಧ್ಯ. ಟ್ರಂಕ್, ಬೆಲ್ಟ್, ಬೆಲ್ಲಿ, ಟಸ್ಕ್ ಎಂಬ ಪದಗಳನ್ನು ಕೊಟ್ಟು, ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಿದ ಶಾಸ್ತ್ರಿಗಳೊಬ್ಬರ ಸಂಕ್ರಾಂತಿಯ ಸವಿನೆನಪನ್ನು ವರ್ಣಿಸಿ ಎಂದಾಗ, ಈ ಆಂಗ್ಲಪದಗಳನ್ನು ಕನ್ನಡಕ್ಕೆ ತರುವ ಪ್ರಯಾಸವೇ ಮೊದಲ ಸವಾಲು.

ಬೆರಳಾಡೆ ರಂಗೋಲಿ ಕೊರಳಾಡೆ ಗಂಗೆತ್ತು ಬಳೆದನಿಗೆ ತನಿಯಾಗೆ ಗಂಟೆ ಗೆಜ್ಜೆ
ಹೊರಳಿ ಮಾಗಿದ ಫಸಲ ಹವಿಭೋಗಿಯುರಿಸವಿದು ಪೊನ್ನೂಸು ಪೊಂಗಲಾ ಕ್ರಾಂತಿ ಹೆಜ್ಜೆ
ಮರೆಯಾಯ್ತು ದೃಶ್ಯ ಭಟ್ರಂಕರೆಯೆ ಸೆಲ್ದನಿಯು ಬೆಳ್ಟಗರಿನುಣ್ಣೆ ಶಾಲ್ತಣ್ಣಗಾಯ್ತು
ಹೊರಗೆ ಛಳಿ ಕಸುಬೆಲ್ಲಿ? ದಶಕಗಳ ನೆನಪನುರುಟಸ್ಕಂದ ಸೋದರಂ ನೆನೆದುದಾಯ್ತು.

ಭಟ್ರಂಕರೆಯೆ = ಭಟ್ಟರನ್ನು ಕರೆಯಲು (ಟ್ರಂಕ್), ಬೆಳ್ಳಗರಿನ ಉಣ್ಣೆಶಾಲು (ಬೆಳ್ಟ್), ಕಸುಬು ಎಲ್ಲಿ? (ಬೆಲ್ಲಿ), ಉರುಟ (ದಪ್ಪಹೊಟ್ಟೆಯ) ಸ್ಕಂದಸೋದರ (ಷಣ್ಮುಖನ ಸೋದರ ಗಣಪತಿಶಾಸ್ತ್ರಿ) (ಟಸ್ಕ್). ಹೀಗೆ ದತ್ತಪದಿಯ ಪೂರಣಗಳಲ್ಲಿ ಉಪಾಯದಿಂದ ಪದಗಳ ಅಕ್ಷರಸೃಷ್ಟಿಯಾಗುತ್ತದೆ.

ಹೀಗೆ ಅನ್ಯಭಾಷಾಪದಗಳು, ಪೌನರುಕ್ತ್ಯಪದಗಳು (ನಡೆ, ನಡೆ, ನಡೆ, ನಡೆ), ಧ್ವನ್ಯನುಕರಣಪದಗಳು (ಸರ್ರನೆ, ಭುಸ್ಸೆನೆ, ಗಿರ್ರನೆ), ಸುಕರಪದಗಳು (ರಾಮ, ಭೀಮ, ಸೋಮ, ಗಾಮ), ದುಷ್ಕರಪದಗಳು (ಉಷ್ಟ್ರ, ಭಾಷ್ಟ್ರ, ರಾಷ್ಟ್ರ, ಲೋಷ್ಟ್ರ) ದತ್ತಪದಿಯ ಪೃಚ್ಛಕನ ಬತ್ತಳಿಕೆಯಲ್ಲಿದ್ದು ಅವನ್ನು ಬಳಸಿ ಪದ್ಯರಚನೆ ಸಾಧ್ಯವೆಂದು ತೋರಿಸಿ ಕೊಡಬೇಕು. ಅವಧಾನಿಯಾದರೋ ಸ್ವಾತಿಶಯದಿಂದ ಹೇಗೋ ದತ್ತಪದಿಯನ್ನು ಸಮರ್ಥವಾಗಿ ನಿರ್ವಹಿಸುತ್ತಾನೆ.

ಆಶು (ವರ್ಣನೆ) :

ವರ್ಣನೆ ಎಲ್ಲರಿಗೂ ಸಾಧ್ಯ ಲೋಕವ್ಯವಹಾರಗಳಲ್ಲಿ ಪತ್ರಿಕೆ, ದೂರದರ್ಶನಾದಿಗಳಲ್ಲಿ ದಿನನಿತ್ಯವರ್ಣನೆ ನಡೆದೇ ಇದೆ. ಅದು ಲೋಕಸಾಮಾನ್ಯವಾದ ಸಮಾಚಾರ. ಲೋಕೋತ್ತರವಾಗಿ ವರ್ಣಿತವಾದಾಗ ಕವಿತ್ವ, ಪೃಚ್ಛಕ ಕೇಳಿದ ವಿಷಯವನ್ನು ಇಚ್ಛಿತ ಛಂದಸ್ಸಿನಲ್ಲೇ ರಸಯುಕ್ತವಾಗಿ ವರ್ಣಿಸುವುದೇ ಪರೀಕ್ಷಾಸ್ಥಾನ. ದೈವಸ್ತುತಿಯ, ಪೌರಾಣಿಕವಿಷಯದ, ಭಾಷಾಂತರಿಸುವ, ಅಚ್ಚಕನ್ನಡದ, ತತ್ಕಾಲವಿಷಯಗಳ, ಪ್ರಕೃತಿಸಂಬಂಧಿತ– ಇತರ ವಿಷಯಗಳು ವರ್ಣನೆಗೆ ವಸ್ತುವಾಗ ಬಹುದು. ಅವಧಾನಿಯ ಕವಿಪ್ರತಿಭೆಗೆ ಆಶುವಿಭಾಗ ಒಂದು ಒರೆಗಲ್ಲು.

ಚಿತ್ರಕವಿತ್ವ :

ಚಿತ್ರಕವಿತ್ವವೆಂದರೆ ಚಿತ್ರತ್ವವಿರುವ ಕವಿತೆ. ಒಂದು ನಿಯತಕ್ರಮದಲ್ಲಿ ಅಕ್ಷರಗಳನ್ನು, ಪ್ರಯೋಗಿಸಿ, ಗತಿ, ಸ್ಥಾನ, ಹಾರ, ಮುರಜಾದಿ ಬಂಧಗಳ ರೂಪದಲ್ಲಿ ರಚಿಸುವ ಕಲಾಂಶ. ಚಿತ್ರಕವಿತೆಯಲ್ಲಿ ಪದ್ಯಪಾದಗಳು, ಅಥವಾ ಬೇರೊಂದು ಪದ್ಯ, ಪದ್ಯಗಳು ಗೂಢವಾಗಿದ್ದರೆ ಅದು ಗರ್ಭಕವಿತ್ವ, ಚಮತ್ಕಾರಯುಕ್ತವಾಗಿರುವ ದ್ವಿಸಂಧಾನ, ಅನುಲೋಮವಿಲೋಮ, ಒಂದೇ ಅಕ್ಷರ ಬಳಸಿದ ಬಂಧಕವಿತ್ವ ಮತ್ತು ಹಲವು ರೀತಿಯ ಪ್ರಬೇಧಗಳುಂಟು. ಕ್ಲಿಷ್ಟತರವಾದ ಈ ಪ್ರಕ್ರಿಯೆ ಕಾವ್ಯಗಳಲ್ಲಿ ಕಾಣಿಸಿಕೊಳ್ಳುತ್ತದೆಯೇ ಹೊರತು ಅವಧಾನದಲ್ಲಿ ಅಸಾಧ್ಯವೆಂದೇ ವರ್ಜಿತ. ಅವಧಾನಿಯೇ ಅವಧಾನಾಂಗಗಳನ್ನು ರೂಪಿಸಿಕೊಳ್ಳುವ ಚಾರಿತ್ರಿಕವಾದ ದಾಖಲೆಗಳಂತೆ, ತಮ್ಮ ಅವಧಾನಗಳಲ್ಲಿ ಚಿತ್ರಕವಿತೆಯನ್ನೂ ಸಂಖ್ಯಾಬಂಧವನ್ನೂ ಶತಾವಧಾನಿ ರಾ. ಗಣೇಶರು ಸೇರ್ಪಡಿಸಿ ರೂಢಿಸಿ ಕೊಂಡಿದ್ದಾರೆ. ಒಂದು ಅವಧಾನದಲ್ಲಿ ಅವರು ರಚಿಸಿದ ಚಿತ್ರಕವಿತ್ವ ಹೀಗಿದೆ.

ಪಾದಭ್ರಮಕ ಅಥವಾ ಪ್ರತಿಲೋಮಾನುಲೋಮಪಾದ ಎಂಬ ಗತಿಚಿತ್ರರಚನೆಯಲ್ಲಿ ಶಿವಸ್ತುತಿ.

ನಾದವಶಾ ಶಾವದನಾ
ಮಾದದಲನ ಮಾನಿ ದಾನಿ ಮಾನಲದ ದಮಾ
ಮೋದಕರ ಕಾರಕದ ಮೋ–
ಹಾದಾ ಪತಿ ರಸ ರಸಾರಸರತಿಪದಾಹಾ

(ನಾದವಶಾ= ನಾದಲೋಲ ಆಶಾವದನಾ – ಇಲ್ಲಿ ನಾದವಶಾ –ಶಾವದನಾ ಪದಗಳ ಮತ್ತು ಮಿಕ್ಕುಳಿದ ಪದಗಳಲ್ಲೂ ಬಿಂಬಸೃಷ್ಟಿ ಗಮನಾರ್ಹ, ಮಾದದಲನ = ಮದನಾಶಕ, ಮಾನಿ, ದಾನಿ, ಮಾನಲದ ದಮಾ = ಅಲ್ಪೇತರಸೌಭಾಗ್ಯದಾಯಕ ದಮಶಾಲಿ, ಮೋದಕರ = ಆನಂದಕಾರಕ ಕಾರಕದ = ಬ್ರಹ್ಮನಿರ್ಮಾಕ ಮೋಹಾದಾ = ಮೋಹವನ್ನು ನಿರ್ಮೂಲ ಮಾಡುವವನು, ಪತಿ(ಯೂ), ರಸ ರಸಾರಸರತಿಪದಾಹಾ = ಸಾರರೂಪಿ ಭೂಭೋಗಸಂಕೇತವಾದ (ರಸಾರಸ) ರತಿಪತಿಯನ್ನು ದಹಿಸುವ ಶಿವನ ಸ್ತುತಿ) (ಕನ್ನಡದಲ್ಲಿಅವಧಾನಕಲೆ – ಶತಾವಧಾನಿ ಡಾ॥ ರಾ.ಗಣೇಶ್)

ಅಪ್ರಸ್ತುತ ಪ್ರಸಂಗ :

ಅಪ್ರಸ್ತುತಪ್ರಸಂಗ ಅವಧಾನದಲ್ಲಿನ ಪ್ರಸ್ತುತವಾದ ಅಂಗ. ಉಳಿದ ಪೃಚ್ಛಕರಂತೆ ಈತ ತಮ್ಮ ವಿಭಾಗಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಕೇಳಿ ಸುಮ್ಮನಿರುವಂತಿಲ್ಲ. ಅಪ್ರಸ್ತುತ ಪ್ರಸಂಗ ಪೃಚ್ಛಕ ಅಡಿಗಡಿಗೆ ಅಡ್ಡಿಮಾಡುತ್ತ, ಅವಧಾನಿ ಏಕಾಗ್ರತೆಯಿಂದ ಪದ್ಯರಚನೆಗೆ ತುಸು ಯೋಚಿಸುತ್ತಿದ್ದಾಗಲೋ, ಪದ್ಯವನ್ನು ಹೇಳುತ್ತಿದ್ದಾಗಲೋ ಮಧ್ಯಪ್ರವೇಶಮಾಡಿ ತಂಟೆತೆಗೆದು ಪ್ರಶ್ನೆಗಳನ್ನು ಹಾಕುತ್ತಾನೆ. ಹಾಸ್ಯ, ವಿನೋದ, ಚಮತ್ಕಾರ, ಚೇಷ್ಟೆಗಳಿಂದ ಅಡ್ಡಿಮಾಡಿ ಅವಧಾನಿಯ ಗಮನವನ್ನು ಎತ್ತಲೋ ತಿರುಗಿಸುತ್ತಾನೆ. ಇಲ್ಲಿ ಶಾಸ್ತ್ರ-ಪುರಾಣ-ಪಾಂಡಿತ್ಯಪರೀಕ್ಷೆಗಳಿರುವುದಿಲ್ಲ. ಹಾಸ್ಯಪ್ರಧಾನ ಲೌಕಿಕಾಲೌಕಿಕ ಸಾಮಾನ್ಯ ಗೋಷ್ಠಿಯಷ್ಟೆ. ಅವಧಾನಿಯನ್ನು ಇಕ್ಕಟ್ಟಿಗೆ ಸಿಲುಕಿಸುವ ಅಂಶಗಳೇ ಇಲ್ಲಿ ಹೆಚ್ಚಾಗಿರುತ್ತವೆ. ಅವಧಾನಿಯ ವೈಯಕ್ತಿಕ ವಿಷಯಗಳು, ಮತ್ತೊಬ್ಬ ಪೃಚ್ಛಕರ ವಿಷಯವಾಗಬಹುದು, ಸಭ್ಯರು ತಲೆದಗ್ಗಿಸಿಕೊಳ್ಳುವಂತ ಅಸಭ್ಯಪ್ರಶ್ನೆಗಳೂ ಕೆಲವು ವೇಳೆ ಬರುವುದುಂಟು. ಇನ್ನು ರಾಜಕೀಯ, ಸಾಮಾಜಿಕ, ಮತೀಯ ವಿಚಾರಗಳನ್ನು ಕುರಿತು ಅವಹೇಳನಕಾರಿಯೋ ಎನ್ನಿಸುವ ಪ್ರಶ್ನೆಗಳಿರುತ್ತವೆ. ಅವಧಾನಿ ಇವೆಲ್ಲಕ್ಕೂ ಹಾಸ್ಯಪ್ರಧಾನವಾಗಿ, ಯಾರಿಗೂ ಮನನೋಯದಂತೆ, ವಿಷಯಸಮೀಕರಣಮಾಡಿ ಉತ್ತರಿಸುವುದೇ ವಿಶೇಷ. ಕೆಲವು ವೇಳೆ ಸಂಭಾಷಣೆ ಆಶುವಾಗಿ ಸಾಗುವುದುಂಟು. ಉದಾಹರಣೆಗೆ:

ಅವಧಾನಿ: ಪಾಪ ಬಳಲಿದಂತಿದೆ. ಸ್ವಲ್ಪ ನೀರು ಕುಡಿಯಿರಿ

ಅಪ್ರಸ್ತುತಪ್ರಸಂಗಪೃಚ್ಛಕ: ಕುಡಿಯುವ ಅಭ್ಯಾಸ ಅವಧಾನಿಗಳಿಗೇ ಸರಿ

ಅವ:ಆ ಅರ್ಥ ಯಾರಿಗೆ ಹೇಗೆ ಸ್ಫುರಿಸುತ್ತದೆಯೋ ಅವರಿಗೆ ಆ ಅಭ್ಯಾಸವಿದೆಯೆಂದಾಯ್ತು,

ನಾನು ಹೇಳಿದ್ದು ನೀರು ಕುಡಿಯಿರಿ ಎಂದು.

ಅಪ್ರ: ನಾವೇ ನಿಮಗೆ ನೀರು ಕುಡಿಸುತ್ತೇವೆ

ಅವ: ಕೊನೆಗೆ ತಿಳಿಯುತ್ತದೆ. ಯಾರು ನೀರು ಕುಡಿಯುತ್ತಾರೋ ನೋಡುವ

ಅಪ್ರ: ನಿಮ್ಮ ಮಾತು ವಕ್ರಗತಿಯಲ್ಲಿ ಸಾಗಿದೆ

ಅವ: ಹಾವಿನ ಗಮನವನ್ನು ಕಂಡು ಹಿಡಿಯಲು ಹಾವಿನಂತೆಯೇ ಸುಳಿದು ಸಾಗಬೇಕಲ್ಲವೇ

ಅಪ್ರ: ಮುಸಲ್ಮಾನರಿಗೆ ಜುಟ್ಟು ಇರುವುದಿಲ್ಲ. ಏಕೆ

ಅವ: ನೀವು ಸರಿಯಾಗಿ ಗಮನಿಸಿಲ್ಲ. ಅವರಿಗೂ ಜುಟ್ಟಿದೆ. ಅದೂ ತಲೆಯ ಹಿಂದೆ ಓಲಾಡುತ್ತಿರುತ್ತದೆ. ಟೋಪಿಯ ಹಿಂದೆ !

ಅಪ್ರಸ್ತುತಪ್ರಸಂಗಿಯ ಪ್ರಶ್ನೆಗಳಲ್ಲಿ ಕೆಲವು ಸ್ವಾರಸ್ಯಕರವಾದ, ಪೂರ್ವಸಿದ್ಧತೆಯಿಂದ ಮಾಡಿಕೊಂಡು ಬಂದ ಪ್ರಶ್ನೆಗಳಿರುತ್ತವೆ. ಸಭಾಸದರಿಂದಲೂ ಆತ ಪ್ರಶ್ನೆಗಳನ್ನು ಪಡೆದು, ಅವನ್ನು ಶೋಧಿಸಿ, ಸ್ವಾರಸ್ಯವಾದವುಗಳನ್ನು ವಿಂಗಡಿಸಿ ಕೊಳ್ಳುತ್ತಾನೆ. ಸಂದರ್ಭಾನುಸಾರವಾಗಿ, ಆಶುವಾಗಿ ಪ್ರಶ್ನೆಗಳನ್ನು ಕೇಳುವುದು ಪೃಚ್ಛಕನ ಪ್ರತಿಭೆಯ ಮೇಲೆ ಅವಲಂಬಿತ. ಅಪ್ರಸ್ತುತಪ್ರಸಂಗದಲ್ಲಿ ಅವಧಾನಿ, ತನ್ನ ವಾಕ್ಚಾತುರ್ಯವನ್ನು ತೋರಿಸುತ್ತಾ ಬೆಳಸಿಕೊಂಡು ಹೋದರೆ ಕಾಲಹರಣವೇ. ಒಂದು ಚಿಕ್ಕ ವಾಕ್ಯದಿಂದ ಪೃಚ್ಛಕನು ಬೆರಗಾಗಿ ನಿಸ್ತೇಜನಾಗುವಂತೆ ಮಾಡಿ ಕೆಲವು ಸಲ ಶೀಘ್ರವಾಗಿ ಮುಂದುವರೆಯಬೇಕಾಗುತ್ತದೆ. ಅಪ್ರಸ್ತುತಪ್ರಸಂಗ ಅಷ್ಟಾವಧಾನಕ್ಕೆ ಜೀವಕಳೆಯನ್ನು ತರುವ ವಿಲಕ್ಷಣಾಂಗ.

ವ್ಯಸ್ತಾಕ್ಷರೀ :

"ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು".ಇಲ್ಲಿ ಹನ್ನೊಂದು ಅಕ್ಷರಗಳಿವೆ. 'ಕ' ಮೊದಲನೆ ಅಕ್ಷರ; 'ತು" ಕೊನೆಯ ಅಕ್ಷರ. ವ್ಯಸ್ತಾಕ್ಷರಿಯ ಪೃಚ್ಛಕ ಪ್ರತಿ ಅಕ್ಷರಕ್ಕೂ ಕ್ರಮಸಂಖ್ಯೆಯನ್ನಿಟ್ಟು, ಅವಧಾನಿ ಪದ್ಯರಚನಾದಿ ಕಾವ್ಯವ್ಯಗ್ರತೆಯಲ್ಲಿರುವಾಗ

ನಾಲ್ಕನೆಯ ಅಕ್ಷರ 'ಮೆ' ಎಂದು ಚೀಟಿಯಲ್ಲಿ ಬರೆದು ಕೊಡುತ್ತಾನೆ. ಹಾಗೆಯೇ ಉಳಿದ ಅಕ್ಷರಗಳನ್ನು ವ್ಯಸ್ತಕ್ರಮದಲ್ಲಿ, ಅರ್ಥವಾಗದಿರುವಂತೆ, ಅಕ್ಷರಗಳ ಸಂಖ್ಯಾಪಲ್ಲಟಕ್ರಮದಿಂದ ಆಗಾಗ ಕೊಡುತ್ತಿರುತ್ತಾನೆ. ಇಲ್ಲಿ ಅನ್ಯಭಾಷೆಯ ವಾಕ್ಯಗಳನ್ನು ಕೊಡಬಹುದು. ಇವನ್ನೆಲ್ಲಾ ನೆನಪಿನಲ್ಲಿಟ್ಟು ಕೊಂಡು ಅವಧಾನಿ, ಮೂಲದ ವಾಕ್ಯವನ್ನು ಹೇಳಬೇಕು.

ವಾರಕಥನ :

ಆಂಗ್ಲದಿನಾಂಕಗಳಿಗೆ ವಾರಗಳನ್ನು ಹೇಳುವುದು. ಉದಾಹರಣೆಗೆ, 1976ರ ಅಕ್ಟೋಬರ್4 ಯಾವ ವಾರ? ಇದಕ್ಕೆ ಕೆಲವು ಸೂತ್ರಗಳುಂಟು. ಅವಧಾನಿ ಆ ಸೂತ್ರಗಳ ನೆನಪಿನ ಸಹಾಯದಿಂದ ಉತ್ತರಿಸುವನು.

ಪುಷ್ಪಗಣನ – ಘಂಟಾಗಣನ :

ಘಂಟಾಧ್ವನಿಸಂಖ್ಯೆಯನ್ನು ಎಷ್ಟೇ ಪ್ರಯತ್ನಪಟ್ಟರೂ ನೆನಪಿನಲ್ಲಿಡಲು ಸುಲಭವಲ್ಲ. ಅಶ್ವಿನಿ, ಭರಣಿ ಇತ್ಯಾದಿಯಾಗಿ ನಕ್ಷತ್ರಗಳ ಹೆಸರುಗಳನ್ನು ಹೊಂದಿಸಿ ಕೊಂಡು ನೆನಪಿಟ್ಟು ಕೊಳ್ಳುವ ತಂತ್ರಗಳನ್ನು ಅವಧಾನಿಗಳು ಅನುಸರಿಸುತ್ತಾರೆ. ದ್ವಾದಶರಾಶಿಕ್ರಮವನ್ನೂ ಅನುಸರಿಸಬಹುದು. ಮೊದಲ ಘಂಟೆ ಹೊಡೆದಾಗ ಮೇಷರಾಶಿ, ಐದನೆಯ ಘಂಟೆಗೆ ಸಿಂಹರಾಶಿ ಎಂದೂ ಮನಸ್ಸಿನಲ್ಲಿ ಗುರುತು ಮಾಡಿ ಕೊಳ್ಳಬಹುದು. ಪುಷ್ಪಗಣನದಲ್ಲಿ ಪೃಚ್ಛಕ ಆಗಾಗ ಅವಧಾನಿಗೆ ತಾಕುವಂತೆ ಹೂವೆಸೆಯುತ್ತಾನೆ. ಆಹೂವುಗಳ ಸಂಖ್ಯೆಯನ್ನು ಎಣಿಸಿಕೊಂಡು ಕೊನೆಯಲ್ಲಿ ಒಟ್ಟು ಎಷ್ಟು ಹೂಗಳು ಬೀಸಲ್ಪಟ್ಟವೆಂದು ಅವಧಾನಿ ಹೇಳಬೇಕು.

ಹೀಗೆ ಸ್ವಚ್ಛಂದವಿಹಾರ ಮಾಡಿ ಆಶುವಾಗಿ ಪದ್ಯ–ಗದ್ಯಾದಿಗಳನ್ನು ಕಟ್ಟಿ ಹೇಳುವ " ಆಕಾಶಪುರಾಣ", ವ್ಯಾಕರಣಾದಿವಿಷಯ–ವಿಚಾರಸ್ವರೂಪವನ್ನು ಒಳಗೊಂಡ ಇನ್ನೂ ಅನೇಕ ಅಂಗಗಳಿವೆ."ಶಾಸ್ತ್ರಾರ್ಥ", ನಿರ್ದಿಷ್ಟಾಕ್ಷರೀ, ಛಂದೋಭಾಷಣ, ಕಾವ್ಯವಾಚನ, ಚಿತ್ರಕಥಾಪ್ರಬಂಧ ಮುಂತಾದ ಅಂಗಗಳುಂಟು. ಕಾವ್ಯವಾಚನಭಾಗ ಕನ್ನಡದ ಅವಧಾನಗಳಲ್ಲಿ ಸೊಗಸಾದ ಸಂಗೀತ ರಂಜನೆಯ ಜೊತೆಗೆ ಕಂಡು ಬರುತ್ತಿದೆ. ಗಮಕಿ ವಾಚನಮಾಡಿದ ಪದ್ಯಗಳು ಯಾರು ರಚಿಸಿದ, ಯಾವ ಕಾವ್ಯದ ಯಾವ ಸಂದರ್ಭದಲ್ಲಿ ಬರುತ್ತದೆ ಎಂಬ ವಿವರವನ್ನೊಳಗೊಂಡ ವ್ಯಾಖ್ಯಾನವನ್ನೇ ಅವಧಾನಿ ನೀಡುತ್ತಾನೆ.

ಅಪಾರವಾದ ಚರಿತ್ರೆಯನ್ನೊಳಗೊಂಡ ಅವಧಾನಕಲೆಯಲ್ಲಿ ಸುಸುಂಪನ್ನವಾದ ಪಾಂಡಿತ್ಯವಿದೆ, ಸಂಗೀತವಿದೆ. ಗೀತ, ನಾಟ್ಯ, ತರ್ಕ, ವ್ಯಾಕರಣ, ಛಂದಸ್ಸು, ವಿನೋದ, ಪ್ರಸ್ತುತಸಾಮಾಜಿಕ–ಸಾಹಿತ್ಯಿಕ–ಸೂಕ್ಷ್ಮವಿಮರ್ಶೆಯಿದೆ. ಎಲ್ಲಕ್ಕಿಂತ ಮಿಗಿಲಾಗಿ ಮನರಂಜನೆಗೆ ಮೇಳವಿಸಿದ, ಬುದ್ಧಿಗೆ ಸಾಣೆಹಿಡಿಯುವ ಜ್ಞಾನಸಂಪತ್ತು ನಮ್ಮೆದುರು ತೆರೆದುಕೊಳ್ಳುವ ಸೋಜಿಗವಿದೆ. ಆನಂದಸಿದ್ಧಿಗೆ ಆಸೆ ಬಲವಾದರೆ, ಆಸೆಯಪೂರೈಕೆಗೆ ಪ್ರಯತ್ನವೇ ನೆರವು. ಅಂಥ ಪ್ರಯತ್ನಗಳೇ ಅವಧಾನಕಲೆಯ ನೆಲೆಗೊಂದು ಬೆಲೆ.

ಬಹುಮುಖವಿಭೂತಿ ಗಣೇಶ್

– ಡಾ|| ಎಸ್. ರಂಗನಾಥ್
ಸಂಸ್ಕೃತ ಪ್ರಾಚಾರ್ಯರು
ಎನ್.ಎಂ.ಕೆ.ಆರ್.ವಿ. ಪ್ರಥಮ ದರ್ಜೆ ಮಹಿಳಾ ಕಾಲೇಜು

ಅತುಲಿತಕವಿರಾಜಂ ಭವ್ಯಸದ್ವಾಕ್ಯರಾಶಿಂ ಸುಕೃತಶತವಧಾನಂ ಸೂರಿಸತ್ಪದ್ಯಮಿತ್ರಂ।
ವಿದಿತಸಕಲಲೋಕಂ ವಿದ್ವದಾನಂದಹೇತುಂ ಪರಮಸುಖದ ಶಂಭೋ ಪಾಲಯೈನಂ ಗಣೇಶಂ॥

– ಡಾ|| ಜಿ. ಸದಾನಂದಶಾಸ್ತ್ರೀ, ಕನ್ನಡ-ತೆಲುಗು ಅಷ್ಟಾವಧಾನಿ

ನನಗೆ ಶತಾವಧಾನಿ ರಾ.ಗಣೇಶ್ ಅವರ ಪರಿಚಯವಾದುದು ಸುಮಾರು ಮೂವತ್ತಮೂರು ವರ್ಷಗಳ ಹಿಂದೆ 1979ರಲ್ಲಿ ನನ್ನ ತಂದೆಯವರಾದ ಡಾ|| ಎಸ್. ರಾಮಸ್ವಾಮಿಯವರ ಮುಖಾಂತರ. ಗಣೇಶ್ ಅವರು ಯು.ವಿ.ಸಿ.ಇ.ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದುತ್ತಿದ್ದಾಗ ಪ್ರಥಮವರ್ಷ ಆಂಗ್ಲಭಾಷೆಯ ಕಡ್ಡಾಯಪತ್ರಿಕೆಯನ್ನು ನನ್ನ ತಂದೆಯವರು ಗಣೇಶ್‌ರವರ ವರ್ಗಕ್ಕೆ ಬೋಧಿಸುತ್ತಿದ್ದರು. ನನ್ನ ತಂದೆಯವರು ನನಗೆ ಹೇಳುತ್ತಿದ್ದರು – "ಗಣೇಶ್ ಎಂಬ ಅತ್ಯಂತ ಪ್ರತಿಭಾಶಾಲಿಯಾದ ವಿದ್ಯಾರ್ಥಿಗೆ ಬೋಧಿಸುವ ಸೌಭಾಗ್ಯ ನನ್ನದಾಗಿದೆ. ಅವನಿಗೆ ಸಂಸ್ಕೃತದಲ್ಲಿ ಶ್ಲೋಕರಚನೆ ಮಾಡುವ ಹವ್ಯಾಸವಿದ್ದು ನಮ್ಮ ಆರ್ಷೇಯಸಂಸ್ಕೃತಿಯ ಬಗೆಗೆ ಅಪಾರವಾದ ಶ್ರದ್ಧೆಯಿದೆ. ಒಂದು ದಿನ ನಾನು ಅವನನ್ನು ಮನೆಗೆ ಕರೆಯುತ್ತೇನೆ. ನೀನು ಅವನೊಂದಿಗೆ ಸಂವಾದ ನಡೆಸಿದರೆ ನಿನ್ನ ಸಂಸ್ಕೃತಜ್ಞಾನವೂ ವೃದ್ಧಿಯಾಗುತ್ತದೆ" ಎಂದು. ಅದರಂತೆಯೇ ಒಂದು ದಿನ ಗಣೇಶ್ ಅವರು ನಮ್ಮ ಮನೆಗೆ ಬಂದರು. ಹಣೆಯಲ್ಲಿ ತ್ರಿಪುಂಡ್ರ, ಕುಂಕುಮದಿಂದ ರಾರಾಜಿಸುತ್ತಿದ್ದ ಗಣೇಶ್‌ರು ಪ್ರಥಮನೋಟದಲ್ಲೇ ನನ್ನ ಮನಸೆಳೆದರು. ನನ್ನ ತಾಯಿ ಗಣೇಶ್ ಅವರಿಗೆ ಸದ್ಗೃಹಿಣಿಯಂತೆ ಉಪ್ಪಿಟ್ಟು-ಕಾಫಿ ನೀಡಿದರು. ಅದೇ ನನ್ನ ಹಾಗೂ ಗಣೇಶ್ ಅವರ ಸಂಪರ್ಕಕ್ಕೆ ನಾಂದಿಯಾಯಿತು. ನನ್ನ ತಂದೆಯವರು ಕಾಲೇಜಿನಲ್ಲಿ ಬೋಧಿಸಲು ಸೂಟು-ಬೂಟುಧಾರಿಯಾಗಿಯೇ ಹೋಗುತ್ತಿದ್ದರೂ, ಮನೆಯಲ್ಲಿ ದೇವತಾಪೂಜೆ, ಅನುಷ್ಠಾನ, ಗುರುಮುಖೇನ (ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಿ. ಎಸ್. ಸುಬ್ಬರಾಯಮಯ್ಯನವರ ಬಳಿ) ಪ್ರಸ್ಥಾನತ್ರಯ ಅಧ್ಯಯನ ಮಾಡಿದ್ದರಿಂದ ಮನೆಯಲ್ಲಿ ಪಾರಂಪರಿಕ ಭಾರತೀಯರಂತೆ ಪಂಚೆ, ಬ್ರಹ್ಮವಸ್ತ್ರದಲ್ಲಿದ್ದ ದೃಶ್ಯ ಸಹಜವಾಗಿಯೇ ಗಣೇಶ್ ಅವರ ಮೇಲೆ ಪರಿಣಾಮ ಬೀರಿ, ಆಂಗ್ಲಭಾಷೆಯ ಬಗೆಗೆ ಅವರಿಗಿದ್ದ ಪೂರ್ವಾಗ್ರಹ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ವಾರಕ್ಕೆ ಒಂದೆರಡು ಬಾರಿಯಾದರೂ ಗಣೇಶ್ ಅವರು ನಮ್ಮ ಮನೆಗೆ ಅಂದಿನಿಂದ ಬರಲಾರಂಭಿಸಿದರು. ನನ್ನ ತಂದೆ ಹಾಗೂ ಗಣೇಶ್ ಅವರ ಸಂಭಾಷಣೆಯನ್ನು ಆಲಿಸುತ್ತಿದ್ದ ನನಗೆ ಇಬ್ಬರ ಬಗೆಗೂ ಗೌರವಭಾವ ಮೂಡಿದ್ದಲ್ಲದೆ, ನನ್ನ ಜ್ಞಾನವಿಕಾಸಕ್ಕೂ ಕಾರಣವಾಯಿತು.

ಈ ಸಂಪರ್ಕದ ಫಲವಾಗಿಯೇ ನಾನು ಗಣೇಶ್ ಅವರ ಕೈಯಲ್ಲಿ ನನ್ನ ಎರಡು ಕೃತಿಗಳಾದ Post Independence Sanskrit Drama ಹಾಗೂ Post Independence Dootakavya ಪುಸ್ತಕಗಳಿಗೆ ಮುಖಪುಟದ ಚಿತ್ರಗಳನ್ನು ಬರೆದುಕೊಡಲು ಬೇಡಿದಾಗ ಅವರು ಕೂಡಲೇ ತಮ್ಮ ಚಿತ್ರಕಲಾಕೌಶಲದಿಂದ ಬರೆದುಕೊಟ್ಟರು. ನಮ್ಮ

ಮೈತ್ರಿಯ ದ್ಯೋತಕವಾಗಿ ಗಣೇಶ್ ಅವರು ತಾವು ಬರೆದ ಪ್ರತಿಯೊಂದು ಪುಸ್ತಕವನ್ನೂ ತಮ್ಮ ಒಂದು ಪದ್ಯದೊಡನೆ ನನಗೆ ಕೊಡುತ್ತಿದ್ದರು.

ಗಣೇಶ್ ಅವರ 'ಮಧುಸದ್ಮ' ಎಂಬ ಸರ್ಜನಾತ್ಮಕ ಸಂಸ್ಕೃತಭಾಷಾಕೃತಿ ಆಧುನಿಕ ಸಂಸ್ಕೃತ-ಸಾಹಿತ್ಯಕ್ಕೆ ಒಂದು ಅಪೂರ್ವ ಕೊಡುಗೆಯಾಗಿದೆ. ಈ ಕೃತಿಯ ಲೋಕಾರ್ಪಣೆ 1989ರಲ್ಲಿ ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ಮಹಾಮಹೋಪಾಧ್ಯಾಯ ಎನ್. ರಂಗನಾಥಶರ್ಮರ ಅಧ್ಯಕ್ಷತೆಯಲ್ಲಿ ಡಾ॥ ಚಿ. ನ. ಮಂಗಳಾ ಅವರ ಸಮ್ಮುಖದಲ್ಲಿ ಸಂಸ್ಕೃತನಾಟಕೋತ್ಸವದ ಸಂದರ್ಭದಲ್ಲಿ ನಡೆದದ್ದು ನಿಜಕ್ಕೂ ಕೂಡ ನನ್ನ ಜೀವನದ ಒಂದು ಅವಿಸ್ಮರಣೀಯ ಘಟನೆ. ಈ ಕೃತಿಯಲ್ಲಿರುವ ವಿಷಯವೈವಿಧ್ಯತೆ ಯಾರನ್ನಾದರೂ ನಿಬ್ಬೆರಗಾಗಿಸುತ್ತದೆ. ಇದಲ್ಲದೆ ಗಣೇಶ್ ಅವರಿಂದ ರಚಿತವಾದ ಸಂಸ್ಕೃತಭಾಷಾಕೃತಿಗಳೆಂದರೆ:

* ಶ್ರೀಕೃಷ್ಣನನ್ನು ಕುರಿತಾದಂತಹ 103 ಶ್ಲೋಕಗಳಿಂದ ಕೂಡಿರುವ ಸ್ತೋತ್ರಕಾವ್ಯ 'ಶ್ರೀಕೃಷ್ಣಲಹರೀ'
* ಶಿವನನ್ನು ಕುರಿತಾದಂತಹ 51 ಶ್ಲೋಕಗಳಿಂದ ಕೂಡಿರುವ ಖಂಡಕಾವ್ಯ 'ಶ್ರೀಸಾಂಬಲಹರೀ',
* ಭರ್ತೃಹರಿಯ ಶೃಂಗಾರಶತಕವನ್ನು ಹೋಲುವಂತಹ 103 ಶ್ಲೋಕಗಳಿಂದ ಶಕುಂತಲೆಯ ಪಾತ್ರವನ್ನು ವರ್ಣಿಸುವಂತಹ ಖಂಡಕಾವ್ಯ 'ಜಾತಾ ಶಕುಂತಲಾ'
* ವೈದಿಕಛಂದಸ್ಸನ್ನನುಸರಿಸಿ 154 ಶ್ಲೋಕಗಳಿಂದ ರಚಿಸಿದ ಕಾವ್ಯ 'ಶಂಕರವಿವೇಕೀಯಂ'
* ವಿವೇಕಾನಂದರ ಕೊನೆಯ ದಿನವನ್ನಾಧರಿಸಿ 440 ಶ್ಲೋಕಗಳಲ್ಲಿ ಬ್ಲ್ಯಾಂಕ್‌ವರ್ಸ್‌ನಲ್ಲಿ ಬರೆದಿರುವ ಕಾವ್ಯ 'ಅಂತಃಕಾಂತಿಃ'
* ಆರು ಋತುಗಳ ಪರಿಣಾಮ ಪಟ್ಟಣಿಗರ ಹಾಗೂ ಗ್ರಾಮೀಣರ ಮೇಲೆ ಹೇಗಾಗುತ್ತದೆಂದು ವರ್ಣಿಸುವ ಕಾವ್ಯ 'ನಾಗರೀಕಋತವಃ' 'ಗ್ರಾಮೀಣಋತವಃ' ಎಂದು ವಿಭಜಿತವಾಗಿರುವ 'ಏವಮಪಿ ಋತವಃ'
* ಆಂಗ್ಲಭಾಷೆಯಲ್ಲಿರುವ ಸಾನೆಟ್‌ಗಳನ್ನು ಹೋಲುವ ಕೃತಿ 'ಸೌಗಂಧಿಕಾ'
* 87 ಮುಕ್ತಕಗಳಿರುವ ಸಂಕಲನ 'ಚಾಪುಚಂದ್ರಿಕಾ'
* ಚಿತ್ರಕಾವ್ಯ ಅಪರೂಪವಾಗುತ್ತಿರುವ ಈ ಕಾಲದಲ್ಲಿ (ಆಶುವಾಗಿ ಚಿತ್ರಕಾವ್ಯವನ್ನು ಅವಧಾನದಲ್ಲಿ ಮಾಡುವ ಏಕೈಕ ಅವಧಾನಿ ಗಣೇಶ್) ಪದ್ಮಬಂಧ, ಗೋಮೂತ್ರಿಕಾಬಂಧ, ಬಿಂಬಪ್ರತಿಬಿಂಬ ಇತ್ಯಾದಿ ಚಮತ್ಕಾರಗಳನ್ನು ಒಳಗೊಂಡಿರುವ ಕೃತಿ 'ಚಿತ್ರಮಾಲಿಕಾ'
* ಆಧುನಿಕ ಕಾಲದ ಉಡುಗೆ-ತೊಡುಗೆಗಳು, ತಿನ್ನುವ ಪದಾರ್ಥಗಳನ್ನು ವಿಡಂಬನಾತ್ಮಕವಾಗಿ ಬಳಸಿರುವ ಏಕಾಂಕನಾಟಕ 'ಅನ್ವೇಷಣಂ'
* 1994ರಲ್ಲಿ ಶ್ರೀಮಾತಾಪ್ರಕಾಶನದವರಿಂದ ಪ್ರಕಾಶಿತವಾದ ಭಕ್ತಿಪ್ರಧಾನಸ್ತೋತ್ರಕಾವ್ಯ 'ಶ್ರೀ ಚಕ್ರರಾಜೇಶ್ವರೀಸ್ತವನಂ ಕಾಮಾಕ್ಷೀಸುಪ್ರಭಾತಂ ಚ'

ಇನ್ನು ಗಣೇಶ್ ಅವರಿಂದ ರಚಿತವಾಗಿರುವ ಕೆಲವು ಕನ್ನಡ ಕೃತಿಗಳೆಂದರೆ:

1) ನಿತ್ಯನೀತಿ: ಮೈತ್ರೀಪ್ರಕಾಶನ, ಬೆಂಗಳೂರು, 1993. ಈ ಕೃತಿ 500ಕ್ಕೂ ಹೆಚ್ಚು ಸೂಕ್ತಿಗಳಲ್ಲಿ ಪ್ರತಿಯೊಂದಕ್ಕೂ ಸಮುಚಿತಶೀರ್ಷಿಕೆಯಿಂದ ಪೀಠಿಕಾಪ್ರಾಯವಾದ ನಾಲ್ಕಾರು ಶ್ಲೋಕಗಳನ್ನೂ ಫಲಶ್ರುತಿಗಳನ್ನೂ ಬಿಟ್ಟರೆ

ದಿನಕ್ಕೊಂದು ದಿನಕ್ಕೊಂದೆರಡು ಸೂಕ್ತಿಗಳಂತೆ ಅಭ್ಯಾಸಯೋಗ್ಯವೂ ಕಂಠಪಾಠಕ್ಕೆ ಸರಳವೂ ಆದ ನೀತಿಗಳು ಸಮೂಲವಾಗಿದೆ.

2) ಶತಾವಧಾನಶಾರದೆ: ಮೈತ್ರೀಪ್ರಕಾಶನ, 1995. ಕರ್ನಾಟಕದ ಪ್ರಥಮ ಸಂಪೂರ್ಣ ಶತಾವಧಾನಪದ್ಯಮಾಲಿಕೆ ಇದಾಗಿದ್ದು, 2011ರಲ್ಲಿ ಹುಬ್ಬಳ್ಳಿಯ ಸಾಹಿತ್ಯಪ್ರಕಾಶನದಿಂದ ಮರುಮುದ್ರಿತವಾಗಿದೆ.

3) ಸಾಮಾನ್ಯಧರ್ಮ: ಅಭಿಜ್ಞಾನ, 1996. ಮರುಮುದ್ರಣ ಸಾಹಿತ್ಯಪ್ರಕಾಶನ ಹುಬ್ಬಳ್ಳಿ, 2011. ಭಾರತೀಯ ಧರ್ಮಶಾಸ್ತ್ರ ವಿಶ್ವಧರ್ಮಕ್ಕೆ ನೀಡಬಲ್ಲ ಪ್ರಾಲಿಕತತ್ತ್ವ ಯಾವುದೆಂಬ ಅಂಶವೆಂದರೆ ದೇಶ, ಕಾಲ, ವಸ್ತು, ಪರಿಚ್ಛೇದವನ್ನು ಮೀರಿ ಜನ್ಮಸಂಸ್ಕಾರ, ಕರ್ಮ, ಸಿದ್ಧಿಗಳ ಭೇದವನ್ನು ದಾಟಿ ಸರ್ವದಾ, ಸರ್ವಥಾ, ಸಮಸ್ತರಿಗೂ ಉಪಾದೇಯವಾಗಬಲ್ಲ ಮಹಾಪ್ರಮೇಯವೆಂದರೆ ಸಾಮಾನ್ಯಧರ್ಮವೆಂದು ಗಣೇಶ್ ಅವರು ಇಲ್ಲಿ ಸಾಬೀತುಪಡಿಸಿದ್ದಾರೆ.

4) ಧೂಮದೂತ(ಮೇಘದೂತವಿಡಂಬನಕಾವ್ಯ): ಪ್ರತ್ಯಭಿಜ್ಞ ಪ್ರಕಾಶನ, 1996. ರಾಜಕೀಯ ವ್ಯವಸ್ಥೆಯನ್ನೆಲ್ಲ ಧೂಮಮಯವಾಗಿ ಮಾಡಿ ಸಾರ್ವಜನೀನಮೌಲ್ಯಗಳಿಗೆ ಮಸಿ ಬಳಿಯಲಾಗುತ್ತಿರುವುದನ್ನು ಅದ್ಭುತವಾದ ವ್ಯಂಗ್ಯ, ಅಣಕು, ಸರಕುಗಳಿಂದ ಗಣೇಶ್ ಇಲ್ಲಿ ಅನಾವರಣ ಮಾಡಿದ್ದಾರೆ. ಕೇಂದ್ರದಲ್ಲಿ ಮಂತ್ರಿಪದವಿಯಿಂದ ಚ್ಯುತನಾಗಿ ಪದವಿಯ ವಿರಹದಿಂದ ನರಳುತ್ತಾ, ಕರ್ನಾಟಕದ ತನ್ನ ಹಳ್ಳಿಯ ಕಡೆ ಬರುತ್ತಿರುವವನ ಬವಣೆ ಇದರ ಕಥಾವಸ್ತು. ಯಕ್ಷನು ಮೋಡವೇ ಸೂಕ್ತ ದೂತನೆಂದು ಅವನ ಮೂಲಕ ನಲ್ಲೆಗೆ ಸಂದೇಶವನ್ನು ಕಳುಹಿಸಲು ತೀರ್ಮಾನಿಸಿದರೆ ಇಲ್ಲಿ ನಾಯಕನು ಧೂಮದ ಮೂಲಕ ಸಂದೇಶ ಕಳುಹಿಸಲು ತೀರ್ಮಾನಿಸುತ್ತಾನೆ.

5) ಕವಿತೆಗೊಂದು ಕಥೆ: ಮೈತ್ರೀ ಪ್ರಕಾಶನ 1996. ಪ್ರಕೃತ ಸಂಕಲನ ತನ್ನ ಆಕರಗಳಿಗಾಗಿ ಅನೇಕ ವ್ಯಕ್ತಿಗಳನ್ನೂ ಗ್ರಂಥಗಳನ್ನೂ ಆಶ್ರಯಿಸಿದೆ. ಎನ್. ರಂಗನಾಥಶರ್ಮಾ, ಲಂಕಾ ಕೃಷ್ಣಮೂರ್ತಿ, ಎಚ್. ವಿ. ನಾಗರಾಜರಾವ್, ಕೆ. ಕೃಷ್ಣಮೂರ್ತಿ, ಅರೆಯರ್ ಶ್ರೀರಾಮಶರ್ಮಾ ಮುಂತಾದವರು ಹೇಳಿದ ಹತ್ತಾರು ಚಾಟುಪದ್ಯಗಳು ಈ ಕೃತಿಗೆ ಉಪಕಾರಕವಾಗಿದೆ. ಸುಪ್ರಸಿದ್ಧಸಂಸ್ಕೃತಕವಿಗಳಾದ ಕಾಳಿದಾಸನಿಂದ ಹಿಡಿದು ಎ. ಎನ್. ಮೂರ್ತಿರಾಯರ ಜೀವನದ ರಸವತ್ತಾದಘಟ್ಟಗಳು ವಿವರಣೆಹೊಂದಿಗೆ ಇಲ್ಲಿ ಮೂಡಿಬಂದಿದೆ.

6) ನೀಲಕಂಠದೀಕ್ಷಿತನ ಶತಕತ್ರಯ: ಅಭಿಜ್ಞಾನ, 1997. ನೀಲಕಂಠದೀಕ್ಷಿತ 17ನೆಯ ಶತಮಾನದ ವಿಸ್ಮಯಮೂರ್ತಿ. ಈತನ ಕಾವ್ಯಶಾಸ್ತ್ರಸಿದ್ಧಿ ಅಪೂರ್ವವಾದುದು. ಇವನ ಅನೇಕ ಕೃತಿಗಳ ಪೈಕಿ 'ಕಲಿವಿಡಂಬನ', 'ಸಭಾರಂಜನ' ಮತ್ತು 'ವ್ಯಂಗ್ಯಶತಕ'ಗಳು ಅತ್ಯಂತ ಜನಪ್ರಿಯ. ಮೂಲ, ಅನುವಾದ, ಟಿಪ್ಪಣಿಗಳನ್ನು ಪ್ರಕೃತಗ್ರಂಥದಲ್ಲಿ ಕಾಣಬಹುದಾಗಿದೆ.

7) ಷಡ್ದರ್ಶನಸಂಗ್ರಹ: ಭಾರತೀಯ ವಿದ್ಯಾಭವನ 1997ರಲ್ಲಿ ಹೊರತಂದ ಈ ಕೃತಿ ಕೇವಲ 7 ದಿನಗಳಲ್ಲಿ ರಚಿತವಾದ ಕೃತಿ. ದರ್ಶನಗಳ ವ್ಯಾಪ್ತಿ ಬಹಳ ಹಿರಿಯದು. ಅದರಲ್ಲಿಯೂ ಭಾರತೀಯದರ್ಶನಗಳ ಎತ್ತರ-ಬಿತ್ತರ-ಸೂಕ್ಷ್ಮತೆ-ಸಂಕೀರ್ಣತೆಗಳು ಮತ್ತೂ ಮಹತ್ತಾಗಿದೆ. ನಾನಾಭಾಷೆಗಳಲ್ಲಿ ಸಾಕಷ್ಟು ಬರೆವಣಿಗೆಗಳು ಇದರ ಬಗೆಗೆ ಬಂದಿವೆಯಾದರೂ, ಸಂಸ್ಕೃತ, ಆಂಗ್ಲ, ಹಿಂದೀಭಾಷೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಕಡಿಮೆಯೆಂದೇ ಹೇಳಬೇಕು. ಈ ದೃಷ್ಟಿಯಲ್ಲಿ ಬಹುತೇಕ ಭಾರತೀಯದರ್ಶನಗಳಲ್ಲೆಲ್ಲಾ ಕನ್ನಡದಲ್ಲಿ ನಿರೂಪಿಸಬೇಕೆಂಬ ಆಶಯ ಈ ಗ್ರಂಥದಲ್ಲಿದೆ. ಅನುಬಂಧ 1ರಲ್ಲಿ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ, ವೇದಾಂತ ಎಂಬ ಆರುದರ್ಶನಗಳೂ, ಅನುಬಂದ 2ರಲ್ಲಿ ಆಗಮಪ್ರೇರಿತವೇದಾಂತದರ್ಶನಗಳು ಹಾಗೂ ಅವೈದಿಕದರ್ಶನಗಳಾದ ಲೋಕಾಯತ, ಬೌದ್ಧ, ಜೈನಗಳೂ ನಿರೂಪಿತವಾಗಿದ್ದು, ಅನುಬಂಧ 3ರಲ್ಲಿ ಸರ್ವದರ್ಶನಸಮನ್ವಯ ತಂದಿರುವುದು ಅತ್ಯಂತ ಉಪಯುಕ್ತವಾಗಿದೆ.

8) ಸಂಧ್ಯಾದರ್ಶನಮ್: ಅಭಿನವವಿದ್ಯಾಭಾರತೀಕುಸುಮವಾದ 'ಸಂಧ್ಯಾದರ್ಶನ'ವು ಉಪನೀತರಿಗೆ ಹೊಸದೊಂದು ಬೆಳಕನ್ನು ಬೀರುವ ವಿನೂತನಗ್ರಂಥ. ಮೊದಲ ಬಾರಿಗೆ ಶ್ರುತಿ, ಸೂತ್ರ ಮತ್ತು ಪ್ರಧಾನಸ್ಮೃತಿಗಳ ಆಧಾರದಿಂದ ಗಾಯತ್ರೀಜಪ, ಸಂಧ್ಯಾವಂದನೆಯೇ ಮೊದಲಾದ ವೈದಿಕನಿತ್ಯಕರ್ಮಗಳನ್ನು ಕುರಿತ ವೈಜ್ಞಾನಿಕವೂ, ಶುದ್ಧಸಾಂಪ್ರದಾಯಿಕವೂ ಆದ ಪರಿಷ್ಕೃತವಿವರಗಳನ್ನು ಇಲ್ಲಿ ನೀಡಲಾಗಿದೆ. ನಾಲ್ಕು ವೇದಗಳವರಿಗೂ ಸಮರ್ಪಕವಾಗಿ ಸಂಧ್ಯಾವಂದನೆ ಮತ್ತು ಬ್ರಹ್ಮಯಜ್ಞವನ್ನು ಅರ್ಥಸಹಿತವಾಗಿ ಸಂಶೋಧಿಸಿ ಇಲ್ಲಿ ನೀಡಲಾಗಿದೆ. ಪ್ರಶ್ನೋತ್ತರರೂಪದಲ್ಲಿ (ಈಂಕಿ) ಸಮಗ್ರಸಂಧ್ಯೆ-ಗಾಯತ್ರೀಜಪಗಳಿಗೆ ಸಂಬಂಧಿಸಿದ ಎಲ್ಲ ಸಂದೇಹಗಳ ವಿವರಣೆ ಇಲ್ಲಿದೆ.

9) ಕನ್ನಡದಲ್ಲಿ ಅವಧಾನಕಲೆ: ಕರ್ನಾಟಕಸಂಘ, ಪುತ್ತೂರು, 1998. ಅವಧಾನಕಲೆಗೆ ಸಂಬಂಧಿಸಿದ ಸಕಲ ಅಂಗಗಳನ್ನೂ ತಲಸ್ಪರ್ಶಿಯಾಗಿ ವಿಚಾರ ಮಾಡಿ, ಆಲೋಚಿಸಿ, ಸ್ವಾನುಭವದಿಂದ ಪೋಷಿಸಿ, ಉದಾಹರಣಸಹಿತವಾಗಿ ಈಮಹಾಪ್ರಬಂಧ ವರ್ಣಿಸುತ್ತದೆ. ಹಂಪಿಯ ಕನ್ನಡವಿಶ್ವವಿದ್ಯಾಲಯವು ಡಿ.ಲಿಟ್‌ಪದವಿಯಿತ್ತು ಈ ಕೃತಿಯನ್ನು ಪುರಸ್ಕರಿಸಿದೆ. ಕನ್ನಡಸಾಹಿತ್ಯಪ್ರಪಂಚಕ್ಕೆ ಇದೊಂದು ಅನರ್ಘ್ಯಕಾಣಿಕೆ.

10)ವಿಭೂತಿಪುರುಷವಿದ್ಯಾರಣ್ಯ: ಶ್ರೀಭಗವತ್ಪಾದ ಪ್ರಕಾಶನ, ಶ್ರೀಸ್ವರ್ಣವಲ್ಲೀಸಂಸ್ಥಾನ ಸೋಂದಾದಿಂದ 2001 ರಲ್ಲಿ ಪ್ರಕಟಿತ. 2011ರಲ್ಲಿ ಹುಬ್ಬಳಿಯ ಸಾಹಿತ್ಯಪ್ರಕಾಶನದಿಂದ ಮರುಮುದ್ರಿತ. ಶ್ರೋತ್ರೀಯಬ್ರಾಹ್ಮಣವಂಶದಲ್ಲಿ ಜನಿಸಿದ ಭಾರದ್ವಾಜಗೋತ್ರದ, ತೈತ್ತಿರೀಯಯಜುಃಶಾಖೆಯ ಬೋಧಾಯನಸೂತ್ರವನ್ನನುಸರಿಸುವ ಅದ್ವೈತ ತತ್ತ್ವಾನುಯಾಯಿಯಾದ ವಿದ್ಯರಣ್ಯರ ಹಿನ್ನೆಲೆ, ಜೀವನ, ಸಾಧನೆಯನ್ನು ಈ ಕೃತಿ ಮನೋಜ್ಞವಾಗಿ ಚಿತ್ರಿಸಿದೆ.

11) ಅಲಂಕಾರಶಾಸ್ತ್ರ: ಭಾರತೀಯವಿದ್ಯಾಭವನದ ಗಾಂಧೀಕೇಂದ್ರದಿಂದ 2002ರಲ್ಲಿ ಈ ಕೃತಿ ಪ್ರಕಟವಾಗಿದೆ. ಕಾವ್ಯಮೀಮಾಂಸೆಯ ಮೂಲತತ್ತ್ವಗಳಿಗೆ ಅಪಚಾರಮಾಡದಂತೆ ಶಾಸ್ತ್ರದ ಸಮಗ್ರತೆ, ಮಹೋನ್ನತಿ ಮತ್ತು ಸರ್ವಕ್ಷಮತೆಯನ್ನು ಎತ್ತಿತೋರಿಸಲೆಂದು, ಸಂಸ್ಕೃತಮೂಲಗ್ರಂಥಗಳನ್ನಷ್ಟೇ ಅಲ್ಲದೆ ಇಂಗ್ಲಿಷ್, ಕನ್ನಡ, ಹಿಂದಿ, ತೆಲುಗು, ಮರಾಠೀಭಾಷೆಯಲ್ಲಿರುವ ಅನೇಕ ದ್ವಿತೀಯಸ್ತರದ ಆಕರಗ್ರಂಥಗಳನ್ನು ಕೂಡ ವಿಪುಲವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ. ಅಲಂಕಾರಶಾಸ್ತ್ರದ ಔಚಿತ್ಯ, ಅನುಬಂಧಚತುಷ್ಟಯ, ಧ್ವನಿಪರಂಪರೆ, ಧ್ವನಿವಿರೋಧಿಗಳು, ಪರಿಷ್ಕಾರಯುಗ, ಆಧುನಿಕಯುಗ, ಅಲಂಕಾರಶಾಸ್ತ್ರದ ತತ್ತ್ವವಿಕಾಸವನ್ನು ಈ ಗ್ರಂಥ ಚೊಕ್ಕವಾಗಿ ಮೂಡಿಸುತ್ತದೆ.

12) ವಿತಾನ: ಸಾಹಿತ್ಯಪ್ರಕಾಶನ, ಹುಬ್ಬಳಿಯಿಂದ 2011ರಲ್ಲಿ ಮರುಮುದ್ರಣ ಕಂಡ ಈ ಕೃತಿ ಅನೇಕ ವಿಷಯಗಳಿಂದ ಕೂಡಿದ ಕನ್ನಡಪದ್ಯಗಳ ಸಂಕಲನವಾಗಿದೆ. ಮುನ್ನುಡಿಯಲ್ಲಿ ಮಹಾಮಹೋಪಾಧ್ಯಾಯ ಡಾ॥ ರಾ. ಸತ್ಯನಾರಾಯಣರ ಅಭಿಪ್ರಾಯದಂತೆ, ಈ ಕೃತಿ 'ಭೌತಿಕವಿಜ್ಞಾನ-ಬ್ರಹ್ಮವಿಜ್ಞಾನಗಳಿಗೆ ಭಾವಬಂಧದಸೇತುವನ್ನು ನಿರ್ಮಿಸುವಷ್ಟು ವಿಶಾಲವಾಗಿದೆ. ಈ ಕವನಗಳಲ್ಲಿ ಬರಿಯ ಶುಷ್ಕಮನೀಷೆ ಇಲ್ಲದೆ, ವೇದನೆ-ಸಂವೇದನೆಗಳ ಹೃದಯಸ್ಪಂದನವಿದೆ.

13)ಕಾವ್ಯಕಲ್ಪ: ಸಾಹಿತ್ಯಪ್ರಕಾಶನ ಹುಬ್ಬಳ್ಳಿಯಿಂದ 2011ರಲ್ಲಿ ಪ್ರಕಟಿತವಾದ ಈ ಕೃತಿ ಸಂಯುಕ್ತಕರ್ನಾಟಕಕ್ಕಾಗಿ ಬರೆದ ಅಂಕಣಬರೆಹಗಳ ಸಂಕಲನವಾಗಿದೆ.

14) ಬ್ರಹ್ಮಪುರಿಯ ಭಿಕ್ಷುಕ: ಡಿ.ವಿ.ಜಿ.ಯವರ ಜೀವನದ ನೂರಾರು ರಸಪ್ರಸಂಗಗಳನ್ನೊಳಗೊಂಡ ಈ ಕೃತಿ ಸಾಹಿತ್ಯಪ್ರಕಾಶನ ಹುಬ್ಬಳ್ಳಿಯಿಂದ 2011ರಲ್ಲಿ ಪ್ರಕಟವಾಗಿದೆ.

15)ಸರ್ವತಂತ್ರಸ್ವತಂತ್ರ: 2005ರ ಡಿಸೆಂಬರ್ನಲ್ಲಿ ವಿ.ಸೀ. ಸಂಪದದಿಂದ ಪ್ರಕಾಶನವಾದ ಈ ಕೃತಿ ಪ್ರೊ. ಸಾ. ಕೃ. ರಾಮಚಂದ್ರರಾಯರ ಜೀವನ-ಲೇಖನ ಪರಿಚಯವನ್ನು ಮನೋಜ್ಞವಾಗಿ ಮಾಡಿಕೊಡುತ್ತದೆ.

16)ವಾಣೀವಾಹನ: 2008ರಲ್ಲಿ ವಿ. ಸೀ. ಸಂಪದದಿಂದ ಪ್ರಕಟಿತವಾದ ಈ ಕೃತಿ ಮಹಾಮಹೋಪಾಧ್ಯಾಯ ಎನ್. ರಂಗನಾಥಶರ್ಮಾರವರ ಜೀವನ-ಸಾಹಿತ್ಯವನ್ನು ಮನೋಜ್ಞವಾಗಿ ಪರಿಚಯಿಸುತ್ತದೆ.

17)ಇವಲ್ಲದೆ, ಭಾರತೀಯವಿದ್ಯಾಭವನದ 'ಗಾಂಧೀಸೆಂಟರ್ ಆಫ್ ಸೈನ್ಸ್ ಆಂಡ್ ಹ್ಯೂಮನ್ ವ್ಯಾಲ್ಯೂಸ್' ವತಿಯಿಂದ ಡಾ॥ ಎಚ್. ಕೆ. ರಂಗನಾಥ್ ಅವರ ನಿರ್ದೇಶನದಲ್ಲಿ ಪ್ರಕಟಗೊಂಡ Human Values for the young series ನಲ್ಲಿಅವರಿಂದ Human Values in Manusmriti (1998), Human Values in Ramayana (1998) ರಚಿತವಾಗಿ ಅತ್ಯಂತ ಜನಪ್ರಿಯತೆ ಗಳಿಸಿವೆ. ಈ ಕೃತಿಗಳಲ್ಲಿ ಮನುಸ್ಮೃತಿ ಹಾಗೂ ರಾಮಾಯಣದಿಂದ ಶಾಶ್ವತಮೌಲ್ಯಗಳನ್ನು ನಿರೂಪಿಸುವ ವಾಕ್ಯಗಳನ್ನು ಹೊರತೆಗೆದು, ವಿಷಯಕ್ಕೆ ಅನುಗುಣವಾಗಿ ವಿಂಗಡಿಸಿ, ಅವಕ್ಕೆ ಆಂಗ್ಲಭಾಷೆಯ ಅನುವಾದವನ್ನೂ ನೀಡಲಾಗಿದೆ. ಕರ್ನಾಟಕದಲ್ಲಿ ನೆಲೆಸಿರುವ ಕನ್ನಡ ಬಾರದ ಇತರ ಜನಾಂಗದವರಿಗೆ ಹಾಗೂ ವಿದ್ಯಾರ್ಥಿಸಮೂಹಕ್ಕೆ ಈ ಪುಸ್ತಕಗಳು ಅತೀವ ಉಪಕಾರಕವಾಗಿವೆ.

ಈ ಎಲ್ಲ ಕೃತಿಗಳಲ್ಲೂ ಕಂಡು ಬರುವ ಸಾಮಾನ್ಯ ಅಂಶವೆಂದರೆ, ಗಣೇಶ್ ಅವರೇ ತಮ್ಮ 'ಅಲಂಕಾರಶಾಸ್ತ್ರ' ಕೃತಿಯ ಅರಿಕೆಯ ಭಾಗದಲ್ಲಿ ಹೇಳಿರುವುದು: 'ಇಲ್ಲಿ ಉದ್ಧರಿಸಿರುವ, ಉಲ್ಲೇಖಿಸಿರುವ ಯಾವುದೇ ಮೂಲಗ್ರಂಥವನ್ನೂ ಸ್ವಯಂ ಅಭ್ಯಸಿಸದೆ ಏನನ್ನೂ ಬರೆದಿಲ್ಲವೆಂದೂ, ಇಲ್ಲಿಯ ನಿಗಮನಗಳ ಹಾಗೂ ವಿಶ್ಲೇಷಣೆ-ಮೌಲ್ಯಮಾಪನಗಳ ಸಾಧಕ-ಬಾಧಕಗಳಿಗೆ ನನ್ನ ವ್ಯಾಸಂಗ ಮತ್ತು ವಿಮರ್ಶನದೃಷ್ಟಿಗಳೇ ಹೊಣೆಯೆಂದೂ ಸ್ಪಷ್ಟಪಡಿಸಲು ಬಯಸುತ್ತೇನೆ. ಭಾರತೀಯಕಾವ್ಯಮೀಮಾಂಸೆಯ ಮೂಲತತ್ತ್ವಗಳಿಗೆ ನಾನು ಯಾವುದೇ ಅಪಚಾರವನ್ನು ಮಾಡಿಲ್ಲವೆಂದು ನಂಬಿದ್ದೇನೆ. ಮಿಗಿಲಾಗಿ, ಈ ಶಾಸ್ತ್ರದ ಸಮಗ್ರತೆ, ಮಹೋನ್ನತಿ ಮತ್ತು ಸರ್ವಕ್ಷಮತೆಯನ್ನು ಎತ್ತಿತೋರಿಸಲೆಂದೇ ಪ್ರಾಮಾಣಿಕವಾಗಿ ಯತ್ನಿಸಿದ್ದೇನೆ. ಈ ಬಗೆಗೆ ಜಿಜ್ಞಾಸುಗಳೊಡನೆ ಸರ್ವದಾ ಸಂವಾದಕ್ಕೆ ಸಿದ್ಧನಿರುವೆ.' ಇಲ್ಲಿ ಗಣೇಶ್‌ರವರ ಮುಕ್ತಮನಸ್ಸು ಹಾಗೂ ನಿಖರಪ್ರಜ್ಞೆಯನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ಗ್ರಂಥರಚನೆ ಗಣೇಶ್‌ರವರ ಒಂದು ಮುಖವಾದರೆ, ಅವರ ಸಾವಿರಾರು ಪ್ರವಚನಗಳು, ಬಿಡುವಿಲ್ಲದಿದ್ದರೂ ನೂರಾರು ಗ್ರಂಥಗಳಿಗೆ ಅವರು ಬರೆದಿರುವ ಮುನ್ನುಡಿಗಳು, ಕೇಳಿದವರ ಕೃತಿಗಳ ಲೋಕಾರ್ಪಣೆಕಾರ್ಯ (ಇಲ್ಲಿ ನನ್ನ ಕೃತಿಯಾದ 'ಬೆಲ್ಲಂಕೊಂಡರಾಮರಾಯಕವಿ'ಯನ್ನು ಶಂಕರಜಯಂತಿ ಮಂಡಳಿಯಲ್ಲಿ ಎರಡು ವರ್ಷಗಳ ಹಿಂದೆ ಲೋಕಾರ್ಪಣೆ ಮಾಡಿ ಕೃತಿಪರಿಚಯ ಮಾಡಿದುದನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತೇನೆ), ನೂರಾರು ದನಿಸುರುಳಿಗಳಿಗೆ ಅವರು ಸಹಕರಿಸಿರುವ ವಿಧಾನ, ದೂರದರ್ಶನ-ಆಕಾಶವಾಣಿಗಳ ಅನೇಕವಾಹಿನಿಗಳಿಗೆ ಅವರು ನೀಡಿರುವ ಕಾರ್ಯಕ್ರಮಗಳು, ಮನೆಯಲ್ಲಿ ಪಾಕಕಲೆ, ತಾಯಿ ಹಾಗೂ ಅಣ್ಣನವರ ಆರೈಕೆ -ಇವೆಲ್ಲವನ್ನೂ ಜೊತೆಜೊತೆಗೇ ನಡೆಸಿಕೊಂಡು ಹೋಗುತ್ತಿರುವುದು ಕೇವಲ ಅಸಾಮಾನ್ಯವ್ಯಕ್ತಿಗಳಿಗೆ ಸಾಧ್ಯವೇ ಹೊರತು ಸಾಮಾನ್ಯರು ಮೇಲೆ ಹೇಳಿದ ಯಾವ ಒಂದನ್ನೂ ಸಮರ್ಥವಾಗಿ ನಿರ್ವಹಿಸಲಾರರು.

ಬಿ.ಇ. ಮೆಕ್ಯಾನಿಕಲ್, ಎಂ.ಎಸ್ಸಿ. ಇಂಜಿನಿಯರಿಂಗ್, ಎಂ.ಎ. ಸಂಸ್ಕೃತ, ಡಿ.ಲಿಟ್. ಕನ್ನಡ, ಗ್ರೀಕ್-ಲ್ಯಾಟಿನ್‌ಗಳೂ ಸೇರಿ ಹದಿನೇಳು ಭಾಷೆಗಳ ಪರಿಣತಿ, ಭಾರತೀಯಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ಅಧ್ಯಾತ್ಮ, ಕಲೆ, ಇತಿಹಾಸಗಳಲ್ಲಿ ಗಾಢಪ್ರೀತಿ, ಅಲಂಕಾರ, ಛಂದಸ್ಸು, ವೇದ-ವೇದಾಂತ, ಧರ್ಮಶಾಸ್ತ್ರ, ನೃತ್ಯ, ನಾಟಕ, ಯಕ್ಷಗಾನ, ಚಿತ್ರಶಿಲ್ಪ, ಸಂಗೀತಾದಿಗಳಲ್ಲಿ ಪರಿಶ್ರಮ, ಭಾರತೀಯವಿಜ್ಞಾನ, ತಂತ್ರಜ್ಞಾನ, ಸೌಂದರ್ಯಮೀಮಾಂಸೆ ಮತ್ತು ಮೌಲ್ಯಮೀಮಾಂಸೆಗಳಲ್ಲಿ ದುಡಿದ ಅನುಭವ, 962 ಅಷ್ಟಾವಧಾನಗಳನ್ನೂ (ಇವುಗಳಪೈಕಿ 500ಕ್ಕೂ ಹೆಚ್ಚು ಅವಧಾನಗಳಲ್ಲಿ ಪೃಚ್ಛಕನಾಗುವ ಭಾಗ್ಯ ನನ್ನದಾಗಿದೆ) ಶತಾವಧಾನಗಳನ್ನೂ ನಿರ್ವಹಿಸಿ ಈಗ ಐದನೆಯ ಶತಾವಧಾನ ಕಾರ್ಯಕ್ರಮಕ್ಕೆ ಸಮ್ಮತಿಸಿರುವ ಗಣೇಶರನ್ನು, 'ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್' ಎಂಬ ಕಾಳಿದಾಸೋಕ್ತಿಯಂತೆ, ಅರಸಿ ಬಂದಿರುವ ಪ್ರಶಸ್ತಿಗಳು

ಹಲವಾರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ರಾಜ್ಯೋತ್ಸವಪ್ರಶಸ್ತಿ, ಅತ್ಯುತ್ತಮರಾಷ್ಟ್ರೀಯಯುವಪ್ರತಿಭಾಪ್ರಶಸ್ತಿ, ಕಾವ್ಯಕಂಠಪ್ರಶಸ್ತಿ, ಬಾದರಾಯಣ ವ್ಯಾಸ ಪುರಸ್ಕಾರ್, ಅವಿಲಂಬಸರಸ್ವತೀ ಪ್ರಶಸ್ತಿ, ಪುರುಷಸರಸ್ವತೀ ಪ್ರಶಸ್ತಿ ಹಾಗೂ ಕೆಂಪೇಗೌಡ ಪ್ರಶಸ್ತಿ. ಇವರ 24ಘಂಟೆಗಳ ಸತತ ಆಶುಕವಿತೆ ವಿಶ್ವದಾಖಲೆಯಾಗಿದೆ.

ಮಹಾಮಹೋಪಾಧ್ಯಾಯ ಡಾ॥ ರಾ. ಸತ್ಯನಾರಾಯಣ ಅವರ ಮಾತನ್ನು ಉಲ್ಲೇಖಿಸುವುದಾದರೆ, 'ಶತಾವಧಾನಿ ಗಣೇಶ್‌ರವರು ತಮ್ಮ ಬಹುಮುಖವಿಭೂತಿಯಿಂದ ಕನ್ನಡಿಗರ ಗೌರವ, ಆದರ, ಅದ್ಭುತಭಾವದ ಮೆಚ್ಚುಗೆಗಳನ್ನು ಗಳಿಸಿದ್ದಾರೆ. ಯಾವುದೇ ಛಂದಸ್ಸಿನಲ್ಲಿ ಯಾವುದೇ ವಿಷಯದಲ್ಲಿ ಕಾವ್ಯರಚನೆಯನ್ನು ಆಶುಸ್ಫೂರ್ತಿಯಿಂದ ಕೈಗೊಳ್ಳುವ ಅಪೂರ್ವಶಕ್ತಿ ಅವರಿಗಿದೆ. ಗಣೇಶ್ ಅವರ ಕಾವ್ಯಪ್ರತಿಭೆ ಸ್ವಚ್ಛಂದ-ಸ್ವೈರವಲ್ಲ; ಶಾಸ್ತ್ರಸಂಸ್ಕಾರದಿಂದ ಕಿಲುಬನ್ನು ಕಳೆದುಕೊಂಡು ರುಚಿ-ಶುಚಿಯಾಗಿದೆ.' ('ವಿತಾನ' ಕೃತಿಯ ಮುನ್ನುಡಿಯಿಂದ).

ಡಾ॥ ಕೆ. ಕೃಷ್ಣಮೂರ್ತಿಯವರು 'ಮಧುಸದ್ಮ' ಕೃತಿಯ ಮುನ್ನುಡಿಯಲ್ಲಿ ಹೇಳಿರುವ ಈ ಮಾತುಗಳು ಅತ್ಯಂತ ಹೃದಯಸ್ಪರ್ಶಿ: Poetry runs in the very breath of Ganesh. He has written extensively both in Kannada and Sanskrit in a wide variety of literary forms from pearl like verse to century of them and from lyrical to dramatic and narrative modes. Ganesh is one who has really enjoyed the poetry of the past classical masters and is inspired to write like them because he cannot suppress the call from within and who takes for his subject his own impression of present day life while giving them form like the classics. If can be truly said of him that:

A poet in a golden time was born
With golden stars above;
Powered with the hate of hate
The scorn of scorn,
The love of love

ಗಣೇಶ್ ಅವರ ಕಾರ್ಯವ್ಯಾಪ್ತಿ

ಗಣೇಶ್ ಅವರ ಕಾರ್ಯವ್ಯಾಪ್ತಿ ಅತ್ಯಂತ ವಿಸ್ತಾರವಾದುದು. ಆರ್. ವಿ. ಕಾಲೇಜ್ ಆಫ್ ಇಂಜಿನಿಯರಿಂಗ್, ಎಂ. ಎಸ್. ರಾಮಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್, ಜೈನ್‌ಪ್ರೆಸಿಡೆನ್ಸಿಯಲ್ ಸ್ಕೂಲ್, ಭಾರತೀಯ ವಿದ್ಯಾಭವನ, ಭಾರತೀಯ ವಿಜ್ಞಾನ ಮಂದಿರ, ಇಂದಿರಾಗಾಂಧೀ ನ್ಯಾಶನಲ್‌ಸೆಂಟರ್ ಆಫ್ ಆರ್ಟ್ಸ್ ಇತ್ಯಾದಿ ಸಂಸ್ಥೆಗಳಲ್ಲಿ ಹಲವಾರು ವರ್ಷಗಳು ಸಾರ್ಥಕಸೇವೆ ಗೈದು ಜನಸಾಮಾನ್ಯರಲ್ಲಿ ನೈತಿಕ ಹಾಗೂ ಶಾಶ್ವತಮೌಲ್ಯಗಳ ಬಗೆಗೆ ಜಾಗೃತಿ ಮೂಡಿಸಲು ಸುಮಾರು ಮೂರು ದಶಕಗಳಿಂದ ಭಾರತೀಯವಿದ್ಯಾಭವನ, ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಗಾಂಧೀ ಸಾಹಿತ್ಯ ಸಂಘ, ಅಧ್ಯಾತ್ಮ ಪ್ರಕಾಶನ ಕಾರ್ಯಾಲಯ, ಶಂಕರಜಯಂತಿ ಮಂಡಳಿ, ವಿ. ಸೀ. ಸಂಪದ, ಬಿ. ಎಂ. ಶ್ರೀ. ಪ್ರತಿಷ್ಠಾನಗಳಲ್ಲಿ ಪ್ರವಚನಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಭ್ಯಾಗತ ಆಚಾರ್ಯತ್ವ, ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಎಂ.ಎ. ವಿದ್ಯಾರ್ಥಿಗಳಿಗೆ ಸತತವಾಗಿ ಮಾರ್ಗದರ್ಶನ ಮಾಡುತ್ತಾ ಬರುತ್ತಿದ್ದಾರೆ. ಇದೇ ಅಲ್ಲದೆ ಅನೇಕ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕಸಂಸ್ಥೆಗಳಲ್ಲಿ ಸನಾತನಸಂಸ್ಕೃತಿಯ ಪ್ರಚಾರ-ಪ್ರಸಾರಗಳನ್ನು ಮಾಡುತ್ತಲೇ ಬರುತ್ತಿದ್ದಾರೆ. ಜಯೇಂದ್ರಸರಸ್ವತೀಸ್ವಾಮಿಗಳ 75ನೆಯ

ವರ್ಧಂತ್ಯುತ್ಸವದಂದು ಕಾರಣಾಂತರಗಳಿಂದ ಗಣೇಶ್ ಅವರು ಭಾಗವಹಿಸಲಾಗದಿದ್ದುದರಿಂದ ಅವರು ನನ್ನನ್ನು ಸ್ಮರಿಸಿಕೊಂಡು ನನ್ನನ್ನು ಕಳುಹಿಸಿದ್ದಕ್ಕೆ ನಾನು ಅವರಿಗೆ ಆಭಾರಿಯಾಗಿದ್ದೇನೆ.

ಗಣೇಶ್ ಅವರಿಗೂ ಎನ್.ಎಂ.ಕೆ.ಆರ್.ವಿ. ಸಂಸ್ಥೆಗೂ ಇರುವ ನಂಟು

1989ರಲ್ಲಿ 'ಮಧುಸದ್ಮ' ಕೃತಿ ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ಬಿಡುಗಡೆಯಾದಾಗಿನಿಂದಲೂ ಗಣೇಶ್‌ಅವರು ಕಾಲೇಜಿನ ಅವಿಭಾಜ್ಯ ಅಂಗವಾಗಿದ್ದಾರೆ. ಸಂಸ್ಕೃತವಿಭಾಗದ ವತಿಯಿಂದ ನಡೆಸಿದ 'ದಂಡಿಸಮಾರೋಹ', ಆರ್. ವಿ. ಸಂಸ್ಕೃತ ಅಧ್ಯಯನ ಸಂಸ್ಥೆಯಿಂದ 2007ರಲ್ಲಿ ನಡೆಸಿದ Relevance of Advaita to Modern Times, 2012ರಲ್ಲಿ '35 years of creative writing in Sanskrit' ಕುರಿತು ನೀಡಿದ ಉಪನ್ಯಾಸ, ಕಾವ್ಯ, ನೃತ್ಯ, ಚಿತ್ರ, ಗಾನಕಾರ್ಯಕ್ರಮಗಳೇ ಅಲ್ಲದೆ ತಮ್ಮ 851ನೆಯ ಅಷ್ಟಾವಧಾನವನ್ನೂ ಕಾಲೇಜಿನಲ್ಲಿಯೇ ನಡೆಸಿ, ಪದವಿ ವಿದ್ಯಾರ್ಥಿನಿಯರಿಗೆ ನೈತಿಕಮೌಲ್ಯಗಳ ಬಗೆಗೆ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಈಗ ಇವರ ಐದನೆಯ ಶತಾವಧಾನಕಾರ್ಯಕ್ರಮವು ಕಾಲೇಜಿನ ಮಂಗಳಾಮಂಟಪದಲ್ಲಿ ನವೆಂಬರ್ 30ರಿಂದ ಡಿಸೆಂಬರ್ 2ರವರೆಗೆ ನಡೆಯುತ್ತಿರುವುದು ಗಣೇಶ್ ಅವರ ಹಾಗೂ ಎನ್.ಎಂ.ಕೆ.ಆರ್.ವಿ. ಕಾಲೇಜಿನ ನಂಟನ್ನು ಗಟ್ಟಿಗೊಳಿಸಿದೆ.

ಗಣೇಶ್ ಎಂದರೆ ನಡೆದಾಡುವ ವಿಶ್ವಕೋಶ

ತಮ್ಮ ಅದ್ಭುತಜ್ಞಾಪಕಶಕ್ತಿಯಿಂದ ಹಾಗೂ ಅಪಾರವಾದ ಅಧ್ಯಯನದಿಂದ ಯಾರಿಗೆ ಯಾವುದೇ ಆಕರಗ್ರಂಥಗಳ ಬಗೆಗೆ ಸಂದೇಹವುಂಟಾದರೂ ತತ್ಕ್ಷಣ ಮೊರೆಹೋಗಬೇಕಾದ ವ್ಯಕ್ತಿಯೆಂದರೆ ಗಣೇಶ್. ನಾವು ಕೇಳಿದ ಶ್ಲೋಕಕ್ಕೆ ತತ್ಕ್ಷಣವೇ ಆಕರವನ್ನು ನೀಡಿ ನಮಗೆ ಸಹಕರಿಸುವ ಸೌಜನ್ಯಶೀಲಸನ್ಮಿತ್ರರೆಂದರೆ ಗಣೇಶ್. ನನಗೆ ಅನೇಕ ಬಾರಿ ಬಂದಿರುವ ಸಂದೇಹಗಳಿಗೆ ಗಣೇಶ್ ಅವರು ಕೂಡಲೇ ಪರಿಹಾರ ಸೂಚಿಸಿ ಮಹದುಪಕರಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಋಣಿ.

ಡಾ॥ ಆರ್. ಗಣೇಶ್ ಅವರ ಕೃತಿಗಳು

ಸಂಸ್ಕೃತಭಾಷೆಯಲ್ಲಿ :

1. ಮಧುಸದ್ಮ (ಖಂಡಕಾವ್ಯ-ರೂಪಕಸಂಕಲನ)
2. ವನಿತಾಕವಿತೋತ್ಸವಃ (ರೂಪಕ)
3. ಶ್ರೀಚಕ್ರೇಶ್ವರೀಸ್ತವನಃ (ಸ್ತೋತ್ರಕಾವ್ಯ)
4. ಹರಿಭಕ್ತಿಸಾರಃ (ಅನುವಾದ)
5. ಅಲ್ಲಮವಚನಾನಿ (ಅನುವಾದ)

ಆಂಗ್ಲಭಾಷೆಯಲ್ಲಿ :

6. Human Values in Telugu Literature
7. Human Values in the Code of Kautilaya
8. Human Values in Mahabharata
9. Human Values in Ramayana
10. Human Values in Manusmruti
11. Subhasitasamputa

ಕನ್ನಡಭಾಷೆಯಲ್ಲಿ :

I ಅನುವಾದ:

12. ನಿತ್ಯನೀತಿ
13. ನೀಲಕಂಠದೀಕ್ಷಿತನ ಶತಕತ್ರಯ
14. ಮೌಲ್ಯ ಮುನ್ನೂರು (ಕ್ಷೇಮೇಂದ್ರ, ಶಿಲ್ಹಣ ಮತ್ತು ಕುಸುಮದೇವನ ಮೂರು ಶತಕಗಳು)
15. ಕುಸುಮದೇವನ ದೃಷ್ಟಾಂತಕಲಿಕಾಶತಕ ಮತ್ತು ನೀಲಕಂಠದೀಕ್ಷಿತನ ಶಾಂತಿವಿಲಾಸ

II ಕಾವ್ಯ

16. ವಿತಾನ
17. ಧೂಮಧೂತ
18. ವಂಶೀಸಂದೇಶಂ
19. ಶತಾವಧಾನಶಾರದೆ
20. ಅನನ್ಯವ್ಯಕ್ತಿ (ಏಕವ್ಯಕ್ತಿ ಯಕ್ಷಗಾನಗಳು)
21. ಶತಾವಧಾನಶ್ರೀವಿದ್ಯೆ

III ಸಂಶೋಧನೆ-ಅಧ್ಯಯನ-ಪ್ರಬಂಧ-ಜೀವನಚಿತ್ರ-ಸಂಪಾದಿತ

22. ಸಂಧ್ಯಾದರ್ಶನ (ಧರ್ಮಶಾಸ್ತ್ರಸಂಶೋಧನೆ)
23. ಕನ್ನಡದಲ್ಲಿ ಅವಧಾನಕಲೆ (ಸಂಶೋಧನ ಮಹಾಪ್ರಬಂಧ)
24. ಕವಿತೆಗೊಂದು ಕಥೆ (ಅನುವಾದ-ವ್ಯಾಖ್ಯಾನ)
25. ವಿಭೂತಿಪುರುಷ ವಿದ್ಯಾರಣ್ಯ (ಇತಿಹಾಸ-ಸಾಹಿತ್ಯಸಂಶೋಧನೆ)
26. ಅಲಂಕಾರಶಾಸ್ತ್ರ (ಭಾರತೀಯಸಾಹಿತ್ಯಮೀಮಾಂಸೆಯ ಪರಿಚಯ)
27. ಸರ್ವತಂತ್ರಸ್ವತಂತ್ರ (ಜೀವನ-ಸಾಧನೆಗಳ ದಾಖಲೆ)
28. ವಾಣೀವಾಹನ (ಜೀವನ-ಸಾಧನೆಗಳ ದಾಖಲೆ)
29. ಆರ್ದ್ರಜ್ಯೋತಿ (ಜೀವನ-ಸಾಧನೆಗಳ ದಾಖಲೆ)
30. ಯಕ್ಷರಾತ್ರಿ (ಯಕ್ಷಗಾನ/ನೃತ್ಯಸಂಶೋಧನೆ)
31. ಪರೋಕ್ಷ (ಸಾಹಿತ್ಯವಿಮರ್ಶೆ)
32. ಹಾಸು-ಬೀಸು (ಸಾಹಿತ್ಯ-ಸಂಸ್ಕೃತಿ-ಕಲೆಗಳ ವಿಮರ್ಶೆ)
33. ಷಡ್ದರ್ಶನಸಂಗ್ರಹ (ಭಾರತೀಯದರ್ಶನಗಳ ಪರಿಚಯ)
34. ಅಭಿರುಚಿ (ಲಲಿತಪ್ರಬಂಧ)
35. ಭಾಷಾಭೃಂಗದ ಬೆನ್ನೇರಿ (ಭಾಷಾ-ಸಾಹಿತ್ಯಮೀಮಾಂಸೆ)
36. ಕಲಾಕೌತುಕ (ಕಲಾಮೀಮಾಂಸೆ)
37. ಹೊಕ್ಕುಳಬಳ್ಳಿಯ ಸಂಬಂಧ (ಸಂಸ್ಕೃತಿಮೀಮಾಂಸೆ)
38. ಮಥನ-ಕಥನ (ಚಿಂತನಲೇಖನಗಳು)
39. ಹುಡುಕಾಟ (ಸಾಹಿತ್ಯಸಂಶೋಧನೆ)
40. ಕಾವ್ಯಕಲ್ಪ (ಸಾಹಿತ್ಯ-ಸಂಸ್ಕೃತಿಚಿಂತನೆ)
41. ಸಾಮಾನ್ಯಧರ್ಮ (ಧರ್ಮಶಾಸ್ತ್ರ)
42. ಬ್ರಹ್ಮಪುರಿಯ ಭಿಕ್ಷುಕ (ವ್ಯಕ್ತಿತ್ವಚಿತ್ರಗಳು)
43. ದ್ರಾವಿಡಛಂದಸ್ಸು (ಸಂ)
44. ರಸೋ ವೈ ಸಃ (ಸಂ)
45. ಡಿವಿಜಿಯವರ ಬೆಲೆಬಾಳುವ ಬರೆಹಗಳು (ಸಂ)

ಅಪ್ರಕಟಿತಕೃತಿಗಳು :

46. ಉಪಲಬ್ಧಿ (ಸಂಸ್ಕೃತಲೇಖನಸಂಗ್ರಹ)
47. ಧನುರ್ಭಂಗ (ಕನ್ನಡ ಹಾಗೂ ಸಂಸ್ಕೃತದಲ್ಲಿ ವಿಜ್ಞಾನಾಧಾರಿತಕಾದಂಬರಿ)
48. ಸುಮನೋಮಯಂ (ಸಂಸ್ಕೃತಕಾವ್ಯ)

49. ಅನನ್ಯೋಕ್ತಿಃ (ಸಂಸ್ಕೃತಕಾವ್ಯ)
50. ಅಗ್ರಾಮ್ಯಂ (ಸಂಸ್ಕೃತಕಾವ್ಯ)
51. ಶಾಪಶುದ್ಧಾ ಶಕುಂತಲಾ (ಸಂಸ್ಕೃತನಾಟಕ)
52. ವಿಪ್ರಕೀರ್ಣಂ (ಸಂಸ್ಕೃತಕಾವ್ಯ)
53. ಅಭಿನಯಭಾರತಿ (ಮೂರು ಭಾಷೆಗಳಲ್ಲಿ ನೃತ್ಯಕ್ಕಾಗಿ ಗೀತಸಂಯೋಜನೆಗಳು)
54. ಭಾರತೀಯಕಾವ್ಯಮೀಮಾಂಸೆ: ಮರುನೋಟ
55. ಕಾಳಿದಾಸನ ಕಾವ್ಯಸಂಸ್ಕೃತಿ
56. ಅವಧಾನಸಾಹಸ್ರೀ
57. ಗುನುಗು–ಮಿನುಗು
58. ಮೂರು ಸಂಸ್ಕೃತಪ್ರಹಸನಗಳು (ಅನುವಾದ)
59. ಅರ್ಥಶಾಸ್ತ್ರಸಂಗ್ರಹ
60. ಕತೆ–ಕವಿತೆ (ಕಥಾಸಂಗ್ರಹ)
61. ಕಾವ್ಯಚಿತ್ರ: ಚಾಟು–ಚಿತ್ತಾರ
62. ಕರ್ಪೂರಚರಿತಭಾಣ (ಅನುವಾದ)
63. ಕುಮಾರಾನಿರುದ್ಧಪರಿಣಯಂ (ದ್ವಿಸಂಧಾನಕಾವ್ಯ – ಕನ್ನಡದಲ್ಲೇ ಪ್ರಪ್ರಥಮ)
64. ಷಾಣ್ಮತೀಯಂ (ಷಟ್ಸಂಧಾನಸ್ತುತಿಕಾವ್ಯ – ಕನ್ನಡದಲ್ಲೇ ಪ್ರಪ್ರಥಮ)
65. Vedic Wisdom
66. Studies in Indian Culture and Literature

ಡಾ॥ ಆರ್. ಗಣೇಶ್ ಅವರಿಗೆ ಸಂದ ಕೆಲವು ಗೌರವಗಳು

‘ಕಾವ್ಯಕಂಠ’ ಪ್ರಶಸ್ತಿ
‘ಸಂಸ್ಕೃತಭಾರತೀ’ ಸಂಸ್ಥೆಯಿಂದ, 1988

‘ಅವಿಳಂಬಸರಸ್ವತೀ’ ಪ್ರಶಸ್ತಿ
ಮೊದಲನೆಯ ಶತಾವಧಾನದ ಸಂದರ್ಭದಲ್ಲಿ, 1991

ಕನ್ನಡರಾಜ್ಯೋತ್ಸವಪ್ರಶಸ್ತಿ
ಅತ್ಯಂತ ಕಿರಿಯ ವಯಸ್ಸಿನ ಸನ್ಮಾನಿತರು, 1992

ಪ್ರಾಂತೀಯಭಾಷೆಗಳಲ್ಲಿ ಶ್ರೇಷ್ಠವಿಜ್ಞಾನಲೇಖಕಪ್ರಶಸ್ತಿ
ಭಾಭಾ ಅಣುಸಂಶೋಧನ ಕೇಂದ್ರದಿಂದ, 1993

‘ಕುಮಾರಭಾರತೀ’ ಪ್ರಶಸ್ತಿ
ದಾಕ್ಷಿಣಾತ್ಯ ಭಾಷೆಗಳಲ್ಲಿ ಚಿತ್ರಕಾವ್ಯಪರಿಣತಿ ಹಾಗೂ ಅವಧಾನಪ್ರಯೋಗಪರಿಣತಿಗಾಗಿ,
ಮದುರೈ ಕಾಮರಾಜ್ ವಿಶ್ವವಿದ್ಯಾಲಯದಿಂದ, 1994

ಶೃಂಗೇರಿ ವಿದ್ವತ್ಸಮ್ಮಾನೋತ್ಸವ ಪ್ರಶಸ್ತಿ
ಶೃಂಗೇರಿ ಶ್ರೀ ಶಾರದಾಪೀಠ, 1995

‘ಕಾಳಿದಾಸಸರಸ್ವತೀ’ ಪ್ರಶಸ್ತಿ
1996 ರಲ್ಲಿ ಉಜ್ಜಯಿನಿಯ ಕಾಳಿದಾಸ ಅಕಾಡೆಮಿಯು ನಡೆಸಿದ ಕಾಳಿದಾಸ ಸಮಾರೋಹದಲ್ಲಿ
ಆಶುಕಾವ್ಯಪರಿಣತಿಗಾಗಿ

‘ವೇದವಿದ್ಯಾವಿಭೂಷಣ’ ಪ್ರಶಸ್ತಿ
‘ವೇದಧರ್ಮಪರಿಪಾಲನ ಸಭಾ’ದಿಂದ, 2000

ಬಾದರಾಯಣ ವ್ಯಾಸ ಪುರಸ್ಕಾರ್
ರಾಷ್ಟ್ರದ ಅತ್ಯುತ್ತಮಯುವಸಂಸ್ಕೃತವಿದ್ವಾಂಸರಿಗೆ ರಾಷ್ಟ್ರಪತಿಗಳು ನೀಡುವ ಪ್ರಶಸ್ತಿ, 2003

‘ಭಾರತೀಯಕಲಾಚಾರಪಂಡಿತ’ ಪ್ರಶಸ್ತಿ
ಪದ್ಮಭೂಷಣ ಡಾ॥ ಪದ್ಮಾ ಸುಬ್ರಹ್ಮಣ್ಯಂ ಅವರ ‘ನೃತ್ಯೋದಯ’ದಿಂದ, 2004

‘ನಾಟ್ಯಕಲಾಧರ’ ಪ್ರಶಸ್ತಿ
ಚೆನ್ನೈನ ’ಭಾರತ್ ಕಲಾಚಾರ್’ನಿಂದ, 2005

ಸೀನಿಯರ್ ಫೆಲೋಶಿಪ್
ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯಿಂದ ಸಾಹಿತ್ಯ–ನೃತ್ಯ–ಸಂಗೀತಕ್ಷೇತ್ರಗಳ ಸಂಶೋಧಕರಿಗೆ, 2006–08

ಕೆಂಪೇಗೌಡ ಪ್ರಶಸ್ತಿ
ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಿಂದ, 2007

ಶಂಭುಹೆಗಡೆ ಗ್ರಂಥಪ್ರಶಸ್ತಿ
‘ಯಕ್ಷರಾತ್ರಿ’ ಕೃತಿಗಾಗಿ, 2009

‘ಸಾಂಗೀತ್ಯ’ ಪ್ರಶಸ್ತಿ
ಸಂಗೀತ, ನೃತ್ಯ, ಸಾಹಿತ್ಯಗಳಲ್ಲಿಯ ಕೊಡುಗೆಗಾಗಿ ಪುರವಂಕರ ಪ್ರತಿಷ್ಠಾನದಿಂದ, 2009

ಮಿಥಿಕ್ ಸೊಸೈಟಿ ಶತಮಾನೋತ್ಸವ ಪ್ರಶಸ್ತಿ
ಭಾರತೀಯಸಂಸ್ಕೃತಿಯ ಕ್ಷೇತ್ರದ ಸಂಶೋಧನೆಗಾಗಿ, 2009

ಸೇಡಿಯಾಪು ಪ್ರಶಸ್ತಿ
ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಿಂದ, 2010

ರಾಮವಿಠಲಾನುಗ್ರಹ ಪ್ರಶಸ್ತಿ
ಉಡುಪಿಯ ಪೇಜಾವರ ಮಠದಿಂದ, 2010

ಗೌರವ ಡಿ.ಲಿಟ್ ಪ್ರಶಸ್ತಿ,
ತುಮಕೂರು ವಿಶ್ವವಿದ್ಯಾಲಯದಿಂದ, 2010

‘ಚಿತ್ರಭಾನಂದ’ ಪ್ರಶಸ್ತಿ
ಮೈಸೂರಿನ ರಾಜಪರಿವಾರದವರಿಂದ, 2011

ಗೌರವ ಅಭ್ಯಾಗತ–ಪ್ರಾಚಾರ್ಯ ಪದವಿ,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ, 2012


ಮಾಲಿನ್ಯವನ್ನು ತಡೆಗಟ್ಟೋಣ
ಮಳೆನೀರು ಕೊಯ್ಲು, ಅಂತರ್ಜಲ ಮರುಪೂರಣ ಮಾಡೋಣ
ಕಾರ್ ಪೂಲಿಂಗ್, ಸಾರ್ವಜನಿಕ ಸಾರಿಗೆ ಹೆಚ್ಚಾಗಿ ಬಳಸುವ ಮೂಲಕ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಹಕರಿಸೋಣ
ಮರಗಿಡಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸೋಣ
ಸೌರಶಕ್ತಿ, ಗಾಳಿ ಶಕ್ತಿ ಮುಂತಾದ ಪುನರ್ಬಳಕೆ ಮಾಡಬಹುದಾದ ಸಂಪನ್ಮೂಲಗಳನ್ನು ಬಳಸೋಣ
ಸುಸ್ಥಿರ ಜೀವನಶೈಲಿಗೆ ಕಂಕಣಬದ್ಧರಾಗೋಣ
STOP POLLUTING
ಜೀವನಶೈಲಿ ಸರಳವಾಗಿರಲಿ
ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಣೆ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
'ಪರಿಸರ ಭವನ', ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001.
ಫೋನ್ : 080-2558 1383, 2558 9112 ಇ-ಮೇಲ್: kspcb@kar.nic.in ವೆಬ್‌ಸೈಟ್: www.kspcb.kar.nic.in
ಮಾಲಿನ್ಯದ ವಿರುದ್ಧ ನಮ್ಮ ಹೋರಾಟದಲ್ಲಿ ಪಾಲ್ಗೊಳ್ಳಿ

ಮೊತ್ತಮೊದಲ ತುಂಬುಗನ್ನಡದ

ಶತಾವಧಾನವು

ವಿಜೃಂಭಣೆಯಿಂದ ನಡೆದು, ಯಶಸ್ವಿಯಾಗಲೆಂದು

ಹಾರೈಸುವ ಹಾಗೂ ಅವಧಾನರಸಿಕರಿಗೆ

ತುಂಬುಹೃದಯದ ಸ್ವಾಗತವನ್ನು ಕೋರುವ,

ಅಭಿನವ ಡಾನ್ಸ್ ಕಂಪನಿ

ನಂ. 66, ಜೈನ ದೇವಸ್ಥಾನದ ರಸ್ತೆ, ವಿ.ವಿ. ಪುರಂ

ಬೆಂಗಳೂರು – 560004

ದೂರವಾಣಿ: +91 080 26676500

ಮಿಂಚಂಚೆ: info@abhinavadancecompany.com

ಜಾಲತಾಣ: www.abhinavadancecompany.com

ಮೊತ್ತಮೊದಲ ತುಂಬುಗನ್ನಡದ

ಶತಾವಧಾನವು

ವಿಜೃಂಭಣೆಯಿಂದ ನಡೆದು, ಯಶಸ್ವಿಯಾಗಲೆಂದು

ಹಾರೈಸುವ ಹಾಗೂ ಅವಧಾನರಸಿಕರಿಗೆ

ತುಂಬುಹೃದಯದ ಸ್ವಾಗತವನ್ನು ಕೋರುವ,

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್

ಎನ್.ಎಮ್.ಕೆ.ಆರ್.ವಿ. ಮಹಿಳಾ ಮಹಾವಿದ್ಯಾಲಯ

3ನೇ ಬ್ಲಾಕ್, ಜಯನಗರ, ಬೆಂಗಳೂರು - 560011

ದೂರವಾಣಿ: +9180-26637042.

ಮಿಂಚಂಚೆ: nmkrvcollege@gmail.com

ಜಾಲತಾಣ: www.rsst-nmkrvcollege.net/

ಮೊತ್ತಮೊದಲ ತುಂಬುಗನ್ನಡದ

ಶತಾವಧಾನವು

ವಿಜೃಂಭಣೆಯಿಂದ ನಡೆದು, ಯಶಸ್ವಿಯಾಗಲೆಂದು

ಹಾರೈಸುವ ಹಾಗೂ ಅವಧಾನರಸಿಕರಿಗೆ

ತುಂಬುಹೃದಯದ ಸ್ವಾಗತವನ್ನು ಕೋರುವ,

ಧಾತು

ನಂ. 3944/ಎಫ್, 17ನೇ 'ಡಿ' ಅಡ್ಡರಸ್ತೆ, 4ನೇ ಮುಖ್ಯರಸ್ತೆ

ಬನಶಂಕರಿ 2ನೇ ಹಂತ, ಬೆಂಗಳೂರು - 560 070

ದೂರವಾಣಿ: +91-80-65683396

ಮಿಂಚಂಚೆ: dhaatu@gmail.com

ಜಾಲತಾಣ: www.dhaatu.org

ಮೊತ್ತಮೊದಲ ತುಂಬುಗನ್ನಡದ

ಶತಾವಧಾನವು

ವಿಜೃಂಭಣೆಯಿಂದ ನಡೆದು, ಯಶಸ್ವಿಯಾಗಲೆಂದು

ಹಾರೈಸುವ ಹಾಗೂ ಅವಧಾನರಸಿಕರಿಗೆ

ತುಂಬುಹೃದಯದ ಸ್ವಾಗತವನ್ನು ಕೋರುವ,

ಇನ್ಫೋಸಿಸ್ ಫೌಂಡೇಷನ್

ಇನ್ಫೋಸಿಸ್ ಟವರ್ಸ್, ನಂ. 27, ಜೆ.ಪಿ. ನಗರ, 3ನೇ ಹಂತ

ಬನ್ನೇರುಘಟ್ಟ ಮುಖ್ಯರಸ್ತೆ

ಬೆಂಗಳೂರು – 560076. ದೂರವಾಣಿ: +9180–41032515

ಮಿಂಚಂಚೆ: foundation@infosys.com

ಜಾಲತಾಣ: www.infosys.com/infosys_foundation/

“ಸುಮಾರು ಹದಿನೈದು ವರ್ಷಗಳ ಹಿಂದೆ ಶತಾವಧಾನಿ ಡಾ॥ ರಾ. ಗಣೇಶ್ ಅವರನ್ನು ಕುರಿತು ಒಂದು ಸಂದರ್ಭದಲ್ಲಿ ಮಾತನಾಡುವಾಗ ಅವರನ್ನು 'ವಿದ್ವಲ್ಲೋಕದ ವಿಸ್ಮಯ' ಎಂದು ವರ್ಣಿಸಿದ್ದೆ. ಅದೇಕೋ ಈ ವರ್ಣನೆ ನೆಲೆನಿಂತು ಆಗಿಂದಾಗ ಬಳಕೆಯಾಗುತ್ತ ಬಂದಿದೆ. ಈ ವರ್ಣನೆಯೇನೋ ಸಮುಚಿತವೇ. ಆದರೆ ಗಣೇಶ್ ಅವರ ವ್ಯಕ್ತಿತ್ವಕ್ಕೆ ವಿದ್ವತ್ತನ್ನು ಮೀರುವ ಆಯಾಮಗಳಿವೆ. ವಿದ್ವತ್ತೆ ಅವರಿಗೆ ನಮ್ಮ ಸಂಸ್ಕೃತಿಯ ಹೃದಯವನ್ನು ಪ್ರಕಾಶಪಡಿಸುವ ಸಾಧನವಾಗಿ ಒದಗಿಬಂದಿದೆ. ಸಂಸ್ಕೃತಿಯ ಪ್ರತಿಪಾದಕರಾಗಿಯೂ ಸಮರ್ಥಕರಾಗಿಯೂ ವಿಕೃತಿಪ್ರಸರಣಪ್ರಯಾಸಗಳ ವಿರುದ್ಧ ತಡೆಗೋಡೆಯಾಗಿಯೂ, ವಿವಿಧ ಬಗೆಗಳಲ್ಲಿ ಸಮಾಜದಲ್ಲಿ ಸದಭಿರುಚಿಯ ಪೋಷಣೆ–ವರ್ಧನೆಗಾಗಿಯೂ ಅವರು ಸತತ ಪ್ರಯತ್ನಶೀಲರಾಗಿದ್ದಾರೆ. ಈ ದೆಸೆಯಲ್ಲಿ ಇಷ್ಟು ವ್ಯಾಪಕವಾದ ಮತ್ತು ಮೇಲ್ಮಟ್ಟದ ಕೈಂಕರ್ಯ ಸಲ್ಲಿಸುತ್ತಿರುವವರು ಬಹುಶಃ ನಮ್ಮ ನಡುವೆ ಬೇರೊಬ್ಬರಿಲ್ಲ. ಗಣೇಶ್ ಅವರು ಗಳಿಸಿಕೊಂಡಿರುವ ವ್ಯುತ್ಪತ್ತಿ, ಅವರು ಬೆಳಸಿಕೊಂಡಿರುವ ಸಮಾಜಹಿತಸಾಧನಾಕಾಂಕ್ಷೆ – ಎರಡಕ್ಕೂ ನಮ್ಮ ನಮನ ಸಲ್ಲಬೇಕಾಗುತ್ತದೆ.”

– ಡಾ॥ ಎಸ್. ಆರ್. ರಾಮಸ್ವಾಮಿ.
ಗೌರವಕಾರ್ಯದರ್ಶಿಗಳು,
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಮತ್ತು
ಉತ್ಥಾನ ಮಾಸಪತ್ರಿಕೆಯ ಪ್ರಧಾನ ಸಂಪಾದಕರು